Sri D. M. SIDDAIAH (Biligere).—The silk industry in the State is almost the monopoly of the State and on it depend more than two lakhs of people of our State. Unless foreign silk is banned in our country, the silk industry cannot thrive. What is the attitude of the Central Silk Board? Do they want to kill the industry or try to help it to exist?

Sri K. MALLAPPA.—The Central Silk Board is there to help the industry and not to kill it. The Central Silk Board has made a recommendation to the Central Government either to raise the price of imported silk above the cost of production of indigenous silk or to purchase our silk at our cost of production.

ಶ್ರೀ ಡಿ. ವೆಂಕಟರಾಮಯ್ಯ (ಕೋಲಾರ).—ಸ್ವಾಮಿ, ಕೋಲಾರದ ಚಿನ್ನದ ಗಣಿಗಳನ್ನು ನಡೆಸುವ ವಿಚಾರದಲ್ಲಿ, ಇಂಡಿಯಾ ಸರ್ಕಾರದಿಂದ ಸಬ್‌ಸಿಡಿ ಇಲ್ಲದೇ ಹೋದರೆ ನಮಗೆ ನಷ್ಟವಾಗುತ್ತದೆ; ಆದಕಾರಣ ಗಣಿಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತೇವೆಂದು ಹೇಳಿದರು. ಅಲ್ಲಿ ಹೊಸದಾಗಿ ಚಿನ್ನದ ಅದುರನ್ನು ಕಂಡು ಹಿಡಿದ ಮೇಲೆ ಹೆಚ್ಚು ಲಾಭ ಬರುತ್ತಿದೆ ಎಂದು ಸರ್ಕಾರಕ್ಕೆ ವರದಿ ಬಂದಿದೆಯಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಅಂಥ ವರದಿ ಯಾವುದೂ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೋಲಾರದ ಚಿನ್ನದ ಗಣಿಯನ್ನು ಕೇಂದ್ರಕ್ಕೆ ವಹಿಸಬೇಕು, ನಷ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ಪದೇಪದೇ ಉತ್ತರ ಹೇಳುವಾಗ ತಿಳಿಸುತ್ತಿದ್ದೀರಿ. ಒಟ್ಟಿಗೆ ಸೇರಿ ಏಕೆ ಕೆಲಸ ಮಾಡಬಾರದು ?

Sri K. MALLAPPA.--If the Government of India agrees, there is no objection. It is not likely that the Government of India will agree to it. The Government of India wants to work the mines as a Departmental concern with a wiew to avoid the subsidy element.

ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಈ ಸಭೆಯ ಅಭಿಪ್ರಾಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ವಹಿಸುತ್ತೀರಾ ?

Sri K. MALLAPPA.—Negotiations are going on. Interpellations in that behalf have been put in this House and replied also.

Sri G. V. GOWDA.—After the transfer is finalised, is the Government of India going to pay any royalty every year to the State Government and if so, what is the amount ?

Sri K. MALLAPPA.—They will have to pay royalty under the Minerals Act.

Sri V. LAKKAPPA (Hebbur).—The Hon'ble Minister did not say anything about decentralisation of industries in Mysore State ?

Sri K. MALLAPPA.—I do not understand what he means by decentralisation of industries.

Sri K. RAJAGOPAL (Kolar Gold Fields).—Long ago when the present Finance Minister was the Chief Minister, he said that an Industrial Estate had been sanctioned for K. G. F. So far, no action has been taken.

Sri K. MALLAPPA.—It is one of the places listed for establishing Industrial Estates. We will take it up in due course.

ಶ್ರೀ ಎಸ್. ಶಿವಪ್ಪ.—ಕೋಲಾರದ ಚಿನ್ನದ ಗಣಿಯನ್ನು ಕೇಂದ್ರಸರಕಾರಕ್ಕೆ ವಹಿಸುವುದಕ್ಕೆ ಮುಂಚೆ ಶಾಸನಸಭೆಯ ಒಪ್ಪಿಗೆ ಪಡೆಯಬೇಡವೆ ? ಈಗ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದೆಯೆಂದು ಹೇಳಿದರು...

Mr. SPEAKER.—The Hon'ble the Leader of the Opposition will recollect that this point was mooted by him and answered by the Finance Minister. Are we to forget that we have dealt with it and repeat it ? I can show from the proceedings the reply given by the Finance Minister.

Sri B. D. JATTI.—The Hon'ble the Leader of the Opposition knows it.

Sri S. SIVAPPA.—The Finance Minister did not say anything about Cabinet decision. This information came from the Industries Minister. So, we want to know how the Cabinet took the decision without the consent of the House.

Sri K. MALLAPPA.—Under those circumstances, the Government could not do anything else.

Mr. SPEAKER.—In there any provision which says that the consent of the House has to be taken before the Cabinet decides ? Can the power of the Cabinet be taken away by the House ?

Sri K. MALLAPPA.—The power of the House is there. Questions have been asked, the matter has been discussed and Government has replied. We have taken the sense of the House into consideration.

Sri ALLUM KARIBASAPPA.-(Kurugodu).—There was a proposal to start a ferro-manganese plant in Bellary

District. I want to know whether the Sandur Manganese Mines Co., Private Ltd., has taken up that scheme. Further, is it a fact that there was a conditional agreement between that Company and the Government of Mysore?

Sri K. MALLAPPA.—The Sandur Manganese Mines Co., Private Ltd., is given twenty nine square miles of area for manganese exploitation. One of the conditions of the lease is to start a ferro-manganese plant there. It has not started the plant and now the terms of the lease are being examined.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿ ಕಾಗದದ ಕಾರ್ಖಾನೆಯಲ್ಲಿ ದಿನೇ ದಿನೇ ಉತ್ಪತ್ತಿ ಕಡಮೆಯಾಗುತ್ತಿದೆ. ಎಲ್ಲಿ ದೋಷವಿದೆ, ಏಕೆ ಕಡಮೆಯಾಗುತ್ತಿದೆ ಎಂದು ನೋಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಅಲ್ಲಿ ಕಡಮೆಯಾಗುವ ಪ್ರಸಂಗವೇ ಇಲ್ಲ, ತಾವು ಹೇಳುವುದನ್ನು ಒಪ್ಪುವುದಿಲ್ಲ. ಮಾನ್ಯ ಸದಸ್ಯರು ಯಾವ ಆಧಾರದ ಮೇಲೆ ಕಡಮೆಯಾಗುತ್ತಿದೆಯೆಂದು ಹೇಳಿದರೋ ಗೊತ್ತಿಲ್ಲ. ದಿನೇ ದಿನೇ ಉತ್ಪತ್ತಿ ಹೆಚ್ಚುತ್ತಿದೆ. ಇನ್ನೂ ಅದನ್ನು ಜಾಸ್ತಿ ಮಾಡಬೇಕೆಂದು ಕಾರ್ಯಕ್ರಮವಿದೆ. ಇದನ್ನು ಹೇಳಿದ್ದೇನೆ.

Mr. SPEAKER.—The question is:

"That a sum not exceeding the amount shown in the list of Demand circulated to members be granted to defray the charges which will come in course of payment during the financial year for the period ending 31st day of March 1963 in respect of Demands Nos. 24, 28 and 44.

The motion was adopted.

[*As directed by the Speaker the demands for Grants which were adopted by the House are reproduced below.*]

DEMAND No. 24.
INDUSTRIES INCLUDING SERICULTURE.

35. *Industries.*

"That a sum not exceeding Rs. 22,32,71,800 be granted to the Government to defray the charges which will come in course of payment during the financial year for the period ending 31st day of March 1963, in respect of 'Industries'."

DEMAND No. 28.
CAPITAL OUTLAY ON INDUSTRIAL DEVELOPMENT.

40. *Capital Outlay on Industrial Development.*

"That a sum not exceeding Rs. 37,500 be granted to the Government to defray the charges which will come in course of payment during the financial year for the period ending 31st day of March 1963, in respect of 'Capital outlay on Industrial Development'."

DEMAND No. 44.

96. *Capital Outlay on Industrial Development.*

"That a sum not exceeding Rs. 5,66,43,700 be granted to the Government to defray the charges which will come in course of payment during the financial year for the period ending 31st day of March 1963, in respect of 'Capita Outlay on Industrial Development'."

DEMAND No. 15.
MISCELLANEOUS DEPARTMENTS.

26. *Miscellaneous Departments.*

Sri M. V. KRISHNAPPA (Minister for Revenue).—Sir, on the recommendation of the Governor of Mysore, I beg to move:

"That a sum not exeeding Rs. 78,12,800 be granted to the Government to defray the charges which will come in course of payment during the financial year for the period ending 31st day of March 1962, in respect of 'Miscellaneous Departments'."

Mr. SPEAKER.—Motion moved :

"That a sum not exeeding Rs. 78,12,800 be granted to the Government to defray the charges which will come in course of payment during the financial year for the period ending 31st day of March 1963, in respect of Miscellaneous Departments'."

Not only this demand but also demands Nos. 4, 16, 14, 26, 27, 23, 34, 35, 36, 37, 39, 41, 40, 52, 53 and 54 are also before the House. The cut motions have been circulated. The Chair suggests that not more than 10 minutes should be taken by any of the members because the Chair wants as many members as possible to take part in the debate. How much time will be required by the Hon'ble Ministers ?

Sri B. D. JATTI.—One and half hours.

Mr. SPEAKER.—So, the debate will go on till Six O'clock.

Sri C. J. MUKKANNAPPA.—We may sit till 8.00 P.M. and take some time tomorrow also.

Mr. SPEAKER.—Unless this is over, the Appropriation Bill cannot be printed and introduced. If both sections agree to sit till 8 p.m. today, The Chair has no objection. (Taking the sense of the House) The sense of the House is that we should sit till 7-30 p.m. today.

*ಶ್ರೀ ಅಂಗಡಿ ಚನ್ನಬಸಪ್ಪ (ಹಡಗಲಿ).—ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡಿನಮೇಲೆ ಮಾತನಾಡುತ್ತಾ, ನಾನು ಅಂಕಿ ಅಂಶಗಳಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವು ತತ್ವಗಳಮೇಲೆ ಮಾತನಾಡಿ ಕೆಲವು ಸಲಹೆಗಳನ್ನು ಸರ್ಕಾರದವರ ಮುಂದೆ ಇಡಬೇಕೆಂದು ಇಷ್ಟಪಡುತ್ತೇನೆ.

ನಮ್ಮ ದೇಶದಲ್ಲಿ ಸಹಕಾರ ವಿಷಯ ಬಹಳ ದಿವಸಗಳಿಂದ ಬೆಳೆದುಬಂದಿದೆ. ಇನ್ನೂ ಬೆಳೆಯುತ್ತಿದೆ. ಆದರೆ, ನನಗೆ ಒಂದು ನಿದರ್ಶನ ಬಂದಿದೆ; ಆ ವಿಷಯವನ್ನು ತಮ್ಮ ದ್ವಾರಾ ಈ ಸಭೆಯಮುಂದಿಡಬೇಕೆಂದು ನಾನು ನಿಂತಿದ್ದೇನೆ. ಏನೆಂದರೆ, ಕಾಂಗ್ರೆಸ್ ಸರ್ಕಾರದಮೇಲೆ ನನ್ನ ಒಂದು ಆರೋಪಣೆಯಿದೆ. ಈ ಸರ್ಕಾರ ಸಹಕಾರ ಸಂಸ್ಥೆಯನ್ನು ಕೇವಲ ತಮ್ಮ ಕಾಂಗ್ರೆಸ್‌ಪಕ್ಷದ ಬೆಳವಣಿಗೆಗಾಗಿ ಉಪಯೋಗಿಸಿಕೊಳ್ಳುತ್ತಿದೆ. ಸರ್ಕಾರದವರು State Partnership ಸೊಸೈಟಿಗಳಲ್ಲಿರಬೇಕೆಂದು ಹೇಳಿ ಎಲ್ಲಾ ಸೊಸೈಟಿಗಳಿಂದಲೂ ಅರ್ಜಿ ಬರಮಾಡಿಕೊಂಡು ಷೇರಿನ allotment ಮಾಡುತ್ತಾರೆ. ಈ ಪ್ರಕಾರ ಸೊಸೈಟಿಗಳಿಗೆ ಡೈರೆಕ್ಟರುಗಳನ್ನು ನಾಮಿನೇಟ್ ಮಾಡುವುದಕ್ಕೆ ಅಧಿಕಾರ ಬಂತೆಂದು ಹೇಳಿ, ಎಲ್ಲಾ ಸೊಸೈಟಿಗಳಿಗೂ ಇಬ್ಬರು ಮೂವರು ಡೈರೆಕ್ಟರುಗಳನ್ನು ನಾಮಿನೇಟ್‌ಮಾಡುತ್ತಾರೆ, ಆದರೆ ಇವರು ನಾಮಿನೇಟ್‌ಮಾಡುವ ಡೈರೆಕ್ಟರುಗಳು ಎಂಥವರೆಂಬುದನ್ನು ನಾನು ನೋಡಿದ್ದೇನೆ. ಅವರಲ್ಲನೇಕರಿಗೆ ಸಹಕಾರದ ಸಂಘಗಳ ವಿಷಯದಲ್ಲಿ ಯಾವ ತಿಳಿವಳಿಕೆಯೂ ಇರುವುದಿಲ್ಲ. ಜೊತೆಗೆ ಸಹಕಾರ ತತ್ವವನ್ನು ಸರಿಯಾಗಿ ತಿಳಿದುಕೊಂಡು ಅದನ್ನು ನಡೆಸಬೇಕೆಂಬ ಆಕಾಂಕ್ಷೆಯುಳ್ಳವರೂ ಆಗಿಲ್ಲ. ಏನೋ ತಮ್ಮ ಪಕ್ಷದ ಜನರು ಈ ಸಂಘ ಸಂಸ್ಥೆಗಳಲ್ಲಿದ್ದರೆ, ಈ ಸಂಸ್ಥೆಗಳ ಅಧಿಕಾರ ತಮ್ಮ ಕೈಯಲ್ಲಿರುತ್ತದೆಂಬ ಇರಾದೆಯುಳ್ಳವರಾಗಿ ಈ ರೀತಿ ತಮಗೆ ಬೇಕಾದ ಪಕ್ಷದ ಜನರನ್ನು ನಾಮಿನೇಟ್ ಮಾಡುತ್ತಾರೆ. ಆದ್ದರಿಂದ ಮೊಟ್ಟಮೊದಲನೆಯದಾಗಿ ಹೀಗೆ ತಮ್ಮ ಪಕ್ಷದವರನ್ನು ನಾಮಿನೇಟ್ ಮಾಡುವ ಪದ್ಧತಿಯನ್ನು ಬಿಟ್ಟುಬಿಡಬೇಕೆಂದು ನಾನು ಹೇಳುತ್ತೇನೆ.

ಹಾಗೆಂದಮೇಲೆ ಒಂದು ಪ್ರಶ್ನೆಬರುತ್ತದೆ. ಎಂಥ ಸದಸ್ಯರುಗಳನ್ನು ನಾಮಕರಣ ಮಾಡಬೇಕು ಎಂದು. ನನ್ನ ಅಭಿಪ್ರಾಯದಲ್ಲಿ ಯಾವ ರಾಜಕೀಯ ಪಕ್ಷಕ್ಕೂ ಸೇರದಿರುವಂಥ ಜನರುಮಾತ್ರ ಇಂಥ ಸೊಸೈಟಿ, ಸಂಘ ಸಂಸ್ಥೆಗಳನ್ನು ನಡೆಸತಕ್ಕ ಅಧಿಕಾರ ಹೊಂದಿರಬೇಕು. ಈ ಬಗ್ಗೆ ಒಂದು ಕಾನೂನನ್ನುಕೂಡ ಈ ಸಭೆ ಮಾಡಬೇಕೆಂದು ಹೇಳುತ್ತೇನೆ. ಯಾವ ರಾಜಕೀಯ ಪಕ್ಷವೇ ಆಗಲಿ ಈ ಸಹಕಾರ ಸಂಸ್ಥೆಗಳನ್ನು ತಮ್ಮ ಪಕ್ಷದ ಉದ್ದೇಶ ಸಾಧನೆಗಾಗಿ ಉಪಯೋಗಿಸಿಕೊಳ್ಳಕೂಡದೆಂದು ನಾನು ಸಲಹೆಮಾಡುತ್ತೇನೆ. ಈ ಸಂದರ್ಭದಲ್ಲಿ ಬೊಂಬಾಯಿನಲ್ಲಿ ಸಹಕಾರ ಸಂಗದಲ್ಲಿ ಕೆಲಸಮಾಡುತ್ತ ನಾಜಂ ಎಂಬ ಮಹಾನುಭಾವರಿದ್ದರು. ಅವರಿಗೆ ಸರ್ಕಾರದವರು ಹೆಚ್ಚಿನ ಅಧಿಕಾರಕೊಡುತ್ತೇವೆ ತಮ್ಮ ಪಕ್ಷಕ್ಕೆ ಬನ್ನಿರೆಂದು ಹೇಳಿದರೂ ಒಪ್ಪದೆ, ತಾವು ಸಹಕಾರ ಸಂಸ್ಥೆಯಲ್ಲಿದ್ದು ಯಾವ ಪಕ್ಷಕ್ಕೂ ಸೇರಲಿಷ್ಟಪಡುವುದಿಲ್ಲವೆಂದು ಹೇಳಿದರು. ಅವರು ಹಾಕಿಕೊಟ್ಟಿರುವ ಧ್ಯೇಯವನ್ನು ನಾವು ಅನುಸರಿಸಬೇಕು.

ರಾಜಕೀಯವಾಗಿ ಈ ಸೊಸೈಟಿ, ಸಹಕಾರ ಸಂಸ್ಥೆಗಳನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾರೆಂಬದಕ್ಕೆ ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ತಾವೀಗ ಕಾನೂನು ಮಾಡಿದ್ದೀರಿ. ಒಂದೊಂದು ಗ್ರೂಪ್ ಪಂಚಾಯ್ತಿ ಹಳ್ಳಿಗೂ ಒಂದು ಸೊಸೈಟಿ ಇರಬೇಕು ಎಂದು. ಈ ಸೊಸೈಟಿಗಳಲ್ಲಿ ಒಂದು ಪಕ್ಷದ ಜನರು ಸೇರಿಕೊಂಡು ಇದ್ದ ಹಣವನ್ನೆಲ್ಲಾ ದಿವಾಳಿ ಎಬ್ಬಿಸಿಬಿಡುತ್ತಾರೆ. ಆಮೇಲೆ ಅಂಥ ಸೊಸೈಟಿಯಿದ್ದರೆ ಏನೂ ಹಣ ಹುಟ್ಟುವುದಿಲ್ಲವೆಂದು ಹಳ್ಳಿಯಲ್ಲಿ ಇನ್ನೊಂದು ಸೊಸೈಟಿಯನ್ನು ಪ್ರಾರಂಭಿಸುವಂತೆ ಇನ್ನೂ ಕೆಲವು ಪಾರ್ಟಿ ಜನರಿಗೆ ಹೇಳಿ ಪ್ರಾರಂಭಿಸುತ್ತೀರಿ. ಮೊದಲಿದ್ದ ಸೊಸೈಟಿ ಕೆಲಸ ಮಾಡದೆಇದ್ದರೆ ಏಕೆ ಕೆಲಸ ಮಾಡಲಿಲ್ಲ; ಅದರಲ್ಲಾಗಿರುವ ಲೋಪದೋಷಕ್ಕೆ ಕಾರಣರು ಯಾರು ಎಂದು ಕಂಡುಹಿಡಿಯುವವರೇ ಇಲ್ಲ ! ಈ ರೀತಿ ಬೇರೊಂದು ಸೊಸೈಟಿಯನ್ನು ಷುರು ಮಾಡಕೂಡದು. ಮೊದಲಿನ ಸೊಸೈಟಿಯನ್ನು ತನಿಖೆ ನಡೆಸುವ ಕಾರ್ಯಕ್ರಮ ತೆಗೆದುಕೊಂಡು, ಅದನ್ನೇ ಸರಿಪಡಿಸುವ ವ್ಯವಸ್ಥೆಮಾಡದೆ ಬೇರೊಂದು ಸೊಸೈಟಿ ಮಾಡುವುದರಿಂದ ಜನರಿಗೆ ಯಾವ ರೀತಿಯ ಅನುಕೂಲವನ್ನೂ ಮಾಡಿದಂತಾಗುವುದಿಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಬೇಕು. ಈಗ ಹೊಸದಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೋ-ಆಪರೇಟಿವ್ ಯೂನಿಯನ್‌ಗಳಿಂದ ಮಾಡುತ್ತಾ ಬಂದಿದ್ದಾರೆ. ಅದಕ್ಕೆ ತಾವು ಸದಸ್ಯರುಗಳನ್ನು ನಾಮಿನೇಷನ್ ಮಾಡುತ್ತಿದ್ದೀರೆಂದು ಗೊತ್ತಾಗಿದೆ. ಆದರೆ, ಈ ಬಗ್ಗೆ ಸರಿಯಾದ ಬೈಲಾಗಳು ಎಲ್ಲೂ ರಚಿತವಾಗಿಲ್ಲ. ಇದರಿಂದ ಕೆಲವು ತಾಲ್ಲೂಕುಗಳಿಂದ ಹೆಚ್ಚಿಗೆ ಪ್ರತಿನಿಧಿಗಳು, ಇನ್ನು ಕೆಲವು ತಾಲ್ಲೂಕುಗಳಿಂದ ಪ್ರತಿನಿಧಿಗಳು ಯಾರೂ ಇಲ್ಲದಿರುವುದು ಇಂಥ ಪ್ರಸಂಗ ಬಂದಿದೆ. ನಮ್ಮ ಬಳ್ಳಾರಿ ಜಿಲ್ಲೆಯ ಬಗ್ಗೆಯೇ ಹೇಳುವುದಾದರೆ, ಈವತ್ತಿನವರೆಗೂ ಆ ಯೂನಿಯನ್ನಿಗೆ ಯಾರನ್ನೂ ನಾಮಿನೇಟ್ ಮಾಡಿಲ್ಲ. ಅದನ್ನು ಯಾರು ಮಾಡಿದರೋ, ತಮ್ಮನ್ನು ತಾವೇ ನೇಮಕ ಮಾಡಿಕೊಂಡರೋ ಒಂದೂ ಗೊತ್ತಿಲ್ಲ. ಈ ಬಗ್ಗೆ ಸರ್ಕಾರದವರು ವಿಷಯವನ್ನು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ತಾವು ಈ ಸಹಕಾರ ಸಂಸ್ಥೆಗಳಿಗೆ ಒಂದೊಂದು ಹಳ್ಳಿಯಲ್ಲಿರುವುದಕ್ಕೂ, "Managerial Cost", ಎಂದು ಹೇಳಿ ಸ್ವಲ್ಪ ಹಣ ಕೊಡುತ್ತಿದ್ದೀರಿ. ಈ ಹಣ ಅವರಿಗೆ ಕೊಡುವುದೂ ಒಂದೇ, ಸಮುದ್ರಕ್ಕೆ ಹಾಕುವುದೂ ಒಂದೇ. ಏಕೆಂದರೆ, ತಾವು ಕೊಡತಕ್ಕ ಹಣದಿಂದ ಆ ಸಂಸ್ಥೆಯು ಕಾವಲಿಗಾಗಿ ಒಬ್ಬ ಜವಾನನನ್ನೂ ಇಟ್ಟುಕೊಳ್ಳುವಹಾಗಿಲ್ಲ. ಆದ್ದರಿಂದ ಬೇರೆ ಯಾರೋ ಸುಳ್ಳು ರಸೀತಿಕೊಟ್ಟು ಈ ಹಣವನ್ನು ಡ್ರಾ ಮಾಡಿಬಿಡುತ್ತಾರೆ. ನಿಜವಾಗಿ ಕೆಲಸ ಮಾಡುವವನಿಗೆ ಸಿಕ್ಕುವುದೇ ಇಲ್ಲ.

ಮತ್ತೊಂದು ವಿಷಯ. ತಾವು ಅನೇಕ ಸಹಕಾರ ಸಂಸ್ಥೆಗಳಿಗೆ ಜಾಮೀನಾಗಿ ಕೋಟ್ಯಾಂತರ ರೂಪಾಯಿಗಳನ್ನು ರಿಸರ್ವ್ ಬ್ಯಾಂಕಿನಿಂದ ಸಾಲ ಕೊಡಿಸಿದ್ದೀರಿ. ಆದರೆ ಸಾಲ ತೆಗೆದುಕೊಂಡ ಸೊಸೈಟಿಗಳು ಸಾಲವನ್ನು ಸರಿಯಾಗಿ ತೀರಿಸುತ್ತಿಲ್ಲ. ರಿಸರ್ವ್ ಬ್ಯಾಂಕಿನವರು ಅವರನ್ನು ಪದೇಪದೇ ಕೇಳುತ್ತಿದ್ದಾರೆ. ಏಕೆ ಸೊಸೈಟಿಗಳು ಈ ಬಗ್ಗೆ ಸರಿಯಾಗಿ ನಡೆದುಕೊಳ್ಳುತ್ತಿಲ್ಲವೋ ಒಂದೂ ಸ್ಪಷ್ಟವಾಗಿ ಗೊತ್ತಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಸಹಕಾರ ಸಂಘಗಳಿಗೆ ಕೊಟ್ಟಂಥ ಹಣವನ್ನೂ ಸೊಸೈಟಿಯವರು ಸ್ವಂತ ಉಪಯೋಗಕ್ಕೆ ಬಳಸಿಕೊಂಡಿರುತ್ತಾರೆ. ಯಾರಿಗಾಗಿ ಹಣ ಕೊಟ್ಟಿರುತ್ತೀರೋ ಆ ಮನುಷ್ಯನಿಗೆ ಸರಿಯಾಗಿ ತಲಪಿರುತ್ತದೆಯೋ ಇಲ್ಲವೋ ಅನುಮಾನ. ಇಂಥ ಸನ್ನಿವೇಶದಲ್ಲಿ ಸಹಕಾರಿ ವಿಷಯದ ತಜ್ಞರನ್ನು ಬೇರೆ ರಾಜ್ಯದಿಂದ ಕರೆಸಿಕೊಂಡು ಅವರ ಸಹಾಯಕ್ಕಾಗಿ ಒಂದು ಕಮಿಟಿಯನ್ನು ರಚಿಸಿ ಈ ಸೊಸೈಟಿಗಳ ಬಗ್ಗೆ ಒಂದು ಸರಿಯಾದ ಎಂಕ್ವೈರಿಯನ್ನು ನಡೆಸಬೇಕೆಂದು ಹೇಳುತ್ತೇನೆ. ಅನೇಕ ಸಹಕಾರ ಸಂಘಗಳ ಪರಿಸ್ಥಿತಿಯನ್ನು ನೋಡಿ ನಾನಿದನ್ನು ಹೇಳುತ್ತಿದ್ದೇನೆ. ನನಗಂತೂ ಅವುಗಳ ವಿಷಯದಲ್ಲಿ ಬಹಳ ಅನುಮಾನವಿದೆ. ನೀವು ಕೊಟ್ಟ ದುಡ್ಡನ್ನು ಸರಿಯಾಗಿ ಉಪಯೋಗಮಾಡುತ್ತಿಲ್ಲ. ಅವುಗಳ ಆಡಳಿತ ಕೂಡ ಚೆನ್ನಾಗಿಲ್ಲ. ಇದುವರೆಗೂ ಅವುಗಳ ಆಡಳಿತವನ್ನು ಸರಿಪಡಿಸುವುದಕ್ಕೆ ಯಾವ ಕಾರ್ಯಕ್ರಮವನ್ನೂ ಸರ್ಕಾರದವರು ಕೈಕೊಂಡಿಲ್ಲ. ಆದ್ದರಿಂದ ದಯವಿಟ್ಟು ಒಬ್ಬ ಸಹಕಾರಿ ತಜ್ಞರ ಸಹಾಯವನ್ನು ಪಡೆದು ನಮ್ಮ ಸಹಕಾರ ಸಂಸ್ಥೆಗಳು ಈಗ ಯಾವರೀತಿ ಕೆಲಸ ಮಾಡುತ್ತಿವೆ, ಮುಂದೆ ಅವು ತಮ್ಮ ದುಡಿಮೆಯನ್ನು ಯಾವರೀತಿ ಉತ್ತಮಪಡಿಸಿಕೊಳ್ಳಬಹುದು ಎಂಬ ಬಗ್ಗೆ ಸಲಹೆ ಮಾಡಬೇಕೆಂದು ಹೇಳಿ ಒಂದು ಕಮಿಟಿಯನ್ನು ನೇಮಕಮಾಡಬೇಕೆಂದು ಹೇಳುತ್ತೇನೆ.

ಸಹಕಾರ ಸಂಘಗಳಲ್ಲಿ ಒಂದು ವಿಚಿತ್ರ ವ್ಯವಸ್ಥೆಯಿದೆ. ಒಬ್ಬನಿಗೆ ಸಾಲ ಕೊಡಬೇಕಾದರೆ ಆತನ ಆಸ್ತಿ ಎಷ್ಟಿದೆಯೆಂದು ನೋಡುವುದಿಲ್ಲ; ಆತನ Paying Capacity ಎಷ್ಟು ಎಂಬದನ್ನು ಕೇಳುತ್ತಾರೆ. ಆತನಿಗೆ ವರ್ಷಕ್ಕೆ ೫,೦೦೦ ರೂಪಾಯಿಗಳ ದುಡಿಮೆಯಿದೆ, ೪,೦೦೦ ರೂಪಾಯಿಗಳ ಖರ್ಚಿದೆಯೆಂದು ಹೇಳುತ್ತಾನೆ, ಇದರಮೇಲೆ ವರ್ಷವರ್ಷ ೫೦೦ ರೂಪಾಯಿ ಸಾಲ ಪಡೆಯುತ್ತಾನೆ. ಹೀಗೆ ೨೦ ವರ್ಷ ನಡೆಯುತ್ತದೆ. ಇಂಥದೆಲ್ಲ ವಿಷಯಗಳನ್ನೂ ಕೂಲಂಕಷವಾಗಿ ತನಿಖೆ ನಡೆಸಬೇಕೆಂದು ಹೇಳುತ್ತೇನೆ.

ಇನ್ನು ಪೆನ್ಷನ್‌ಗಳ ಬಗ್ಗೆ ಒಂದು ಮಾತು. ಸರ್ಕಾರಿ ನೌಕರರುಗಳು ರಿಟೈರ್ ಆಗಿ ನಾಲ್ಕೈದು ವರ್ಷಗಳಾದರೂ ಅವರ ಪೆನ್ಷನ್ ಇತ್ಯರ್ಥವಾಗದೆ ಅವರು ನಮ್ಮ ಹತ್ತಿರ ಬಂದು ಏನಾದರೂ Recommend ಮಾಡಿ ಎಂದು ಹೇಳುವ ಸಂದರ್ಭಗಳಿವೆ. ಇಂಥ ಸಣ್ಣ ವಿಷಯಗಳಿಗೆಲ್ಲಾ ನೌಕರರು ಅಸೆಂಬ್ಲಿ ಸದಸ್ಯರ ಹತ್ತಿರ ಬರುವುದೆಂದರೆ, ಪೆನ್ಷನ್ ಇತ್ಯರ್ಥದ ಬಗ್ಗೆ ಸರ್ಕಾರ ಸರಿಯಾದ ವ್ಯವಸ್ಥೆ ಮಾಡಿಲ್ಲವೆಂದು ಅರ್ಥವಾಗುತ್ತದೆ. ರಿಟೈರ್‌ಆದ ಆರು ತಿಂಗಳಲ್ಲಿ, ಒಂದು ವರ್ಷದಲ್ಲಿಯಾದರೂ ಪೆನ್ಷನ್ claimಗಳನ್ನು Settle ಮಾಡುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಏನೇಆಗಲಿ, ಅವರು ಮಂತ್ರಿಗಳ ಹತ್ತಿರ ಬೇಕಾದರೆ ಹೋಗಲಿ, ನಮ್ಮ ಹತ್ತಿರ ಬರುವಂತಾಗುವುದು ಬೇಡವೆಂದು ನಾನು ಹೇಳ ಬಯಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ನಿಮ್ಮನ್ನು ಬಿಟ್ಟು ಮಂತ್ರಿಗಳು ಏನು ಮಾಡುತ್ತಾರೆ?

ಶ್ರೀ ಅಂಗಡಿ ಚನ್ನಬಸಪ್ಪ.—ಅದೇನೇ ಇರಲಿ. ನಮ್ಮ ಹತ್ತಿರ ಬರದಂತೆಮಾಡಿ. ಇದಕ್ಕಾಗಿ ಸರ್ಕಾರದವರು ತಕ್ಕ ಏರ್ಪಾಡು ಕೈಕೊಳ್ಳಬೇಕೆಂದು ಹೇಳುತ್ತೇನೆ.

*ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಸ್ವಾಮೀ, ಮಾನ್ಯ ಸಹಕಾರ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳಿಗೆ ಹೃತ್ಪೂರ್ವಕವಾಗಿ ಬೆಂಬಲವನ್ನು ಕೊಡುತ್ತಾ, ಸಹಕಾರ ಖಾತೆಯ ಬಗ್ಗೆ ಕೆಲವೊಂದು ಸೂಚನೆಗಳನ್ನು ಇಡಲು ನಾನು ಬಯಸುತ್ತೇನೆ.

ಮೊದಲನೆಯದಾಗಿ, ನಮ್ಮ ಸಹಕಾರದ ಕಾಯಿದೆ ಮೊಟ್ಟ ಮೊದಲು ನಮ್ಮ ಭಾರತದಲ್ಲಿ ಬಂದದ್ದು 1904ನೇ ಇಸವಿಯಲ್ಲಿ; ಅಲ್ಲಿಂದೀಚೆಗೆ ಇದು ಕಾಯಿದೆಯಾಗಿ ಜಾರಿಯಲ್ಲಿ ಬಂದಿತು. ಅಲ್ಲಿಯವರೆಗೆ ಒಕ್ಕಲು ಮಾಡುವ ರೈತರನ್ನು ಯಾವ ರೀತಿಯಾಗಿ ಸಂಘಟಿಸಬೇಕು, ರೈತನಿಗೆ ಸಾಲವನ್ನು ಕೊಟ್ಟು ಅವನ ವ್ಯವಹಾರಗಳನ್ನು ಹೇಗೆ ನಡೆಸಬೇಕು ಎನ್ನುವುದರ ಬಗೆಗೆ ಅನೇಕ ತಜ್ಞರ ಸಮಿತಿಗಳ ಮತ್ತು ಇನ್ನೂ ಅನೇಕ ವರದಿಗಳು ಬಂದಿವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಮಸ್ಯೆ ಬಹಳ ಕಠಿಣವಾಗಿ, ಬೆಳೆಗಳನ್ನು ಮಾಡುವ ರೈತನಿಗೆ ಸರಿಯಾಗಿ ಸಾಲ ದೊರೆಯದೆ ಹಾಗೇ ಉಳಿಯುತ್ತಿದ್ದುದು ನಮಗೆ ಕಂಡುಬಂದಿದೆ. ಅವನ ಆರ್ಥಿಕ ಪ್ರಪಂಚದಲ್ಲಿ ಹಳ್ಳಿಯ ಸಹಕಾರಿ ಜನಗಳಿಂದ ನಮ್ಮಲ್ಲಿ ಅನೇಕ ಸಹಕಾರ ಸಂಘಗಳು ನಿರ್ಮಿತವಾದದ್ದೇನೋ ನಿಜವೇ. ಆದರೆ ಆ ಸಹಕಾರ ಸಂಘಗಳಿಂದ ಅವನಿಗೆ ಬೇಕಾದಂತಹ ಸಾಲ ಸಿಗುತ್ತ ಎನ್ನುವುದು ಕಷ್ಟ ಎನ್ನುವುದು ಗ್ರಾಮಾಂತರ ಪರಿಶೀಲನಾ ಸಮಿತಿಯವರು ಮಾಡಿದ ರಿಪೋರ್ಟಿನಲ್ಲಿ ಕಂಡುಬರುತ್ತದೆ. ರೈತರಿಗೆ ಬೇಕಾ

(ಶ್ರೀ ಎ. ಎಸ್. ಪಾಟೀಲ್)

ಗುವ ಸಾಲಗಳ ಪೈಕಿ ನೂರಕ್ಕೆ ಮೂರರಷ್ಟು ಸಾಲ ಸಿಗುತ್ತಿತ್ತು ಎನ್ನುವ ಮಾತನ್ನು ಆ ಸಮಿತಿಯವರು ಸರಿಯಾಗಿ ಹೇಳಿದ್ದಾರೆ. ಈ ಗ್ರಾಮಾಂತರ ಪರಿಶೀಲನಾ ಸಮಿತಿಯವರು 1954ನೇ ಇಸವಿಯಲ್ಲಿ ಅವರು ಕೊಟ್ಟ ಒಂದು ವರದಿಯಲ್ಲಿ ನಾವು ಒಂದು ಸಾಮುದಾಯಿಕ ಯೋಜನೆಯನ್ನು ಮಾಡಿ ರೈತರನ್ನು ಅಭಿವೃದ್ಧಿಗೆ ತರಬೇಕು ಎಂದು ಅಭಿಪ್ರಾಯಪಟ್ಟರು. ಅದರ ಪ್ರಕಾರ ಸಹಕಾರ ಸಂಘಗಳಿಗೆ ಸರಕಾರದಿಂದ ಸಹಾಯ ಪಡೆದು, ಸೇವೆ ಮಾಡಲಿಕ್ಕೆ ತರಬೇತಿ ಹೊಂದಿದ ನೌಕರರುಗಳು ಇರಬೇಕು. ಮತ್ತು ಆಡಳಿತವನ್ನು ಸರಿಯಾದ ಒಂದು ವ್ಯವಸ್ಥೆಗೊಳಿಸಬೇಕು ಎಂದು ಈ ಗ್ರಾಮಾಂತರ ಪರಿಶೀಲನಾ ಸಮಿತಿಯವರು ಏನು ಏರ್ಪಾಡು ಮಾಡಬೇಕೆಂದು ಅದರಂತೆ ನಮ್ಮ ಸರಕಾರದವರು ಸರಿಯಾಗಿ ಸುಧಾರಿಸಿದಂತ ಸಹಕಾರ ಸಂಘಗಳನ್ನು ಕೊಡುವುದರ ಕಡೆಗೆ ಲಕ್ಷ್ಯಕೊಡಬೇಕೆಂದು ಸೂಚನೆ ಮಾಡುತ್ತೇವೆ.

ರಿಸರ್ವ್ ಬ್ಯಾಂಕಿನಿಂದ ಹಣಕಾಸನ್ನು ಕೊಡುವಂತಹ ಎಲ್ಲ ಸಹಕಾರ ಸಂಸ್ಥೆಗಳಿಗೂ ನಮ್ಮ ಸಾಲದ ರಿಕವರಿ ಹೇಗೆ ಆಗಬೇಕು ಎನ್ನುವುದನ್ನು ನೋಡುವುದಾದರೆ, ಬರಗಾಲ ಪೀಡಿತ ಪ್ರದೇಶಗಳಲ್ಲಿ Cent Per cent recovery ಎಂದರೆ ಪೂರ್ಣವಾಗಿ ಸಾಲದ ಹಣವನ್ನು ವಸೂಲು ಮಾಡುವ ತತ್ವವನ್ನು ಪೂರ್ಣವಾಗಿ ಜಾರಿಗೆ ತರಲು ಪ್ರಯತ್ನ ಮಾಡುತ್ತಿದ್ದಾರೆ. ಇದು ಮೂರು ನಾಲ್ಕು ವರ್ಷಗಳಿಂದ ಸರಕಾರದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿದೆ. ಬರಗಾಲಕ್ಕೆ ತುತ್ತಾದ ಪ್ರದೇಶಗಳಿಂದ ಸಾಲದ ಹಣ ವಸೂಲಾಗುವುದಿಲ್ಲ. ಆದ್ದರಿಂದ ಸರಕಾರ ಇಲ್ಲ ಶೇಕಡಾ ಇಪ್ಪತ್ತರಷ್ಟು ಅಥವಾ ಮೂವತ್ತರಷ್ಟು ಮಾತ್ರ ವಸೂಲು ಮಾಡಬೇಕು ಎನ್ನುವ ಮಾತೂ ಇದೆ. ಇದರ ಒಂದು ಪರಿಹಾರಕ್ಕೆ ಈ ಸಭೆಯ ಅನೇಕ ಸದಸ್ಯರು ಮತ್ತು ಗ್ರಾಮಾಂತರ ಪರಿಶೀಲನಾ ಸಮಿತಿಯವರು, ಇದನ್ನು ಸುಧಾರಿಸಲು ಅನೇಕ ಸೂಚನೆಗಳನ್ನು ಕೊಟ್ಟಿದ್ದರೂ ಸಹಾ ಸರಕಾರದವರು ಇನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ. ಸಮಿತಿಯವರು ಹೇಳಿದಂತೆ Agricultural Credit Relief Guarantee Fund " ಎನ್ನುವಂತಹ ಒಂದು ನಿಧಿಯನ್ನು ಏರ್ಪಾಡು ಮಾಡುವುದು ಅತ್ಯವಶ್ಯಕ. ಎಲ್ಲಿ ಬರಗಾಲಕ್ಕೆ ತುತ್ತಾಗಿ, ದುಷ್ಕಾಲ ಬರುತ್ತದೆಯೋ ಅಂತಹ ಭಾಗದ ಜನರಿಗೆ ಸಾಲವನ್ನು ಕೊಡುವುದಕ್ಕೆ ಈ ನಿಧಿಯಿಂದ ಅನುಕೂಲ ಮಾಡಿಕೊಡಬೇಕು. ಈ ಫಂಡಿನಿಂದ ಸಹಕಾರಿ ಬ್ಯಾಂಕುಗಳಿಗೆ ಹಣವನ್ನು ಒದಗಿಸಿ ರೈತರಿಗೆ ಸಾಲವನ್ನು ಕೊಟ್ಟು ಸಹಾಯ ಮಾಡುವ ಒಂದು ವ್ಯವಸ್ಥೆ ಮಾಡಬೇಕು. ಈ ಉದ್ದೇಶದಿಂದ ಮಾಡಬೇಕೆಂದು 1960-61ನೇ ಸಾಲಿನಲ್ಲಿ ಆಗಿನ ಮಾನ ಸಹಕಾರ ಮಂತ್ರಿಗಳು ಈ ತರಹದ ಒಂದು ಫಂಡನ್ನು ಇಟ್ಟಿದ್ದರು. ಅದನ್ನು ಏನು ಮಾಡಿದರೋ ಏನೋ ಗೊತ್ತಿಲ್ಲ. ಬಡ್ಜೆಟ್ಟಿನಲ್ಲಿಯೂ ಕೂಡ ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳಷ್ಟು ಇಡಬೇಕು ಎಂದು ಪಂಚವಾರ್ಷಿಕ ಯೋಜನೆಯಲ್ಲೂ ಇಟ್ಟಿದ್ದಾರೆ. ಈಗಾಗಲೇ ಸರಕಾರ ಈ ನೀತಿಯನ್ನು ಅನುಸರಿಸುತ್ತಿದೆ. ನಮ್ಮ ಬಡ ರೈತನಾದವನು ದುಷ್ಕಾಲಕ್ಕೆ ಸಿಕ್ಕಿದಾಗ ಸಹಕಾರ ಸಂಘಗಳಿಂದ ಅವರಿಗೆ ಸಾಲ ಸಿಗುತ್ತಿಲ್ಲ. ಎಲ್ಲೋ ಕೆಲವರಿಗೆ ದಳ್ಳಾಳರ ಮೂಲಕ ಸಾಲಗಳು ಸಿಗುತ್ತವೆ. ಆದಕಾರಣ ಸರಕಾರದವರು ಇಂತಹ ಬಡ ರೈತರಿಗೆ ಸರಿಯಾದ ನೆರವು ಸಿಕ್ಕುವ ದಾರಿಯನ್ನು ತೋರಿಸಿಕೊಡಬೇಕು. ಒಳ್ಳೆಯ ಉದ್ದೇಶದಿಂದ ಸಹಕಾರ ಸಂಘಗಳನ್ನು ಮಾಡಿ ರೈತರಿಗೆ ಸಾಲವನ್ನು ಕೊಟ್ಟು ಸಹಾಯ ಮಾಡಬೇಕೆಂದು ಇದ್ದರೂ ಅವರಿಗೇನೂ ಸಿಗುತ್ತಿಲ್ಲ. ಈಗ ಸಾಲವನ್ನು ಪೂರ್ತಿ ವಸೂಲು ಮಾಡಬೇಕೆಂಬ ನಿಯಮವಿದೆ. ಅದಕ್ಕಾಗಿ Agricultual Credit Relief Guarantee Fund ಎನ್ನುವಂತಹ ಒಂದು ಫಂಡನ್ನು ಮಾಡಲು ಪ್ರಯತ್ನ ಮಾಡಬೇಕು. ಬಡ್ಜೆಟ್ಟಿನಲ್ಲೂ ಅದಕ್ಕೆ ತಕ್ಕಷ್ಟು ಹಣವನ್ನು ಒದಗಿಸಿಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Long term loans ಕೊಡುವುದಕ್ಕಾಗಿ ಲ್ಯಾಂಡ್ ಮಾರ್ಟ್‌ಗೇಜು ಬ್ಯಾಂಕುಗಳನ್ನು ಮಾಡಿದ್ದಾರೆ. ಆದರೆ ಇದರಲ್ಲೇನಾಗಿದೆ ಎಂದರೆ, ಹಳೆಯ ಮೈಸೂರಿನ ಭಾಗದಲ್ಲಿ ಒಂದು ಪದ್ಧತಿ ಇದೆ ; ನಮ್ಮ ಭಾಗದಲ್ಲಿ ಒಂದು ರೀತಿಯಾದ ಪದ್ಧತಿ ಇದೆ, ಇದರಿಂದಾಗಿ ಯಾವ ನಿಯಮಗಳನ್ನೂ ಸಮನ್ವಯ ಮಾಡಿರುವುದಿಲ್ಲ. ಏಕ ರೂಪವಾದ ನಿಯಮಗಳನ್ನು ಇನ್ನೂ ಪೂರ್ಣವಾಗಿ ಜಾರಿಗೆ ತಂದಿಲ್ಲ. ಹಾಗೇ ಒಂದೊಂದು ಕಡೆ ಒಂದು ರೀತಿಯಾದ Bye-laws ಇವೆ. ಇದರಿಂದ ಅನೇಕ ಅಡ್ಡಿ ಆತಂಕಗಳಾಗುತ್ತಿವೆ. ಅದರಲ್ಲೂ ಉತ್ತರ ಕರ್ನಾಟಕದ ಬೆಳಗಾಂ ಮತ್ತಿತರ ಮೂರು ಜಿಲ್ಲೆಗಳಿಗೆ ಬಹಳ ತೊಂದರೆಗಳಾಗುತ್ತಿವೆ. ಹಳೆಯ ಮೈಸೂರಿನಲ್ಲಿ ಲ್ಯಾಂಡು ಮಾರ್ಟ್‌ಗೇಜು ಬ್ಯಾಂಕಿನಲ್ಲಿ ಒಂದು ಪದ್ಧತಿ ಇದೆ, ನಮ್ಮಲ್ಲಿ ಒಂದು ರೀತಿಯಾಗಿದೆ. ಇದನ್ನೆಲ್ಲ ಸರಿಪಡಿಸುವ ಕಡೆಗೆ ಸರಕಾರ ಪ್ರಯತ್ನ ಮಾಡಬೇಕು. ಈಗ ಇದರಲ್ಲಿ ಅನೇಕ ವ್ಯತ್ಯಾಸಗಳಿವೆ. ಅದಷ್ಟು ಬೇಗ ಯೂನಿಫಾರಂ ಆದ ಬೈಲಾಗಳನ್ನು ಮಾಡುವ ಕಡೆಗೆ ಪ್ರಯತ್ನ ಮಾಡಬೇಕು. ಅಲ್ಲದೆ ರೈತರಿಗೆ ಕೊಡುವಂತಹ ಸಾಲವನ್ನೂ ಸರಿಯಾಗಿ ಕೊಡುತ್ತಿಲ್ಲ ಎನ್ನುವ ಒಂದು ಭಾವನೆ ಜನಗಳಲ್ಲಿರುವುದು ಭಾಸವಾಗುತ್ತದೆ. ಇದನ್ನು ವಿಚಾರ ಮಾಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರೈಮರಿ ಲ್ಯಾಂಡು ಮಾರ್ಟ್‌ಗೇಜು ಬ್ಯಾಂಕು ಇರಬೇಕೆನ್ನುವ ತತ್ವದಂತೆ ಮಾಡುತ್ತಿದ್ದಾರೆ. ಇದನ್ನು ಮಾಡುವಾಗ Viable unit ಆಗಿ ಮಾಡಬೇಕೆನ್ನುವ ವಿಚಾರವೂ ಇದೆ. ಆದರೆ ಇದನ್ನು ಮಾಡುವಾಗ ಮದರಾಸಿನಲ್ಲಿ ಒಂದು ರೀತಿಯಾಗಿದೆ, ಮತ್ತೊಂದು ಕಡೆ ಒಂದು ರೀತಿ ಇದೆ ಎಂದು ಮಾಡುವುದು ಸರಿಯಲ್ಲ. ಈ ತತ್ವವನ್ನನುಸರಿಸಿ Viable unit ಆಗಿ ಮಾಡುವಾಗ ಎರಡು-ಮೂರು ತಾಲ್ಲೂಕುಗಳನ್ನು ಕೂಡಿಸಿ ಸಂಘಟನೆ ಮಾಡಿ ಒಂದು ಬ್ಯಾಂಕನ್ನು ಮಾಡುವ ಪ್ರಯತ್ನ ಮಾಡಬೇಕು. ಬರೀ ಒಂದು ಮೂವತ್ತು ಹಳ್ಳಿಗಳಿಗೆ ಎಂದು ಮಾಡುವುದು ಸರಿಯಲ್ಲ. ಅಲ್ಲದೆ ಈ ರೀತಿಯ ಸಂಘಟನೆಯಿಂದ ಜನಕ್ಕೇನೂ ಉಪಯೋಗವಾಗುವುದಿಲ್ಲ ಮತ್ತು ಸರಿಯಾಗಿ ಸಾಲ ರೈತನಿಗೆ ಸಿಗಲಿಕ್ಕೂ ಆಗುವುದಿಲ್ಲ. ಎರಡನೇದು, ಮಾರ್ಕೆಟಿಂಗು ಸೊಸೈಟಿಗಳೆಂದು ಪ್ರತಿ ತಾಲ್ಲೂಕಿನಲ್ಲಿಯೂ ಮಾಡಬೇಕೆಂದು ಇದೆ. ಆದರೆ ಯಾವ ತಾಲ್ಲೂಕಿನಲ್ಲಿ ಮಾರ್ಕೆಟ್ಟು ಸೆಂಟರಿಲ್ಲವೋ ಅಲ್ಲಿಯೂ ಕೂಡ ಈ ಮಾರ್ಕೆಟಿಂಗು ಸೊಸೈಟಿ ಮಾಡುತ್ತಿದ್ದಾರೆ. ಈಗ ನಮ್ಮ ಭಾಗದ ರೋಣ ಮಾರ್ಕೆಟಿಂಗ್ ಅಥವಾ ಕಮರ್ಷಿಯಲ್ ಸೆಂಟರು ಏನಲ್ಲ. ಅಲ್ಲಿ ಒಂದು ಮಾರ್ಕೆಟಿಂಗು ಸೊಸೈಟಿ ಮಾಡಿದ್ದಾರೆ. ಹಾಗೇ ನಮ್ಮ ಹೊಳೆ ಆಲೂರು ಗಜೇಂದ್ರಗಡ ಹೀಗೆ ಇನ್ನೂ ಅನೇಕ ತಾಲ್ಲೂಕು

ಗಳಲ್ಲಿ ಮಾರ್ಕೆಟಿಂಗು ಸೆಂಟರುಗಳಿಲ್ಲ. ಹೀಗೆ ಮಾರ್ಕೆಟಿಂಗು ಸೆಂಟರುಗಳಿಲ್ಲದ ತಾಲ್ಲೂಕುಗಳಲ್ಲಿ ಇಂತಹ ಸೊಸೈಟಿಗಳನ್ನು ಮಾಡುವುದು ಸರಿಯಲ್ಲ. ಮಾರ್ಕೆಟಿಂಗು ಸೊಸೈಟಿಗಳಲ್ಲಿ ತರಬೇತಿ ಹೊಂದಿದ ನೌಕರರೂ ಇಲ್ಲ. ಇದಲ್ಲದೆ ಇನ್ನೂ ಅನೇಕ ತರದ ಲೋಪದೋಷಗಳೂ ಇವೆ. ಇವನ್ನೆಲ್ಲಾ ಸರಿಪಡಿಸ ಬೇಕೆಂದು ನನ್ನ ವಿನಂತಿ.

ಇನ್ನು ನಮ್ಮ ಶ್ರೀ ಅಂಗಡಿ ಚನ್ನಬಸಪ್ಪನವರು ಈ ಸೊಸೈಟಿಗಳಿಗೆ ಮೇನೇಜೀರಿಯಲ್ ಸ್ಟ್ಯಾಫ್ ಕೊಡ ಬಾರದೆಂದು ಏನು ಹೇಳಿದರು ಅದನ್ನು ನಾನು ಒಪ್ಪುವುದಿಲ್ಲ. ಈಗ ನಾವು ಹೊಸದಾಗಿ ಅನೇಕ ಸೊಸೈಟಿಗಳನ್ನು ಸ್ಥಾಪನೆ ಮಾಡಬೇಕೆಂದಿದ್ದೇವೆ. ಅಂಥವುಗಳಿಗೆ ಸೂಕ್ತ ಸಹಾಯ ನೀಡಬೇಕು. ನಾವು ನಮ್ಮ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ನಾಲ್ಕು ಸಾವಿರ ಕೋ ಆಪರೇಟೀವ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸಬೇಕೆಂದಿದ್ದೇವೆ. ಹೊಸದಾಗಿ ಸ್ಥಾಪಿತ ವಾಗತಕ್ಕ ಈ ಸೊಸೈಟಿಗಳಿಗೆ ಐದುವರ್ಷಗಳಕಾಲ ವರ್ಷಕ್ಕೆ 900 ರೂಪಾಯಿಗಳನ್ನು ಕೊಡಬೇಕೆಂತ ಈಗ ಹೇಳಿದೆ. ಈ ಸಹಾಯವನ್ನು ಹಳೆಯ ಸೊಸೈಟಿಗಳಿಗೆ ಕೊಡುವುದಿಲ್ಲ. ನಾನು ಹೇಳಬೇಕಾಗಿದ್ದ ವಿಚಾರಗಳು ಇನ್ನೂ ಬೇಕಾದಷ್ಟಿತ್ತು, ಆದರೆ ಕಾಲಾವಕಾಶವಿಲ್ಲದ್ದರಿಂದ ಮುಖ್ಯವಾದ ಇನ್ನೊಂದು ಅಂಶವನ್ನು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ದಿವಸ ಕೋ-ಆಪರೇಟಿವ್ ಎಜ್ಯುಕೇಷನ್ ಮತ್ತು ಪ್ರೊಪಗ್ಯಾಂಡ ಈ ಬಾಬುಗಳಿಗೆ ಈ ವರ್ಷ ಮಹಾರಾಷ್ಟ್ರದಲ್ಲಿ ಹದಿಮೂರು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವರ್ಷ ನಮ್ಮ ಸರ್ಕಾರದಲ್ಲಿ ಏನೂ ಕೊಟ್ಟಿಲ್ಲ. ಟ್ರೈನಿಂಗ್, ಕೋ-ಅಪರೇಟೀವ್ ಎಜ್ಯುಕೇಷನ್ ಮತ್ತು ಪ್ರೋಪಗ್ಯಾಂಡ ಬಗ್ಗೆ ಏನೂ ವ್ಯವಸ್ಥೆಮಾಡಿಲ್ಲ. ಇದಕ್ಕೆಲ್ಲ ಒಂದು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳಿ ನಾನು ಈ ಬೇಡಿಕೆ ಬಗ್ಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಸಭಾಪತಿಗಳೇ ನಾನೀಗ ಪಾಂಡವಪುರದ ಸಕ್ಕರೆ ಕಾರ್ಖಾನೆಯ ಆಡಳಿತದಲ್ಲಿರತಕ್ಕ ಕೆಲವು ನ್ಯೂನಾತಿರಿಕ್ತಗಳನ್ನು ಈ ಸಭೆಯ ಮುಂದೆ ಇಡಲಿಚ್ಛಿಸುತ್ತೇನೆ. ಈ ಸಕ್ಕರೆಕಾರ್ಖಾನೆಯನ್ನು ಸ್ಥಾಪಿಸಲು ಹದಿನೈದು ಲಕ್ಷರೂಪಾಯಿಗಳ ಬಂಡವಾಳವನ್ನು ಷೇರ್ ರೂಪದಲ್ಲಿ ವಸೂಲ್ಮಾಡಲಾಗಿದೆ. ಇಲ್ಲಿಯ ತನಕ ಈ ಸಕ್ಕರೆ ಕಾರ್ಖಾನೆಯ ಲೆಕ್ಕಪತ್ರಗಳು ಆಡಿಟ್ ಆಗಿಲ್ಲ. ಷೇರ್ ಹೋಲ್ಡರುಗಳಿಗೆ ಈ ತಹಲ್‌ವರೆಗೆ ಯಾವ ಬೋನಸ್ಸೂ ಪಾವತಿಯಾಗಿಲ್ಲ. ಈ ಬೋನಸ್ಸು ಕೊಡಲು ಇಲ್ಲಿಯತನಕ ಆ ಕಾರ್ಖಾನೆಯ ಆಡಳಿತ ವರ್ಗದವರು ಯಾವ ಕ್ರಮಗಳನ್ನೂ ಕೈಕೊಂಡಿಲ್ಲ ಅಲ್ಲಿ ಸರಿಯಾಗಿ ರೆಕಾರ್ಡುಗಳೊಂದೂ ಇಲ್ಲ, ಆಡಳಿತದಲ್ಲಿ ದುರಾಚಾರ-ಅವ್ಯವಸ್ಥೆಗಳುಂಟಾಗಿವೆ. ಈ ದಿವಸ ಕಾರ್ಖಾನೆ ಕೇವಲ ಕೆಲವರ ಸ್ವಾರ್ಥಸಾಧನೆಗಾಗಿ ನಡೆಯುತ್ತಿದೆ ಎನ್ನತಕ್ಕ ಭಾವನೆ ಜನರಲ್ಲುಂಟಾಗಿದೆ. ಈ ಕಾರ್ಖಾನೆಯವರು ಕೂಡಲೆ ಷೇರ್ ಹೋಲ್ಡರುಗಳಿಗೆ ಬೋನಸ್ಸನ್ನು ಹಂಚುವಂತೆ ವ್ಯವಸ್ಥೆಮಾಡಬೇಕು. ಇಲ್ಲಿಗೆ ಎರಡು ಮೂರು ವರ್ಷಗಳಹಿಂದೆ ಆ ಕಾರ್ಖಾನೆಯ ಡೈರೆಕ್ಟರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದರು. ಅದರಿಂದ ಬೇರೆ ಈಗ ಜನಗಳಿಗೆಲ್ಲ ಬಹಳ ಅನುಮಾನ-ಸಂದೇಹಗಳು ಈ ಕಾರ್ಖಾನೆಯ ಬಗ್ಗೆ ಹುಟ್ಟಿವೆ. ಈ ಕಾರ್ಖಾನೆಯ ಆಡಳತಕ್ಕೆ ಒಂದು ಕೋಟಿ ರೂಪಾಯಿಗಳತನಕ ಸರ್ಕಾರ ಬಂಡವಾಳ ಹಾಕಿದೆ. ಆದರೂ ದುರುಪಯೋಗ ನಡೆದಿದೆ ಎಂತ ಮಾನ್ಯ ಡೈರೆಕ್ಟರೊಬ್ಬರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಆ ವಿಚಾರದಲ್ಲಿ ಇಲ್ಲಿಯತನಕ ಏನು ವಿಚಾರಣೆ ಆಯಿತು, ಅಥವಾ ವಿಚಾರಣೆಯನ್ನು ನಡೆಸಿದರೇ-ಇಲ್ಲವೇ ಎನ್ನತಕ್ಕಬಗ್ಗೆ ಷೇರ್‌ಹೋಲ್ಡರುಗಳ ತಿಳುವಳಿಕೆಗಾಗಿ ಇಲ್ಲಿಯತನಕ ಯಾವ ಸಮಾಜಾಯಿಷಿಯೂ ಹೊರಬಿದ್ದಿಲ್ಲ. ಪರಿಸ್ಥಿತಿ ಹೀಗಾದರೆ ಆ ಜನರೇನು ಮಾಡಬೇಕು ? ಯಾವಾಗ ಮಾನ್ಯ ಡೈರೆಕ್ಟರು ಒಬ್ಬರು ಅದರ ಆಡಳಿತದ ವಿಚಾರದಲ್ಲಿ ಒಂದು ರಿಪೋರ್ಟನ್ನು ಕೊಟ್ಟರೋ ಆಗ ಅವರು ಕೊಟ್ಟ ರಿಪೋರ್ಟು ಸುಳ್ಳೋ ಅಥವಾ ನ್ಯಾಯವಾದದ್ದೋ ಎನ್ನುವುದು ಒಂದೂ ಗೊತ್ತಾಗುತ್ತಿಲ್ಲ. ಹಾಗೆ ಅವರು ಕೊಟ್ಟ ರಿಪೋರ್ಟು ಸುಳ್ಳಾಗಿದ್ದರೆ ಅವರನ್ನು ತಪ್ಪಿತಸ್ಥರು ತಥವಾ ಅವರು ಕೊಟ್ಟಿರತಕ್ಕ ವರದಿ ಸುಳ್ಳೆಂತ ಏನಾದರೂ ತೀರ್ಮಾನವಾಗಿದೆಯೋ ಎನ್ನತಕ್ಕ ಬಗ್ಗೆ ಏನೊಂದು ವರ್ತಮಾನವೂ ಈಚೆಗೆ ಬರುತ್ತಿಲ್ಲ. ಆದ್ದರಿಂದ ಸರ್ಕಾರದವರಾದರೂ ಈಗ ಈ ವಿಚಾರದಲ್ಲಿ ಕೂಡಲೆ ಒಂದು ವಿಚಾರಣೆ ನಡೆಸಿ ಒಂದು ತೀರ್ಮಾನ ಕೈಗೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಕೃಷ್ಣರಾಜಪೇಟೆ ತಾಲ್ಲೂಕ್ ಸೋಮನಹಳ್ಳಿಯಲ್ಲಿ ಒಂದು ಸೊಸೈಟಿ ಇದೆ. ಆ ಸೊಸೈಟಿಯಲ್ಲಿ 530 ಷೇರ್‌ಹೋಲ್ಡರುಗಳಿದ್ದಾರೆ. ಹದಿನೆಂಟುಸಾವಿರ ರೂಪಾಯಿಗಳ ಷೇರ್ ಮೊಬಲಗು ವಸೂಲಾಗಿದೆ. ಆ ಸೊಸೈಟಿಯಿಂದ 330 ಜನ ಷೇರ್‌ದಾರರಿಗೆ ಒಂದು ಲಕ್ಷ 52 ಸಾವಿರರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ. ಅಲ್ಲಿ ತರಿಭೂಮಿ ಜಾಸ್ತಿಇರುತ್ತೆ. ಆ ಸಾಲದಲ್ಲಿ ಈಗಾಗಲೇ ಒಂದು ಲಕ್ಷ ಎಂಟುಸಾವಿರ ರೂಪಾಯಿಗಳನ್ನು 210 ಜನರು ತೀರಿಸಿದ್ದಾರೆ. ಇನ್ನು 60 ಜನಗಳಿಂದ 44 ಸಾವಿರ ರೂಪಾಯಿಗಳು ಬಾಕಿ ವಸೂಲಾಗದೆ ಹಾಗೆಯೇ ನಿಂತುಹೋಗಿದೆ. ಈಗ ಅಲ್ಲಿ ನಾಟಿಹಾಕತಕ್ಕ ಕಾಲ, ವ್ಯವಸಾಯಗಾರರ ಕೈಲಿ ದುಡ್ಡಿಲ್ಲ. ಸಾಲಕೇಳಿದರೆ ಆ ಸೊಸೈಟಿಯವರು ಕೊಡುತ್ತಿಲ್ಲ. ಕಾರಣವೇನೆಂದರೆ ಬಾಕಿನಿಂತಿರುವ 44 ಸಾವಿರ ರೂಪಾಯಿಗಳ ಸಾಲ ವಸೂಲಾಗದ ಹೊರತು ಅವರು ಯಾರಿಗೂ ಹೊಸದಾಗಿ ಸಾಲಕೊಡುವುದಿಲ್ಲವಂತೆ. ಹೀಗಾಗಿ ಕೇವಲ ಆ ಜನ ಡಿಫಾಲ್ಟರುಗಳಿಂಧ ನ್ಯಾಯರೀತಿಯಲ್ಲಿ ಸಾಲಪಡೆದಿದ್ದನ್ನು ತೀರಿಸಿಧ ಪತ್ಯವಾದಿಗಳು ತೊಂದರೆಪಡತಕ್ಕಂಥ ಕಾಲ ಬಂಧಿದೆ. ಈ ದಿವಸ ಸಾಲ ತೀರಿಸದೆ ಬಾಕಿದಾರರಾಗಿರತಕ್ಕ 60 ಜನಗಳು ಸುಖವಾಗಿದ್ದಾರೆ. ಅವರು ಅವರ ಗದ್ದೆ ನಾಟಿ ಕೆಲಸ ಇವುಗಳನ್ನೆಲ್ಲ ಮಾಡಿಕೊಂಡು ಆರಾಮಾಗಿದ್ದಾರೆ. ಕಾನೂನಿಗೆ ಅಂಜಿ ಸಕಾಲದಲ್ಲಿ ಸಾಲತೀರಿಸಿ ನ್ಯಾಯವಾಗಿ ಸತ್ಯವಾಗಿ ನಡೆದುಕೊಂಡ ಜನಗಳೇನಿದ್ದಾರೆ ಅವರು ಪರರಮನೆ ಬಾಗಿಲುಗಳ ಮುಂದೆ ತಿರುಗುವ ಹೊತ್ತುಬಂದಿದೆ. ಹೀಗಾಗಿ ಈ ದಿವಸ 60 ಜನಗಳಿಂದ 270 ಜನರಿಗೆ ತೊಂದರೆಯಾಗಿದೆ. ಈ ಸೋಮನಹಳ್ಳಿ ಹತ್ತಿರ ಪ್ಯಾಕೇಜ್ ಸ್ಕೀಂ ಎಂತ ಏನಿದೆ, ಅದಕ್ಕೆ ಐದು ಸಾವಿರ ಎಕರೆಭೂಮಿ ಸೇರಿದೆ. ಈ ದಿವಸ ಈ 60 ಜನ ಡಿಫಾಲ್ಟರು ಗಳೇನಿದ್ದಾರೆ ಇವರಿಂದ ಆ ಪ್ಯಾಕೇಜ್ ಸ್ಕೀಮ್ಮನ್ನು ಈ ಸೊಸೈಟಿಗೆ ಸೇರಿಸಲು ಸಾಧ್ಯವಾಗಿಲ್ಲ. ಇತರೆ ಪ್ರದೇಶದಲ್ಲಿ 86 ಗ್ರಾಮಗಳಲ್ಲಿ ಇಪ್ಪತ್ತು ಗ್ರಾಮಗಳಲ್ಲಿ ವೆಟ್‌ಲ್ಯಾಂಡ್ ಜಾಸ್ತಿಇದೆ, ಇನ್ನುಳಿದಕಡೆಗಳಲ್ಲೆಲ್ಲ ಡ್ರೈಲ್ಯಾಂಡ್‌ಇರುತ್ತೆ. ಈ ವೆಟ್ ಏರಿಯಾದಲ್ಲಿರ ತಕ್ಕವರಿಗೆ ಈ ಸೊಸೈಟಿಯಿಂದ ಸಾಲಪಡೆಯಲು ಅವಕಾಶವಿದೆ. ಹೀಗೆ ಅವಕಾಶವಿದ್ದರೂ ಅವರಿಗೆ

(ಶ್ರೀ ಎನ್. ನಂಜೇಗೌಡ)

ಅವಕಾಶಕೊಡದೆ ಹೋದರೆ ಈ ಸಹಕಾರತತ್ವದಲ್ಲಿ ಜನಗಳಿಗೆ ಹೇಗೆ ನಂಬಿಕೆ ಬರುತ್ತದೆ? ಇಂಥ ಸಹಕಾರ ಸಂಘಗಳಿಂದ ಜನರಿಗೆ ಆಗತಕ್ಕ ಉಪಕಾರವಾದರೂ ಏನು? ಹೀಗೆ ಈ ಸಂಘಗಳು ಆಡಳಿತ ನಡೆಸುತ್ತಿದ್ದರೆ ಈ ಸ್ಕೀಮುಗಳೆಲ್ಲ ಸಕ್‌ಸಸ್ ಆಗುವುದು ಹೇಗೆ? ಆದುದರಿಂದ ಸರ್ಕಾರದವರು ದಯೆಯಿಟ್ಟು ಈ ಸೊಸೈಟಿಗಳಿಂದ ಆ ಜನಗಳಿಗೆ ಸಹಾಯ ಸಿಗುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸೊಸೈಟಿಯಲ್ಲಿ ಕಳೆದ ಮೂರು ವರ್ಷಗಳಿಂದ ಯಾವ ಒಂದು ರೆಕಾರ್ಡೂ ಇಲ್ಲ. ಹೀಗೆಲ್ಲ ಅವ್ಯವಸ್ಥೆಗಳುಂಟಾಗಿ ಈ ಸಹಕಾರ ಸಂಘಗಳು ಈ ದಿವಸ ಭಂಡರಿಗೆ ಅನುಕೂಲ ಮಾಡಿಕೊಡುತ್ತವೆಯೇ ಹೊರತು ಸತ್ಯವಂತರಿಗೇನೂ ಅನುಕೂಲವಾಗುತ್ತಿಲ್ಲ. ಸತ್ಯವಂತರಿಗೆ ಅನಕೂಲ ದೊರಕುವುದಕ್ಕೆ ಪ್ರತಿಯಾಗಿ ಅವರಿಗೆ ಅನಾನುಕೂಲವಾಗಿರುತ್ತದೆ. ಈ ಸೊಸೈಟಿಯವರು ಕೇವಲ ಉಡಾಫೆಮಾಡತಕ್ಕ ಜನಗಳೇನಿದ್ದಾರೆ ಅಂಥವರಿಗೆ ಮಾತ್ರ ಸಹಾಯ ಮಾಡುತ್ತಿದ್ದಾರೆ. ದಯವಿಟ್ಟು ಸರ್ಕಾರದವರು ಇದಕ್ಕೆಲ್ಲ ಅವಕಾಶಕೊಡಬಾರದು. ಸರ್ಕಾರದವರು ಈ ವಿಚಾರದಲ್ಲಿ ಕೂಡಲೆ ಕ್ರಮಕೈಗೊಳ್ಳಬೇಕು; ಆ ಸೊಸೈಟಿಯ ಲೆಕ್ಕ-ಬುಕ್ಕುಗಳು ಏನಾದುವು ಏನು ವದನ್ನೆಲ್ಲ ತನಿಖೆಮಾಡಿ ಜನರಿಗೆ ಅನುಕೂಲ ಕಲ್ಪಿಸಿಕೊಡುತ್ತಾರೆಂತ ನಂಬಿದ್ದೇನೆ.

ಇನ್ನೊಂದು ಸೊಸೈಟಿ ಕೃಷ್ಣರಾಜಪೇಟೆ ಸಿಟಿ ಕೋ-ಆಪರೇಟಿವ್ ಸೊಸೈಟಿ ಈ ಸೊಸೈಟಿಯಲ್ಲಿ ಕೆಲವರು ಈ ಹಿಂದೆ ಸಾಲತೆಗೆದುಕೊಂಡಿದ್ದಾರೆ. ಆದರೆ ಸಾಲಕೆ ಯಾರು ಅರ್ಜಿಹಾಕಿದ್ದಾರೋ ಹಣ ಯಾರಿಗೆ ಮಂಜೂರಾಗಿದೆಯೋ ಒಂದೂ ಸರಿಯಾಗಿ ಗೊತ್ತಾಗುತ್ತಿಲ್ಲ. ಅರ್ಜಿ ಹಾಕತಕ್ಕವರೊಬ್ಬರು ಸಾಲಪಡೆಯತಕ್ಕವರು ಮತ್ತೊಬ್ಬರು. ಹೀಗೆಲ್ಲ ಆಗಿದೆ. ಆ ಸಾಲ ಪಡೆದಿರತಕ್ಕವರ ಸ್ವತ್ತುಗಳಲ್ಲದೆ ಬೇರೆ ಯಾರ್‍ಯಾರ ಸ್ವೊತ್ತುಗಳೋ ರಿಜಿಷ್ಟರಾಗಿವೆ. ಈ ವಿಚಾರದಲ್ಲಿ ಅರ್ಜಿ ಹೋಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಬಂದು ಎಲ್ಲ ಹೇಳಿಕೆಗಳನ್ನು ಪಡೆದು ರೆಕಾರ್ಡು ಮಾಡಿದ್ದಾರೆ. ಆದರೆ ಆ ತನಿಖೆ ಬಗ್ಗೆ ತೀರ್ಮಾನ ಏನಾಯಿತೆಂಬುದು ಇಲ್ಲಿಯವರೆಗೂ ಗೊತ್ತಿಲ್ಲ. ಹೀಗೆಲ್ಲ ಕೇವಲ ಮೋಸ ಮಾಡತಕ್ಕ ಜನರಿಗೇ ಸೊಸೈಟಿಗಳು ಸಾಲಕೊಡುತ್ತಾ ಹೋದರೆ ಇವು ಇನ್ನೆಲ್ಲಿ ಮುಂದಕ್ಕೆ ಬರಲು ಸಾಧ್ಯವಿದೆ? ಇಂಥ ಸಹಕಾರತತ್ವ ಜನರಲ್ಲಿ ಏನು ನಂಬಿಕೆ ಹುಟ್ಟಿಸಬಲ್ಲದು?

ಇನ್ನು ಈ ತಾಲ್ಲೂಕ್ ಸೊಸೈಟಿಗಳ ವಿಚಾರಕ್ಕೆ ಬಂದರೆ ಇವುಗಳಲ್ಲಿ ಹಿಂದೆಲ್ಲ ಬೇಕಾದಷ್ಟು ಅನ್ಯಾಯ ನಡೆದಿರುತ್ತೆ. ಆ ಬಗ್ಗೆ ಎಕ್ಸ್‌ಕ್ಯೂಟರಿಗಳಾದುವು, ರೆಕಾರ್ಡುಗಳಾಯಿತು, ಆದರೆ ಫಲತಾಂಶ ಏನೆಂಬುದು ಮಾತ್ರ ಗೊತ್ತಾಗಲಿಲ್ಲ ಈ ಪ್ರಕೆ ರೆಡ್-ಹ್ಯಾಂಡ್ ಆಗಿ ಹಿಡಿದಂತಾ ಕೇಸುಗಳು ಎಷ್ಟೋ ಇವೆ. ಹೀಗೆಲ್ಲ ಮಾಡುತ್ತಾ ಹೋದರೆ ಈ ಸಹಕಾರತತ್ವ ಬೆಳೆಯುವುದು ಹೇಗೆ? ಈ ಸೊಸೈಟಿಗಳು ಮುಂದಕ್ಕೆ ಬರುವುದಾದರೂ ಹೇಗೆ? ಸರ್ಕಾರದವರು ಈಗಲಾದರೂ ಈ ವಿಚಾರಗಳನ್ನೆಲ್ಲ ಕೂಲಂಕುಷವಾಗಿ ವಿಮರ್ಶೆಮಾಡಿ ತಪ್ಪಿತಸ್ಥರಬಗ್ಗೆ ಉಗ್ರ ಕಾರ್ಯಕ್ರಮ ಕೈಗೊಳ್ಳಲೇಬೇಕು. ಇಲ್ಲವಾದರೆ ದೇಶದಲ್ಲಿ ಈ ಸಹಕಾರತತ್ವ ತಲೆಎತ್ತಿನಿಲ್ಲಲಾರದು. ಸರ್ಕಾರದವರು ಯಾರಹಂಗಿಗೂ ಒಳಗಾಗಬಾರದು, ಮೋಸಗಾರರನ್ನು ಉಗ್ರವಾಗಿ ಶಿಕ್ಷೆಮಾಡತಕ್ಕಂಥ ಕಾನೂನನ್ನು ಬೇಗ ಜಾರಿಗೆ ತರಬೇಕಾದ್ದು ಅತ್ಯಗತ್ಯ ಈಗಿರತಕ್ಕ ಕಾನೂನು ಮೋಸಗಾರರಿಗೆ ಅನುಕೂಲವನ್ನು ಸತ್ಯವಂತರಿಗೆ ಅನಾನುಕೂಲವನ್ನೂ ಉಂಟು ಮಾಡತಕ್ಕದ್ದಾಗಿದೆ. ದೊಡ್ಡದೊಡ್ಡ ಅನುಕೂಲಸ್ಥರು ಇಪ್ಪತ್ತು ಜನ ಇಪ್ಪತ್ತು ಸಾವಿರ ಸಾಲಪಡೆದರೆ ಅವರು ಸಾಲಕೊಡದ ಭಂಡರಾದರೆ ಬಾಕಿ 100-200 ರೂಪಾಯಿಗಳ ಸಾಲಪಡೆಯತಕ್ಕ ನಿಸ್ಪೃಹರಿಗೆ ಸಾಲ ಸಿಗದೆ ತೊಂದರೆ ಆಗುತ್ತಿದೆ. ಸಾಲಪಡೆದವರು ಸಾಲ ತೀರಿಸಿದನಂತರ ಅವರಿಗೆ ಮತ್ತೆ ಸಾಲಪಡೆಯಲು ಅವಕಾಶವಿರಬೇಕು, ಅಂಥಾ ಅನುಕೂಲ ಕಲ್ಪಿಸತಕ್ಕ ಕಾನೂನನ್ನು ಜಾರಿಗೆತರಬೇಕೆಂದು ಹೇಳುತ್ತೇನೆ. ಆದರೆ ಈಗ ಜಾರಿಯಲ್ಲಿರತಕ್ಕ ಕಾನೂನಿನಲ್ಲಿ ಸೊಸೈಟಿ ಒಂದಾವರ್ತಿ ಪಡೆದಸಾಲದಲ್ಲಿ ಶೇಕಡ 90 ರಷ್ಟು ಮೊಬಲಗನ್ನು ಪಾವತಿ ಮಾಡದ ವಿನಾ ಹೊಸಸಾಲ ಕೊಡಬಾರದು ಎಂಬುದಾಗಿದೆ. ಇಂಥಾ ಕಾನೂನಿನಿಂದ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ. ನಿಮ್ಮ ಉದ್ದೇಶವೇನಿದೆ ಅದಕ್ಕೆ ಬದಲಾಗಿ ಅವರಿಗೆ ಹೆಚ್ಚುತೊಂದರೆಯಾಗುತ್ತಿದೆ. ಸರ್ಕಾರದವರು ಈ ವಿಚಾರಣೆಗಳನ್ನೆಲ್ಲ ವಿಮರ್ಶೆಮಾಡಿ ಸೂಕ್ತ ಬದಲಾವಣೆಗಳನ್ನು ಕಾನೂನಿನಲ್ಲಿ ಮಾಡುತ್ತಾರೆಂದು ನಂಬಿದ್ದೇನೆ.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ವೀವಿಂಗ್ ಸೊಸೈಟಿಗಳಿವೆ. ಅವಕ್ಕೆ ಕೃತಕ ರೇಷ್ಮೆ ಅಥವಾ ಜಪಾನಿ ರೇಷ್ಮೆ ಕೊಡುತ್ತಾರೆ. ಆದರೆ ಅದನ್ನು ಸರಿಯಾಗಿ ಹಂಚುತ್ತಿಲ್ಲ. ಈ ಬಗ್ಗೆ ಕೇಂದ್ರದವರು ಆಡಿಟ್ ಮಾಡಿ ರಿಪೋರ್ಟ ಸಹ ಕೊಟ್ಟಿದ್ದಾರೆ. ಆದರೆ ಮುಂದೆ ಏನಾಯಿತು ಗೊತ್ತಿಲ್ಲ. ಅಲ್ಲಿಯ ಜನರಿಗೆ ನೇರವಾಗಿ ರೇಷ್ಮೆ ಸಿಕ್ಕುವ ಹಾಗೆ ಏನಾದರೂ ಏರ್ಪಾಡು ಮಾಡಿ ಅವರಿಗೆ ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5.00 P.M.

†**Sri B. V. MAGAVI** (Haveri).—While supporting the Demand, I have a few observations to make regarding the flood relief measures taken in Dharwar District. The flood havoc caused by Varda river had affected in all 3,090 families and forty villages. The water level reached such a level which had not been reached even in 1882. The people were practically so much affected that they ran out at night and had to climb up the trees and take shelter all the night. This has altogether been forgotten by some of our people because it is already a year old, but what I would like to ask, is, what has been done in that connection. It was very kind of the then Chief Minister Mr. Jatti and the Pradesh Congress President to have visited that area and promised to the people every help and the people were so hopeful that Government would come to their rescue. A special officer was promised to be appointed for flood rehabilitation work and the appointment was made

later after nine months and up till now that officer has not taken charge. The affected people were told that zinc sheets would be provided to them, but no effort has been made to provide any such assistance. If Government has really been sincere and if they had tried their best, there would have been no difficulty in procuring the required zinc sheets and supplying them to these people. In my own taluk, Haveri, about 26 villages were affected. Out of these 26 villages, only five villages have come under the purview of flood relief work and the remaining 26 villages wherein the population was roughly 10,000 people or 2,090 families have not still been provided with anything. The rains themselves taking pity upon these people stopped for some time, but rains have already commenced in those areas. One can imagine the plight of 2,090 families who have got to spend the monsoon without food, clothing and shelter. I appeal to the Government that they have got to take this as a top priority because no other work is more humanitarian than the present work. Every effort should be made to acquire zinc sheets and provide them to the people affected and other things can be provided later. When the Government is re-constructing all the flood affected villages, I do not understand why they cannot think of constructing them on a planned basis, bringing them under the rural housing scheme. The present housing is too temporary and what is spent on the construction of these temporary sheds will be a waste of money. I do not understand why the rehabilitation officer who was appointed long back has not so far taken charge. He should be asked to go and immediately take over charge so that we can look to the temporary benefits that he can give to the people who are already affected. The people are now staying in thatched houses; the houses are already considerably damaged and they may collapse at any time endangering the life of so many people. So I would appeal to the Government in all humility that I can command, to look into this matter immediately. An officer may be deputed to the neighbouring State of Maharashtra wherein the works have been expedited and particularly the flood relief work in Poona is very commendable. If the neighbouring State can do this much, I do not understand why our State cannot do. I hope the concerned Minister and our ex-Chief Minister Mr. Jatti will take this into consideration since he himself saw the plight of these people with his own eyes. I would liks to tell Sri Jatti that the present position is not anything better than what he saw last year.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).-ಸ್ವಾಮಿ, ಈ ಸಹಕಾರ ಚಳವಳಿಯ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ನಮ್ಮ ದೇಶದ ನಾಯಕರೂ ಕೂಡ ಹೇಳುತ್ತಿರುವುದೇನೆಂದರೆ, ಸಹಕಾರ ಚಳವಳಿ ಚೆನ್ನಾಗಿ ಬೆಳೆದರೆ ದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ, ಅದನ್ನು ಮುಂದುವರಿಸಬೇಕು ಎಂದು. ಆದರೆ ಸಹಕಾರ ಇಲಾಖೆಯನ್ನು ನಡೆಸುತ್ತಿರುವ ರೀತಿಯನ್ನು ನೋಡಿದರೆ ಅವರು ಘೋಷಣೆ ಮಾಡುವ ನೀತಿಗೆ ಅನುಗುಣವಾಗಿಲ್ಲ. ಕಾಂಗ್ರೆಸ್ಸಿನವರು ಹಿಂದೆ ನಾಮಿನೇಷನ್ ಮಾಡುವ ಪದ್ಧತಿಗೆ ವಿರೋಧ ಮಾಡುತ್ತಿದ್ದರು. ಆದರೆ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಮೇಲೆ ತಮಗೆ ಬೇಕಾದವರನ್ನು ನಾಮಿನೇಷನ್ ಮಾಡುತ್ತಿರುವುದು ಪ್ರತಿಯೊಂದು ಸೊಸೈಟಿಯಲ್ಲಿಯೂ ಕಂಡು ಬರುತ್ತದೆ. ಸಹಕಾರ ಕ್ಷೇತ್ರದಲ್ಲಿ ರಾಜಕೀಯ ವಿರಬಾರದು ಎಂದು ಹೇಳುವ ಈ ಕಾಂಗ್ರೆಸ್ ಮಿತ್ರರೇ ರಾಜಕೀಯ ತರುತ್ತಿದ್ದಾರೆ. ತಮಗೆ ಬೇಕಾದವರನ್ನು ನಾಮಿನೇಷನ್ ಮಾಡಿಕೊಳ್ಳುತ್ತಿದ್ದಾರೆ. ಬೇರೆ ಪಕ್ಷದವರು ಬಂದು ಸೊಸೈಟಿಯ ರಜಿಸ್ಟ್ರೇಷನ್‌ಗಾಗಿ ಮೊದಲೇ 500 ರೂಪಾಯಿ ಕೂಡಿಸಿ ಕಟ್ಟಿದ್ದರೂ ಕೂಡ ಅದನ್ನು ರಿಜಿಸ್ಟರ್ ಮಾಡದೇ, ಕಾಂಗ್ರೆಸ್ಸಿನವರು ತಮಗೆ ಯಾರು ಬೇಕು ಅವರಿಂದ 500 ರೂಪಾಯಿ ಕಟ್ಟಿಸಿ ಮೊದಲೇ ರಿಜಿಸ್ಟರ್ ಮಾಡಿಸಿಕೊಳ್ಳುತ್ತಾರೆ. ಈ ರೀತಿ ಸಹಕಾರ ಚಳುವಳಿಯಲ್ಲಿ ರಾಜಕೀಯ ಬರಬಾರದು. ನಿಜವಾಗಿಯೂ ಸಹಕಾರ ಚಳವಳಿಯು ಬೆಳೆಯಬೇಕಾಗಿದ್ದರೆ, ಇದನ್ನು ನೀವು ಒಪ್ಪಿಕೊಳ್ಳುವದಾದರೆ, ರಾಜಕೀಯ ತರುವದನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಇದು ಸಹಕಾರ ಚಳವಳಿಯಾಗದೆ ಇದೊಂದು ರಾಜಕೀಯ ಚಳವಳಿಯಾಗುತ್ತದೆ, ನಿಜವಾದ ಸಹಕಾರ ಚಳವಳಿಯಾಗಲಾರದು. ಇನ್ನೊಂದು ಮುಖ್ಯವಾದ ವಿಷಯ ಇದೆ. ನಾಮಿನೇಷನ್ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಈ ಕ್ಷೇತ್ರದಲ್ಲಿ ಅನುಭವವಿದ್ದವರನ್ನು ತೆಗೆದುಕೊಳ್ಳಬೇಕು. ಅನುಭವವಿಲ್ಲದವರನ್ನು ತೆಗೆದುಕೊಳ್ಳಕೂಡದು. ಯಾರೋ ಚುನಾವಣೆಯಲ್ಲಿ ಸೋತಿದ್ದಾರೆ, ಅವರಿಗೊಂದು ಸ್ಥಾನ ಕೊಡಬೇಕು, ಅವರು ಕಾಂಗ್ರೆಸ್ ಪಕ್ಷದಲ್ಲಿ ಬೇಕಾದವರು ಎಂದು ಮಾತ್ರ ನೇಮಕ ಮಾಡಿಕೊಳ್ಳಬಾರದು. ಏಕೆಂದರೆ ಸಹಕಾರ ಚಳವಳಿ ಎಂದರೆ ಏನು ಎಂಬುದು ಸಹ ಅಂಥವರಿಗೆ ಗೊತ್ತಿರುವುದಿಲ್ಲ. ಸಹಕಾರದ ಬಗ್ಗೆ ಏನೇನೂ ತಿಳುವಳಿಕೆಯಿಲ್ಲದವರನ್ನು ಅನನುಭವಿಗಳನ್ನು ಸಹಕಾರ ಸಂಸ್ಥೆಗಳಲ್ಲಿ ನೇಮಕ ಮಾಡುವದರಿಂದ, ಇಂಥ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಲಕ್ಷಾಂತರ ಜನರಿಗೆ ಬಹಳ ಅನ್ಯಾಯ

(ಶ್ರೀ ಪಿ. ವೆಂಕಟಗಿರಿಯಪ್ಪ)

ಮಾಡುತ್ತೀದ್ದೀರೆಂದು ಬಹಳ ನಮ್ರತೆಯಿಂದ ತಿಳಿಸಬೇಕಾಗಿದೆ.

ಸಹಕಾರ ಚಳವಳಿಯೂ ನಿಜವಾಗಿಯು ಯಶಸ್ವಿಯಾಗಿ ಬೆಳೆಯಬೇಕಾದರೆ ಅದಕ್ಕೆ ಸರಕಾರದವರು ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಕೆಲವು ಸೊಸೈಟಿಗಳಲ್ಲಿ ಎಷ್ಟೋ ಅನ್ಯಾಯ ನಡೆಯುತ್ತಿದೆ. ಸರಿಯಾಗಿ ಆಡಿಟ್ ಆಗಿರುವದಿಲ್ಲ. ಕೆಲವು ಅಧಿಕಾರಿಗಳು ಸೊಸೈಟಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ನೋಡಿಕೊಳ್ಳುವದಿಲ್ಲ, ಸಹಕಾರ ಚಳವಳಿಯು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿರುವದರಿಂದ ಜನರು ಸೊಸೈಟಿಯ ಏಳಿಗೆಗಾಗಿ ಕೆಲಸ ಮಾಡುತ್ತಾರೆ. ಅಂಥ ಅಧಿಕಾರಿಗಳನ್ನು ತಕ್ಷಣ ಟ್ರಾನ್ಸ್‌ಫರ್ ಮಾಡಬೇಕು. ನ್ಯಾಯವಾದ ರೀತಿಯಲ್ಲಿ ಅಂಥ ಅಧಿಕಾರಿಗಳನ್ನು ಸಂಸ್ಥೆಯಿಂದ ತೆಗೆದು ಹಾಕಿ, ದಕ್ಷರಾದವರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಕೆಲವು ಸಂಸ್ಥೆಗಳಲ್ಲಿ ಕೆಲಸಮಾಡುವುದಕ್ಕೆ ಲಾಯಖ್ ಇಲ್ಲದ ಜನರನ್ನು ಹಾಕಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಹೇಳಿದರೂ ಕೂಡ ಅವರು ಏನೂ ಗಮನ ಕೊಡುವುದಿಲ್ಲ. ಅವರಿಗೆ ಬೇರೆ ಯಾರದೋ ಪ್ರಭಾವವಿದೆ. ಸಾಧ್ಯವಾದ ಮಟ್ಟಿಗೂ ಸರ್ಕಾರದವರು ಪಕ್ಷಗಳ ಪ್ರಶ್ನೆಯನ್ನು ಸಹಕಾರ ಕ್ಷೇತ್ರದಲ್ಲಿ ತರಬಾರದೆಂದು ಕೇಳಿಕೊಳ್ಳುತ್ತೇನೆ.

ಪೆನ್‌ಷನರ್‌ಗಳ ವಿಷಯ ಕೆಲವರು ಹೇಳಿದ್ದಾರೆ. ಅಧಿಕಾರಿಗಳು 25–30 ವರ್ಷ ಸರ್ಕಾರದಲ್ಲಿ ಕೆಲಸ ಮಾಡಿ ಅವರು ನಿವೃತ್ತರಾಗಿ ಮೂರು ನಾಲ್ಕು ವರ್ಷಗಳಾದರೂ ಕೂಡ ಪೆನ್ಷನ್ ದೊರೆಯುತ್ತಿಲ್ಲ. ಹೀಗೆ ಪೆಂಡಿಂಗ್‌ನಲ್ಲಿ ಇರುವುದು ಸರಿಯಾದುದಲ್ಲ. ಅವರಿಗೆ ಏನೂ ಕೆಲಸವಿಲ್ಲದೆ ಪೆನ್ಷನ್ ಸಹ ಇಲ್ಲದೆ ಬಹಳ ತೊಂದರೆ ಪಡುತ್ತಾರೆ. ಸರ್ಕಾರದಲ್ಲಿ ಕೆಲಸಮಾಡಿ ನಿವೃತ್ತರಾದವರ ಬಗ್ಗೆ ಈ ರೀತಿ ನಡೆದುಕೊಳ್ಳುವುದು, ಪ್ರಜಾಪ್ರಭುತ್ವ ಸರ್ಕಾರವೆಂದು ಹೇಳಿಕೊಳ್ಳುವ ಸರ್ಕಾರಕ್ಕೆ ನಾಚಿಕೆಗೇಡಿನ ವಿಷಯ. ಯಾವುದೇ ಸಂದರ್ಭದಲ್ಲಾಗಲೀ ಒಬ್ಬ ಮನುಷ್ಯನು ಕೆಲಸದಿಂದ ನಿವೃತ್ತನಾದ ಎರಡು ಮೂರು ತಿಂಗಳೊಳಗೆ ಅವನಿಗೆ ಬರಬೇಕಾದ್ದನ್ನೆಲ್ಲ ಕೊಟ್ಟು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸರ್ಕಾರವನ್ನು ಸಮಾಜವಾದಿ ಸಮಾಜವನ್ನು ಕಟ್ಟುವಂತಹ ದಾರಿಯಲ್ಲಿ ನಡೆಸುತ್ತೇವೆಂದು ತಿಳಿಸುತ್ತಿದ್ದಾರೆ. ಆದರೆ ನಮ್ಮ ಸರ್ಕಾರದವರು ಕಾರ್ಮಿಕರ ವಿಷಯದಲ್ಲಿ ನಡೆದುಕೊಳ್ಳುವ ರೀತಿಯನ್ನು ನೋಡಿದರೆ ನಿಜವಾಗಿಯೂ ಹಿಂದೆ ಬೇಜವಾಬ್ದಾರಿ ಸರ್ಕಾರ ಅಥವಾ ಇಂಗ್ಲಿಷ್ ಸರ್ಕಾರ ಎಂದು ಏನು ಹೇಳುತ್ತಿದ್ದರೋ ಅದಕ್ಕಿಂತ ಕೆಳಮಟ್ಟದಲ್ಲಿ ಹೋಗುತ್ತಿದೆ. ಈ ದಿವಸ ಕಾರ್ಮಿಕರಿಗೆ ವಸತಿ ಸೌಕರ್ಯ ಬಹಳ ಮುಖ್ಯವಾದುದು. ಬೆಂಗಳೂರಿನಂಥದೊಡ್ಡ ಪಟ್ಟಣದಲ್ಲಿ ಬೃಹತ್ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಕೇಂದ್ರ ಸರ್ಕಾರದಿಂದ ಮತ್ತು ನಮ್ಮ ಸರ್ಕಾರದಿಂದ ಸ್ಥಾಪಿತವಾಗುತ್ತಿವೆ. ಆದರೆ ಕಾರ್ಮಿಕರ ವಸತಿಯ ಬಗ್ಗೆ ಟ್ರಸ್ಟ್ ಬೋರ್ಡ್ ಆಗಲೀ, ಕಾರ್ಪೊರೇಷನ್ ಆಗಲೀ, ಸರ್ಕಾರವೇ ಆಗಲೀ, ಯಾರೂ ಕೂಡ ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ನೂರಕ್ಕೆ ಹತ್ತು ಜನ ಕಾರ್ಮಿಕರಿಗೆ ವಸತಿಯನ್ನು ಒದಗಿಸುವುದಕ್ಕೆ ಆಗಿಲ್ಲ. ಎಷ್ಟೋ ಜನ ಕಾರ್ಮಿಕರು ಕೊಳಕು ಪ್ರದೇಶ (slums) ಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಮೊನ್ನೆ ಜವಹರಲಾಲ್ ನೆಹರೂ ಅವರು ಇಲ್ಲಿಗೆ ಬಂದಿದ್ದಾಗ ಕೊಳಕು ಪ್ರದೇಶಗಳು ಪಟ್ಟಣಗಳಲ್ಲಿ ಇರಲೇಬಾರದು ಎಂದು ಹೇಳಿದರು. ಸ್ವರಾಜ್ಯ ಬಂದಾಗಿನಿಂದ ಕೊಳಕು ಪ್ರದೇಶಗಳನ್ನು ನಿರ್ಮೂಲ ಮಾಡಬೇಕೆಂದು ಹೇಳುತ್ತಿದ್ದಾರೆ. ಸೇಕಡ 50-60 ಜನ ಇಂಥ ಕೊಳಕು ಪ್ರದೇಶಗಳಲ್ಲಿ ಜೀವನಮಾಡಿ, ನಮ್ಮ ಕಾರ್ಖಾನೆಗಳಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡಬೇಕಾಗಿದೆ. ಈ ಪರಿಸ್ಥಿತಿ ಆದಷ್ಟು ಜಾಗ್ರತೆ ಹೋಗಬೇಕು. ಕಾರ್ಮಿಕರ ವಿಷಯದಲ್ಲಿ ಸರ್ಕಾರದ ಧೋರಣೆ ಬದಲಾವಣೆಯಾಗಿ ಸಾಕಾದಷ್ಟು ಹಣವನ್ನು ಕಾರ್ಮಿಕರಿಗೆ ವಸತಿಯನ್ನು ಕಲ್ಪಿಸಿಕೊಡುವುದಕ್ಕಾಗಿ ಮೀಸಲಿಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ನಿರುದ್ಯೋಗದ ಬಗ್ಗೆ employment exchange office ಇದೆ. ಇದರ ವಿಚಾರವಾಗಿ ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿದೆ. ನಮಗೆ technical people ಬೇಕು, ಡಾಕ್ಟರುಗಳು ಮತ್ತು ಇಂಜಿನಿಯರ್‌ಗಳ ಅಭಾವವಿದೆ ಎಂದು ಹೇಳುತ್ತಾರೆ. ಆದರೆ ನೂರಾರು ಜನ electrical diploma ಮತ್ತು mechanical diploma ಪಡೆದಿರುವವರು ಕೆಲಸವಿಲ್ಲದೆ ಎರಡು ಮೂರು ವರ್ಷದಿಂದ ಅಲೆದಾಡುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. Employment exchange ನಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಮೊದಲು ಯಾವುದೋ ಕೆಲಸಕ್ಕೆ ಅರ್ಜಿ ಹಾಕಿದ್ದು ಅವನ ಹೆಸರನ್ನು ರಿಜಿಸ್ಟರ್ ಮಾಡಿರುತ್ತಾನೆ. ಅನಂತರ ಡಿಪ್ಲೋಮಾ ಪಡೆದರೆ, ಪಧವೀಧರನಾದರೆ, ಆಗ ಬೇರೆ ಕೆಲಸಕ್ಕೆ ಅದನ್ನು ಬದಲಾಯಿಸಬೇಕು ಎಂದರೆ ಅದಕ್ಕೆ ಬ್ರಹ್ಮಾಂಡ ರಿಕಾರ್ಡ್ ಆಗಬೇಕು, ನಾನಾ ರೀತಿಯಿಂದ ನಿರುದ್ಯೋಗಿಗಳು ಕೆಲಸವಿಲ್ಲದೆ ಕಷ್ಟಪಡುವುದಲ್ಲದೆ employment exchange ಆಫೀಸಿನಲ್ಲಿ ಹತ್ತಾರು ರೂಪಾಯಿಗಳನ್ನು ಗುಮಾಸ್ತರಿಗೆ ಕೊಟ್ಟು ಬಹಳ ತೊಂದರೆ ಪಡುತ್ತಿದ್ದಾರೆ. ಈ ಆಫೀಸಿನಲ್ಲಿ ಬೇಕಾದಷ್ಟು ಸಿಬ್ಬಂದಿಯನ್ನಿಟ್ಟು ನ್ಯಾಯವಾದ ರೀತಿಯಲ್ಲಿ ನಿರುದ್ಯೋಗಿಗಳಿಗೆ ಕೆಲಸ ಒದಗಿಸಲು ಸರಿಯಾದ ಕೆಲಸ ನಡೆಯಿಸಬೇಕು. Employment exchange officeನಲ್ಲಿನಿರುದ್ಯೋಗಿಗಳಿಗೆ ತೊಂದರೆ ಕೊಡುವಂಥ ವ್ಯವಸ್ಥೆ ಆಗಬಾರದೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನನಗೆ ಕೊಟ್ಟಿರುವ, ಸ್ವಲ್ಪ ವೇಳೆಯಲ್ಲಿ ಕೆಲವು ವಿಚಾರಗಳನ್ನು ಹೇಳಲಕ್ಕೆ ನಿಜವಾಗಿಯೂ ಬಹಳ ತೊಂದರೆಯಾಗುತ್ತದೆ. ಆದರೂ ಒಂದೆರಡು ವಿಷಯಗಳನ್ನು ಹೇಳಲು ಪ್ರಯತ್ನಿಸುತ್ತೇನೆ.

ನಮ್ಮ ಪ್ರಾಂತ್ಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಅನೇಕ ಸಂಸ್ಥೆಗಳು ಸಂಖ್ಯೆಯಲ್ಲಿ ಹೆಚ್ಚಾಗಿವೆ, ಸಂಸ್ಥೆಗಳ ಸದಸ್ಯರ ಸಂಖ್ಯೆ ಹೆಚ್ಚಾಗಿದೆ. ಹೀಗೆ ಹೆಚ್ಚಾಗುತ್ತಾ ಇದೆ. ಇವೆಲ್ಲವನ್ನೂ ವಿಚಾರಮಾಡಿ ಸರ್ಕಾರ ಕಳೆದ 8-10 ವರ್ಷಗಳಿಂದ ಅನೇಕ ರೀತಿಯಲ್ಲಿ ಷೇರು ಬಂಡವಾಳ, ಸಾಲ, ರಿಸರ್ವ್ ಬ್ಯಾಂಕ್ ಮತ್ತು debenture guarantee ವಗೈರೆ ಕೊಟ್ಟು ಅನೇಕ ರೀತಿಯಿಂದ ಸಾಲ ದೊರೆಯುವಂತೆ

ಮಾಡುತ್ತಾ ಇರುವುದನ್ನು ನೋಡಿದರೆ ಸಹಕಾರ ಆಂದೋಳನ ನಮ್ಮ ಪ್ರಾಂತದಲ್ಲಿ ಹೆಚ್ಚಳವಾದ ಖ್ಯಾತಿಯನ್ನು ಸಾಧಿಸಿದೆ ಎಂದು ಹೇಳಬಹುದು. ಇದೆಲ್ಲ ಪ್ರಗತಿಗೆ ಮೂಲ ಕಾರಣ ಮತ್ತು ಸ್ಫೂರ್ತಿಯನ್ನು ಕೊಟ್ಟದ್ದು Rural Credit Survey Report ಎಂದು ಹೇಳಬಹುದು. ಈ ಕಮಿಟಿ ಕೆಲವು ಕ್ರಾಂತಿಕಾರಕ ಸೂಚನೆಗಳನ್ನು ಮತ್ತು ಸಲಹೆಗಳನ್ನು ಮಾಡಿತು. ಆ ಸಲಹೆ ಮತ್ತು ಸೂಚನೆಗಳನ್ನು ಕೇಂದ್ರ ಮತ್ತು ಪ್ರಾಂತ ಸರ್ಕಾರಗಳು ಒಪ್ಪಿ ಅದರಂತೆ ನಡೆಯುತ್ತ ಬಂದುದರಿಂದಲೇ ಇಷ್ಟು ಪ್ರಗತಿಯಾಗಿದೆ ಎಂದು ಹೇಳಬಹುದು. Rural Credit Survey Committee ಅವರು ರೈತನು ಶತಮಾನಗಳಿಂದ, ಸಹಸ್ರಾರು ವರ್ಷಗಳಿಂದ ಬಡತನದಲ್ಲಿ ಮತ್ತು ಸಾಲಗಳಲ್ಲಿ ನರಳುತ್ತಿರುವ ಪರಿಸ್ಥಿತಿಯನ್ನು ತಪ್ಪಿಸಿ ಅವನಿಗೆ ಯಾವುದಾದರೂ ಒಂದು ಪರಿಹಾರವನ್ನು ಹುಡುಕಿ ಹೇಳಬೇಕೆಂದು ದೀರ್ಘವಾಗಿ ವಿಚಾರಮಾಡಿ ತಮ್ಮ ರಿಪೋರ್ಟನ್ನು ಕೊಟ್ಟರು ಆ ಕಮಿಟಿಯವರು ಕೆಲವು ವಿದ್ಯಮಾನಗಳನ್ನು ಕಂಡು ಹಿಡಿದರು. ಅವು ಏನೆಂದರೆ 40-50 ವರ್ಷಗಳಿಂದ ಸಹಕಾರ ಸಂಸ್ಥೆಗಳು, ಕ್ರೆಡಿಟ್ ಸೊಸೈಟಿಗಳು, ಮಾರ್ಕೆಟಿಂಗ್ ಸೊಸೈಟಿಗಳು ಇವೆಲ್ಲ ಇದ್ದರೂ ರೈತನಿಗೆ ಬೇಕಾದ ಯೋಗ್ಯವಾದ ಪರಿಹಾರವನ್ನು, ಸಾಕಷ್ಟು ಪರಿಹಾರವನ್ನು ಕೊಟ್ಟಿರಲಿಲ್ಲ ಶ್ರೀಮಾನ್ ಎ. ಎಸ್. ಪಾಟೀಲರು ಹೇಳಿದಂತೆ ರೈತರಿಗೆ ಬೇಕಾದ ಸಾಲದಲ್ಲಿ ನೂರಕ್ಕೆ ಮೂರು ಭಾಗ ಮಾತ್ರ ದೊರಕಿಸಿ ಕೊಟ್ಟಿದ್ದರು. ರೈತರಿಗೆ ಈ ಭಾಗದಲ್ಲಿ ಸುಮಾರು 750 ಕೋಟಿ ರೂಪಾಯಿಗಳು ಸಾಲ ಪ್ರತಿವರ್ಷ ಬೇಕಾಗುತ್ತದೆ. ಮತ್ತು ರೈತನು ನಿರ್ಜೀವನಾಗಿ, ನಿರ್ವೀರ್ಯನಾಗಿ ಸಹಸ್ರಾರು ವರ್ಷಗಳಿಂದ ಇರಲಿಕ್ಕೆ ಕಾರಣವೇನೆಂದರೆ, ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಅವನನ್ನು ಶೋಷಣೆ ಮಾಡುವ ಸಾಹುಕಾರರು ಮತ್ತು ದಳ್ಳಾಳಿಯವರು ಇರುತ್ತಾರೆ. ಇಂಥ ಶೋಷಣೆಕಾರರಿಂದ ರೈತನನ್ನು ಪಾರು ಮಾಡಬೇಕಾದರೆ ಅದಕ್ಕೆ ಸರ್ಕಾರದವರು ಕಂಕಣಬದ್ಧರಾಗಿ ನೆರವಿತ್ತರೆ ಸಾಧ್ಯವೆಂದು ಅವರು ತಮ್ಮ ರಿಪೋರ್ಟಿನಲ್ಲಿ ಮಹತ್ವವಾದ ಕೆಲವು ಸೂಚನೆಗಳನ್ನು ಕೊಟ್ಟರು. ರೈತನಿಗೆ ಶೋಷಣೆ ಮಾಡುವ ಅನೇಕ ವರ್ಗಗಳ ಪೈಕಿ ಮುಖ್ಯವಾದ ವರ್ಗಗಳನ್ನು ಹೇಳಿದ್ದಾರೆ. ಅವರು ಯಾರೆಂದರೆ, ಹಳ್ಳಿಗಳಲ್ಲಿರುವ ಸಣ್ಣ ಸಾಹುಕಾರ, ಸಣ್ಣ ವ್ಯಾಪಾರಸ್ಥ, ಒಕ್ಕಲುತನದ ವ್ಯಾಪಾರಮಾಡುವವ, ಹಳ್ಳಿಯಗೌಡ, ಕುಲಕರ್ಣಿ, ಪೇಟೆಯಲ್ಲಿ ರೈತನ ಮಾಲನ್ನು ಮಾರಾಟ ಮಾಡುವವ, ವ್ಯವಹಾರ ಮಾಡುವವ, ದಳ್ಳಾಳಿ ಮತ್ತು ದೊಡ್ಡ ಸಾಹುಕಾರ, ಕೇಂದ್ರದ ಪಟ್ಟಣದೊಳಗೆ ಇರುವ ಅದಕ್ಕಿಂತ ದೊಡ್ಡ ವ್ಯಾಪಾರಸ್ಥ, ಈ ಪ್ರಕಾರ ಅನೇಕ ವರ್ಗದವರ ಮಧ್ಯದಲ್ಲಿ ರೈತನಾದವನು ಸಿಲುಕಿ ಹೋಗಿದ್ದಾನೆ.

ಸುಲಗೆಗಾರರಿಂದ ಪಾರುಮಾಡಬೇಕಾದರೆ ಸರ್ಕಾರದವರು ರೈತನ ಹಿಂದೆ ನಿಂತು, ರೈತರಿಗೆ ಯೋಗ್ಯ ಬಡ್ಡಿದರದಲ್ಲಿ ಸಾಲ ಸಿಗುವ ಹಾಗೆ ಮಾಡಬೇಕು. ರೈತರಿಗೆ ಬೇಕಾದ ಸಾಲ ಯೋಗ್ಯದರದಲ್ಲಿ ಸಿಗುವುದಕ್ಕೆ ಮಾರ್ಕೆಟಿಂಗ್ ಸೊಸೈಟಿಗಳನ್ನು, ಅಪೆಕ್ಸ್ ಸೊಸೈಟಿಗಳನ್ನು ನಿರ್ಮಾಣಮಾಡಬೇಕು. ಗೋಡೌನುಗಳ ಸಹಾಯವನ್ನು ಮಾಡಿಕೊಡಬೇಕು. ಸರ್ಕಾರ ರೈತನ ಹಿಂದೆ ನಿಂತು ಯೋಗ್ಯ ಸಹಕಾರ ಸಂಸ್ಥೆಗಳನ್ನು ಸ್ಥಾಪನೆ ಮಾಡಬೇಕು. ರೈತರಿಗೆ ಅವಶ್ಯಕವಾದ ಹಣ ರಿಸರ್ವ್‌ಬ್ಯಾಂಕಿನಿಂದಲೇ ಆಗಲಿ, ಮತ್ತಾವ ಬ್ಯಾಂಕಿನಿಂದಲೇ ಆಗಲಿ ದೊರೆಯುವ ಹಾಗೆ ಮಾಡಬೇಕೆಂದು ಶಿಫಾರಸು ಮಾಡಿದರು. ಕೆಲವು ಕಾಲದಿಂದ ಈ ಸಹಕಾರ ಚಳುವಳಿ ಪ್ರಗತಿಹೊಂದಿದೆ ಎಂದು ಅವರು ಹೇಳಿದರು. ಆದರೆ ಅದನ್ನು ದೂರದಿಂದ ನೋಡಿದರೆ, ಪ್ರಗತಿ ಇರುವ ಹಾಗೆ ಕಂಡು ಬರುತ್ತದೆ. ಸಮೀಪದಲ್ಲಿ ನೋಡಿದರೆ, ಅದರ ಗುಣ ವಿಮರ್ಶೆ ಮಾಡುವುದಾದರೆ ಅಷ್ಟೊಂದು ಪ್ರಗತಿಯಾಗಿರುವುದು ಕಂಡುಬರುವುದಿಲ್ಲ ; ಅದು ಹಿಂದುಳಿದಿದೆಯೇನೋ, ಅಡ್ಡದಾರಿ ಹೋಗುತ್ತಿರಬಹುದೇನೋ ಎಂಬ ಭಯವೂ, ಅಸಮಾಧಾನವೂ ಕಂಡುಬರುತ್ತದೆ. ರೂರಲ್ ಕ್ರೆಡಿಟ್ ಕಮಿಟಿಯವರು ಶಿಫಾರಸು ಒಂದು ಮಾಡಿದರು ದುಂದುಗಾರರು ಯಾರಿದ್ದಾರೋ, ಹಾಸಿಗೆ ಇದ್ದಷ್ಟು ಯಾರು ಕಾಲುಚಾಚುವುದಿಲ್ಲವೋ, ಸಾಲ ಹಿಂದಕ್ಕೆ ಕೊಡುವ ಶಕ್ತಿ ಯಾರಿಗೆ ಇರುವುದಿಲ್ಲವೋ ಅಂಥವರಿಗೆ ಸಹಕಾರ ಸಂಘಗಳಲ್ಲಿ ಅವಕಾಶ ಕೊಡಿ ಎಂದು ಹೇಳಿದರು. ಇದರಿಂದ ಸಂಭಾವಿತ ರೈತರು ಸಹಕಾರ ಸಂಸ್ಥೆಗಳ ಮೆಂಬರಾಗುವುದಕ್ಕೆ ಇಷ್ಟಪಡುವುದಿಲ್ಲ; ಅವರು ಸೇರಲಿಕ್ಕೆ ಏಕೆ ಭಯಪಡುತ್ತಾರೆಂದರೆ ಹಾಸಿಗೆ ಇದ್ದಷ್ಟು ಕಾಲುಚಾಚದಂಥವರು ಸಹಕಾರ ಸಂಘದ ಸದಸ್ಯರಾದರೆ ಸಾಲ ಸೆಂಟ್‌ಪರ್ಸೆಂಟ್ ರಿಕವರಿಯಾಗದೆ, ತಾವು ಮುಂದಕ್ಕೆ ಪೇಚಿಗೆ, ಬೀಳುವುದಲ್ಲದೆ ಪ್ರಗತಿಯ ದಾರಿಯಲ್ಲಿ ಸಂಘವನ್ನೂ ಒಯ್ಯಲಿಕ್ಕೆ ಆಗುವುದಿಲ್ಲವೆಂದು. ಆದ್ದರಿಂದ ಸಂಘಗಳು ಹಾಳಾಗುತ್ತವೆ. ರೂರಲ್ ಕ್ರೆಡಿಟ್ ಸರ್ವೆ ರಿಪೋರ್ಟಿನ ಶಿಫಾರಸಿನಲ್ಲಿ ಇನ್ನೊಂದು ದೋಷವಿದೆ. ರೈತನಿಗೆ ತನ್ನ ಕೃಷಿಗೆ, ಬೆಳೆಬೆಳೆಯುವುದಕ್ಕೆ ಎಷ್ಟು ಸಾಲಬೇಕೋ ಅಷ್ಟನ್ನು ಮಾತ್ರ ಕೊಡತಕ್ಕಂಥಾದ್ದು ಎಂದು ಹೇಳಿದ್ದಾರೆ. ರೈತನ ಮಕ್ಕಳು ಕಾಲೇಜಿಗೆ ಹೋಗುವವರು ಇದ್ದರೆ, ಮನೆಯಲ್ಲಿ ಯಾರಾದರೂ ಕಾಹಿಲೆ ಬಿದ್ದಿದ್ದರೆ ಇಂಥ ಪ್ರಸಂಗಗಳಿಗೆ ಸಾಲ ಕೊಡಬಾರದು ಎಂಬ ಒಂದು ತತ್ವವನ್ನು, ಒಂದು ಸೂತ್ರವನ್ನು ಮಾಡಿದರು. ಇದರ ಪರಿಣಾಮ ಏನಾಯಿತೆಂದರೆ ಹಳ್ಳಿಯಲ್ಲಿ ಪ್ರತಿಯೊಬ್ಬ ರೈತನಿಗೂ ಕೃಷಿಗೆಮಾತ್ರ ಸಾಲ ಸಿಕ್ಕಿ, ಅವನ ಉಳಿದ ಖರ್ಚುಗಳಿಗೆ ಸಹಕಾರ ಸಂಸ್ಥೆಗಳಲ್ಲಿ ಸಾಲ ದೊರೆಯದೆ ಹೋದರೆ ಅವರು ಪಟ್ಟಣಗಳಲ್ಲಿ ದಳ್ಳಾಳಿ ಕಡೆಗಳಿಂದ ಸಾಲ ತೆಗೆಯುತ್ತಾರೆ. ಆಗ ಡಿವೈಡೆಡ್ ಲಾಯಲ್ಟಿ ಬರುತ್ತದೆ. ಸಹಕಾರ ಸಂಸ್ಥೆಗಳಲ್ಲಿಯೂ ಸಾಲ ತೆಗೆಯುತ್ತಾರೆ, ದಳ್ಳಾಳಿಗಳಲ್ಲಿಯೂ ಸಾಲ ತೆಗೆಯುತ್ತಾರೆ. ಇವತ್ತಿನ ದಿವಸ ಇದರಿಂದ ಬಹಳ ದುಷ್ಪರಿಣಾಮವಾಗಿದೆ. ಸಹಕಾರ ಸಂಸ್ಥೆಗಳನ್ನು ಸ್ಥಾಪನೆಮಾಡುವುದು ಬಡವರನ್ನು ಸುಲಗೆಗಾರರ, ಶೋಷಣೆಕಾರರ ಸುಲಗೆಯಿಂದ ತಪ್ಪಿಸಬೇಕೆಂಬ ಒಂದು ತತ್ವದ ತಳಹದಿಯಮೇಲೆ ಈ ಸಹಕಾರ ಸಂಘದ ಸದಸ್ಯರು ಇಲ್ಲಿಯೂ ಸಾಲ, ಅಲ್ಲಿಯೂ ಸಾಲ ತೆಗೆದುಕೊಳ್ಳುವ ಹಾಗೆ ಮಾಡಿದರೆ; ಈ ಸಹಕಾರ ಚಳುವಳಿಯನ್ನು, ಆಂದೋಳನವನ್ನು ಯಾರು ಯಶಸ್ವಿ ಮಾಡಬಲ್ಲರು ? ಕೃಷಿಗೆ ಬಿಟ್ಟು ಉಳಿದ ಸಾಲವನ್ನು ಬೇರೆಕಡೆಗೆ ತೆಗೆದುಕೊಳ್ಳಬೇಕಾಗಿರುವುದರಿಂದ ರೈತರಿಗೆ ಬಹಳ ಕಠಿಣವಾಗಿದೆ. ನಾನು ಸೂಚನೆ ಮಾಡುವುದು ಇಷ್ಟು : ಸರ್ಕಾರದವರೇ ಆಗಲಿ, ಪ್ಲಾನಿಂಗ್ ಕಮಿಷನ್ನಿನವರೇ ಆಗಲಿ, ಯಾರೇ ಆಗಲಿ ಕೃಷಿ ಸಲುವಾಗಿ ಮಾತ್ರ ಸಾಲ ಕೊಡಬೇಕು, ಇತರ ಸಲುವಾಗಿ ಯಾವ ಕೆಲವು ಸಾಲಗಳು ಬೇಕೋ ಅವುಗಳನ್ನು ಮಂಜೂರುಮಾಡಬಾರದೆಂಬ ನಿಯಮವನ್ನು ಮಾಡಬಾರದು. ಎರಡನೆಯದಾಗಿ ಯಾರಿಗೆ ಸಾಲ ತೀರಿಸುವುದಕ್ಕೆ ಶಕ್ತಿ ಇದೆಯೋ ಅಂಥವರನ್ನೇ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಇತರರನ್ನು ಸಂಘಗಳ

(ಶ್ರೀ ಎಂ. ಆರ್. ಪಾಟೀರ್)

ಸದಸ್ಯತ್ವದಿಂದ ಹೊರಗಿಡಬೇಕೆಂಬ ಒಂದು ನಿಯಮವನ್ನು ಕಡ್ಡಾಯವಾಗಿ ಮಾಡಬೇಕು. ಇನ್ನು ಒಂದೇ ಒಂದು ಸಲಹೆ ಏನೆಂದರೆ ಸಾಲ ಕೊಡುವವರು, ವ್ಯಾಪಾರಸ್ಥರು ಮತ್ತು ಇತರ ವಿಧಗಳಲ್ಲಿ ಜನಗಳನ್ನು ಶೋಷಣೆಮಾಡುವವರು ಮಾರ್ಕೆಟಿಂಗ್ ಸೊಸೈಟಿ, ಅಪೆಕ್ಸ್ ಬ್ಯಾಂಕುಗಳು ಮುಂತಾದ ಸಹಕಾರಸಂಸ್ಥೆಗಳ ಚುನಾಯಿತ ಅಥವ ನಾಮಿನೇಟೆಡ್ ಸದಸ್ಯರಾಗಲು ಅವಕಾಶವಿರಬಾರದು, ಅಂಥವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾ ಹೋದರೆ ಸಹಕಾರ ಸಂಘಗಳು ಹೇಗೆ ಊರ್ಜಿತವಾಗಬಲ್ಲವು? ರೈತರು ಸಹಕಾರ ಸಂಘಗಳಿಂದಾಗಲಿ, ಬಂಡವಾಳಗಾರರಿಂದಾಗಲಿ ಶೋಷಣೆಗೆ ಒಳಗಾಗದಹಾಗೆ ಏರ್ಪಾಡು ಇರಬೇಕು.

ವೇಳೆಇಲ್ಲದ್ದರಿಂದ, ನನ್ನ ಒಂದೆರಡು ಮಾತುಗಳನ್ನು ಮುಗಿಸಿ, ತಮ್ಮ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

Sri P. F. D'MELLOW (Nominated).—Mr. Speaker, Sir, on the Health Budget, the Government were pleased to state that they had decided to establish hospitals for the chronic sick in about two years' time. That announcement has been received with a good deal of satisfaction and relief by a large number of citizens of the State. But within the next two years, these citizens, who are chronically sick will be put to great difficulty if they have to wait for two years before the Government can establish these hospitals. I therefore plead on their behalf that once the principle of establishing the hospitals is accepted, the Government should take the next step even at this stage to make some provision. These chronic sick, to a certain extent, have already been given aid by voluntary organisations, and therefore some provision should be made to continue such aid which is a very vital relief. Rather than allowing these institutions to continue as they are at the moment without any form of grant or relief, I would request Government to be pleased to accept the principle of extending immediate grant in-aid or some assistance to such institutions as are undertaking this work on behalf of the chronically sick. As regards the standard of the hospitals run by these institutions, the Mysore State Social Welfare Advisory Board will be competent to advise the Government on this point. I, therefore, plead with Government to take immediate steps to consider the question of granting some aid or relief to these institutions.

5-30 P.M.

AN HON'BLE MEMBER.—May I know on what Demand the hon'ble member is speaking?

Sri P. F. D'EMELLOW.—Relief to the chronically sick has been recognized the world over as coming within the purview of social welfare organisations. As a matter of fact, my plea is based essentially on the views of an eminent authority, the Chairman of the Central Social Welfare Board Smt. Durgabai Deshmukh. With your permission I should like to refer to a foreword written by her to a publication of the Central Social Wefare Board. Speaking of the role of voluntary organisations she says that voluntary effort is an element required in every scheme for the benefit of the community. It is as valuable as it is indispensable and it has played a very important part in India's constitutional set-up and individuals as well as groups of individuals coming together have realised the work of this section of society which has suffered from one handicap or another. Government have recognized that assistance to the voluntary organisations which are struggling to-day is necessary and is within the ambit of State responsibility.

My next plea is on behalf of another section of humanity, the pensioners I would request Government to view the suggestions of the pensioners for some sort of relief or assistance from an entirely different approach and not from the angle of charity. In this connection I would like to refer you to the views of sociologists in other advanced countries. In America it is claimed that almost every twenty four hours, 3,000 more persons join the ranks of those who are called senior citizens. I am sure the findings of this enquiry carried out in other countries would be equally true in our country also if a study of the conditions of our senior citizens is made. We should not forget that they are not merely pensioners or retired citizens, but they are as much human beings as

anybody else even after they leave the field of active work. The case of the senior citizens has to be viewed from a realistic approach in view of the fact that they still continue to be voters. With the rise in prices and with their fixed income, the problems facing them are the same as those facing the class of senior citizens in all societies which claim to be working towards a socialistic pattern of society. I plead with the Government to view the case of the pensioners not on the basis of the representations made by them for restoration of some cut here or there or some exemption here or there, but on the basis that the welfare of this class of senior citizens is the responsibility of the State. Even though he has retired from active life he still continues to be protected by the Constitution in its directive principles. I know that it has become the fashion of almost all pensioners' associations to make representations and to receive the usual reply that the matter is under consideration. But I am sure the present Government and the Finance Minister will view the problems of the pensioners from an entirely different angle and will try their best to increase their pensions and give them such other facilities as are possible. Surely it should not be difficult for Government to extend to them such medical facilities as they were enjoying while in service and bring them within the ambit of the Employees State Insurance Scheme and also to give them concessions in the matter of the education of their children. I believe that this is a measure which is long overdue. I appeal to the Mysore Government to give a lead in this matter.

Thank you.

Several Hon'ble members rose

Mr. SPEAKER.—There are only 20 minutes more. The Chair has a suggestion to make. A suggestion has come from some members that the time limit may be 5 minutes each so that 4 more members may participate. As suggested by the Chair in the case of the previous demand, if there are any important points which should not be missed, they can be given to the Chair in writing by about 6-30 p.m. That will be passed on to the Ministers and they should be able to answer them today failing any information that may not be available. If that is not possible, it must be possible for them to explain them tomorrow at the time of the Appropriation Bill where there is no scope for any discussion except for clarification of the points which may not have been covered by this debate. The Chair suggests that such of the members as are desirous may kindly give if they so choose, the points they would like the Hon'ble Ministers to deal with in their reply.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರ ಪುರ).—ಈ ಬೇಡಿಕೆಗಳ ಮೇಲೆ ಉತ್ತರ ಕೊಡುವುದಕ್ಕೆ ಮಂತ್ರಿಗಳಿಗೆ ಒಂದು ಗಂಟೆ ಸಾಕು ಎಂದು ಹೇಳಿದ್ದಾರೆ. ಆದ್ದರಿಂದ ಈ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ 6½ ಗಂಟೆಯವರೆಗೆ ಅವಕಾಶ ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಈಗ ಇನ್ನೂ ಆರು ಗಂಟೆ ಆಗಿಲ್ಲ. ಮಂತ್ರಿಗಳು ಉತ್ತರ ಕೊಡುವುದಕ್ಕೆ ಒಂದು ಗಂಟೆ ಸಾಕು ಎಂದು ಹೇಳಿದ್ದಾರೆ. ಆದ್ದರಿಂದ 8 ಗಂಟೆಯವರೆಗೂ ಕುಳಿತು ಕೊಳ್ಳಬಹುದು.

ಅಧ್ಯಕ್ಷರು.—ಮಾನ್ಯ ಸದಸ್ಯರು ಸೂಚನೆ ಕೊಟ್ಟರೆ ನಾನು ಎಂಟು ಗಂಟೆಯವರೆಗೂ ಕುಳಿತು ಕೊಳ್ಳವುದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—8 ಗಂಟೆಯವರೆಗೂ ಕೂತುಕೊಳ್ಳಬಹುದು.

ಶ್ರೀ ಬಿ. ಜಿ. ಲಿಂಗೇ ಗೌಡ (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ ಈಗ ನನಗೆ ಸಿಕ್ಕಿರತಕ್ಕ ಅಲ್ಪ ಕಾಲದಲ್ಲಿ ಒಂದೆರಡು ವಿಷಯಗಳನ್ನು, ನಮ್ಮ ಸರ್ಕಾರದವರು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ಪುಷ್ಟೀಕರಿಸಿ, ಮಾತನಾಡಲು ನಾನು ಆಶಿಸುತ್ತೇನೆ. ಅಧ್ಯಕ್ಷರು ನನಗೆ ಸ್ವಲ್ಪ ಹೆಚ್ಚಿನ ಕಾಲವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು; ಅದಕ್ಕೆ ಕಾರಣ ಇಷ್ಟೆ. ಕೆಲವರು ಒಂದೆರಡು ಮಾತುಗಳಲ್ಲಿ ಎಲ್ಲಾ ವಿಷಯಗಳನ್ನೂ ಕ್ರೋಢೀಕರಿಸಿ ಮಾತನಾಡುತ್ತಾರೆ. ಕೆಲವರು ಐದು ನಿಮಿಷದಲ್ಲಿ ಮಾತನಾಡುವ ವಿಷಯಕ್ಕೆ ಒಂದು ಗಂಟೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ನನಗೆ ಸ್ವಲ್ಪ ಹೆಚ್ಚಿನ ಕಾಲಾವಕಾಶವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಆದರೂ ಈಗ ನನಗೆ ಕೊಟ್ಟಿರತಕ್ಕ ಕಾಲಾವಕಾಶದಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ನಾನು ಈ ಸಭೆಯ ಅವಗಾಹನೆಗೆ ತರುವುದಕ್ಕೆ ಆಶಿಸುತ್ತೇನೆ. ಈಗಾಗಲೇ ನಮ್ಮ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ನಮ್ಮ ಸಹಕಾರ ಸಂಘಗಳು ಹೇಗೆ ನಡೆಯುತ್ತವೆ ಎನ್ನುವುದನ್ನು ಹೇಳಿದ್ದಾರೆ. ಅವರು ಹೇಳುವುದಲ್ಲದೆ ಆಳುವ ಪಕ್ಷದವರೂ ಕೂಡ ಸಹಕಾರ ಸಂಘಗಳಲ್ಲಿ ನಡೆಯತಕ್ಕ ಅನ್ಯಾಯಗಳನ್ನು ತಿಳಿಸಿದ್ದಾರೆ. ವಿರೋಧಪಕ್ಷದವರು ಹೇಳಿದ ಒಂದಂಶ

(ಶ್ರೀ ಬಿ. ಜಿ. ಲಿಂಗೇಗೌಡ)

ವನ್ನು ಮಾತ್ರ ನಾನು ಒಪ್ಪಿಕೊಳ್ಳುವುದಿಲ್ಲ. ಅದು ಯಾವುದೆಂದರೆ, ಎಲ್ಲಾ ಸೊಸೈಟಿಗಳಿಗೂ ಕೂಡ ಕಾಂಗ್ರೆಸ್‌ನವರನ್ನೇ ನಾಮಕರಣಮಾಡುತ್ತಾರೆ ಎನ್ನುವ ವಿಷಯ. ಸತ್ಯಕ್ಕೂದೂರವಾದದ್ದು. ನಾನು ಆಳುವ ಪಕ್ಷದಲ್ಲಿದ್ದರೂ ಕೂಡ, ಈ ಸಹಕಾರ ಸಂಘಗಳಲ್ಲಿ ನಡೆಯುತ್ತಾ ಇರತಕ್ಕ ಅನ್ಯಾಯಗಳನ್ನು ಕಣ್ಣಾರೆ ನೋಡಿ ಅವುಗಳನ್ನು ನಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ಅಧ್ಯಕ್ಷರ ಮುಖಾಂತರ ತರಲು ಅಪೇಕ್ಷಿಸುತ್ತೇನೆ. ಈಗ ಉದಾಹರಣೆಗೆ ನಮ್ಮ ತಾಲ್ಲೂಕಿನ ವಿಷಯಗಳನ್ನೇ ಹೇಳುವುದಾದರೆ, ಈಗ ನಮ್ಮ ತಾಲ್ಲೂಕಿನಲ್ಲಿರತಕ್ಕ ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ನೋಡಿದರೆ, ಈ ಸಹಕಾರ ಸಂಘಗಳಿಂದ ನಿಜವಾಗಿಯೂ ರೈತನಿಗೆ ಏನಾದರೂ ಪ್ರಯೋಜನವಾಗುತ್ತದೆಯೇ ಎನ್ನುವುದು ನನಗೆ ಅನುಮಾನ ಬಂದಿದೆ. ನಾನು ಸಹಕಾರ ತತ್ವದಲ್ಲಿ ಪೂರ್ಣ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಈ ಸಹಕಾರ ತತ್ವ ಅನ್ವಯಿಸುವುದರಿಂದಲೇ ಬಡ ಜನಗಳ ಉದ್ಧಾರವಾಗುವುದು ಸಾಧ್ಯ. ಆದರೆ ಆಡಳಿತವನ್ನು ನಡೆಸುವಂಥಾ ಅಧಿಕಾರಿಗಳು ಏನಿದ್ದಾರೆ, ಅವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುವಂಥಾ ಕಾರ್ಯಕ್ರಮವನ್ನು ಮಂತ್ರಿಗಳು ತೆಗೆದುಕೊಳ್ಳಬೇಕು. ಸಹಕಾರ ಸಂಘಗಳನ್ನು ನಡೆಸತಕ್ಕಂಥವರು ಕಾಗ್ರೆಸ್‌ನವರಾಗಲೀ, ಬೇರೆ ಪಿ. ಎಸ್. ಪಿ. ಪಾರ್ಟಿಯವರಾಗಲೀ ಅಥವಾ ಯಾರೇ ಆಗಿರಲಿ ತಪ್ಪುಮಾಡಿದರೆ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈಗ ಯಾವನಾದರೂ ಒಬ್ಬ ತಪ್ಪು ಮಾಡುತ್ತಾನೆ, ಆಮೇಲೆ ಅವನು ತನ್ನ ನಾನಾ ಕುಂದುಕೊರತೆಗಳನ್ನು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಾನೆ. ತಪ್ಪು ಮಾಡಿದವನು ಯಾರಾದರೇನು ? ಅವನು ಮಾಡಿರತಕ್ಕ ತಪ್ಪು ಯಾವುದು ಎನ್ನುವುದನ್ನು ಸರ್ಕಾರ ವಿಮರ್ಶೆಮಾಡಿ ನೋಡಿ ಪ್ರಜೆಗಳಿಗೆ ನ್ಯಾಯವನ್ನು ದೊರಕಿಸಿ ಕೊಡಬೇಕು. ಅಧಿಕಾರಿಗಳು ಇಂಥವರು ತಪ್ಪು ಮಾಡಿದ್ದಾರೆ ಎಂದು ಯಾರಾದರು ಸರ್ಕಾರಕ್ಕೆ ತಿಳಿಸಿದರೆ ಆ ತಪ್ಪು ಮಾಡಿದವರಿಗೆ ಸರ್ಕಾರದವರು ಶಿಕ್ಷೆಯನ್ನು ವಿಧಿಸಬೇಕು. ಈ ಸಹಕಾರ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ಯುವಕರು. ಅದು ನಮ್ಮ ಪುಣ್ಯ. ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳವುದು ಇಷ್ಟೆ. ಈ ಸಹಕಾರ ಸಂಘಗಳಲ್ಲಿರತಕ್ಕ ನ್ಯೂನತೆಗಳನ್ನು ಯಾರೇ ಆಗಿರಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ ಅವರು ಅದನ್ನು ದಯವಿಟ್ಟು ಪರಿಶೀಲನೆ ಮಾಡಿ ಸಂಬಂಧಪಟ್ಟವರ ಮೇಲೆ ಉಗ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ದೇಶಕ್ಕೆ ಮಂತ್ರಿಗಳೂ ಸಹ ದ್ರೋಹ ಮಾಡಿದಂತಾಗುತ್ತದೆಂದು ನಾನು ಈ ಸಭೆಯಲ್ಲಿ ಹೇಳ ಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಒಂದು ಸೊಸೈಟಿಯಲ್ಲಿ ಎಷ್ಟರ ಮಟ್ಟಿಗೆ ಅನ್ಯಾಯ ನಡೆಯುತ್ತದೆ ಎಂಬುದನ್ನು ಒಂದು ಉದಾಹರಣೆಯ ಮುಖಾಂತರ ನಾನು ಹೇಳುತ್ತೇನೆ. ಆ ಒಂದು ಸಹಕಾರ ಸಂಘ ಅಂದರೆ ಚನ್ನಪಟ್ಟಣ ತಾಲ್ಲೂಕು ಅಗ್ರಿಕಲ್ಚರ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಯ ಒಟ್ಟು ಷೇರು ಬಂಡವಾಳ ಸುಮಾರು 12 ಸಾವಿರ ರೂಪಾಯಿಗಳಿಗೆ ಸರ್ಕಾರದವರು 80 ಸಾವಿರ ರೂಪಾಯಿ ಷೇರುಬಂಡವಾಳಕ್ಕಾಗಿ ಕೊಟ್ಟಿದ್ದಾರೆ. ಅಲ್ಲದೆ 18 ಸಾವಿರ ರೂಪಾಯಿಗಳನ್ನು ಸರ್ಕಾರದವರು ಸಬ್ಸಿಡಿ ರೂಪವಾಗಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಸರ್ಕಾರದಿಂದ 60-70 ಸಾವಿರ ರೂಪಾಯಿಗಳ ಸಾಲವನ್ನೂ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟೀವ್ ಸೊಸೈಟಿಯಿಂದ ಸುಮಾರು ಒಂದು ಲಕ್ಷ ರೂಪಾಯಿಗಳ ಕ್ರೆಡಿಟ್ ಲೋನ್ ಸಹ ಈ ಸೊಸೈಟಿಯು ಪಡೆದುಕೊಂಡಿದೆ. ಇಷ್ಟೊಂದು ರೀತಿಯಲ್ಲಿ ಒಂದು ಸಂಸ್ಥೆಗೆ ಸರ್ಕಾರ ಸಹಾಯ ಮಾಡಿ ಅವರು ತಮ್ಮ ಮನಸ್ಸಿಗೆ ಬಂದಂತೆ ದುರಾಡಳಿತವನ್ನು ಮಾಡಿದರೆ ಅದರ ಬಗ್ಗೆ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದಿದ್ದರೆ ಜನಗಳಿಗೆ ಹೇಗೆ ಒಂದು ಸಂಸ್ಥೆಯಲ್ಲಿ ನಂಬಿಕೆ ಬರುತ್ತೆ ? 1956ನೇ ಇಸವಿಯಿಂದ ಒಂದೇ ಸಮನಾಗಿ ಆ ಸೊಸೈಟಿಯ ವಿಚಾರದಲ್ಲಿ ಸರ್ಕಾರಕ್ಕೆ ದೂರು ರೈಟಿಂಗ್‌ನಲ್ಲಿ ಹೋಗುತ್ತಿದೆ ಎಂದು ನಾನು ತಿಳಿಸಿದರೂ ಕೂಡ ಸರ್ಕಾರದವರು ಆ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೆ ಇರುವುದು ಶೋಚನೀಯವಾದ ವಿಚಾರ. ಈಗಲಾದರೂ ಸರ್ಕಾರದವರು ಈ ಲೋಪವನ್ನು ಗಮನಕ್ಕೆ ತೆಗೆದುಕೊಂಡು ಸಹಕಾರ ಸಂಘಗಳು ದೇಶದ ಹಿತದೃಷ್ಟಿಯಿಂದ ಕೆಲಸ ಮಾಡುವಂತೆ ಸಹಾಯ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು. ಆದರೆ ಕಾಲಾವಕಾಶ ಇಲ್ಲದೆ ಇರುವುದರಿಂದ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*†ಶ್ರೀ ಎಸ್. ಸಿದ್ದಯ್ಯ (ಬನ್ನೂರು).—ಮಾನ್ಯ ಸಭಾಧ್ಯಕ್ಷರೇ ಸಹಕಾರ ಸಂಘಗಳ ವಿಷಯದಲ್ಲಿ ನಾನು ಮಾತನಾಡುತ್ತಾ ಈ ಸಹಕಾರ ಸಂಘಗಳ ಸ್ಥಿತಿ ಹೇಗಿದೆ, ಇವುಗಳ ವಿಷಯದಲ್ಲಿ ಸರ್ಕಾರದ ಸ್ಥಿತಿ ಹೇಗಿದೆ ಎನ್ನುವ ವಿಚಾರದಲ್ಲ ಒಂದೆರಡು ವಿಷಯಗಳನ್ನು ನಾನು ಹೇಳ ಬಯಸುತ್ತೇನೆ. ಮೊನ್ನೆ ಮಾನ್ಯ ಮಂತ್ರಿಗಳು ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾ ಈ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ 1959ರಲ್ಲಿ ಒಂದು ಆಕ್ಟ್ ಆಗಿದೆ ಅದನ್ನು ಬೇಕಾದರೆ ಮಾನ್ಯ ಸದಸ್ಯರು ನೊಡಬಹುದು, ಮತ್ತು ಸಾಮಾನ್ಯವಾಗಿ ಪ್ರತಿಯೊಂದು ಇಲಾಖೆಯ ಮೇಲೂ ಪ್ರತಿ ವರ್ಷವೂ ಟೀಕೆ ಟಿಪ್ಪಣಿಗಳು ಬಂದೇ ಬರುತ್ತವೆ ಎಂದು ಹೇಳಿದರು. 1959ನೇ ಇಸವಿಯ ಒಂದು ಕೋ-ಆಪರೇಟೀವ್ ಆಕ್ಟನ್ನೇನೋ ಕೊಟ್ಟಿದ್ದಾರೆ. ಈ ಆಕ್ಟುಗಳನ್ನು ಎಲ್ಲಾ ಸಹಕಾರ ಸಂಘಗಳಿಗೂ ಒದಗಿಸಿದ್ದಾರೆಂದು ಕಾಣುತ್ತದೆ. ಆದರೆ ಸಹಕಾರ ಸಂಘಗಳು ಆ ಕಾನೂನಿಗನುಸಾರವಾಗಿ ಕೆಲಸ ಮಾಡುತ್ತಿವೆಯೋ ಅಥವಾ ಇಲ್ಲವೇ ಎನ್ನುವುದನ್ನು ಯೋಚನೆಮಾಡುವುದಾದರೆ, ಪ್ರತಿ ವರ್ಷವೂ ಕೂಡ ಜನರಲ್ ಬಾಡಿ ಮೀಟಿಂಗ್ ಸೇರಬೇಕು. ಆಡಿಟ್ ರಿಪೋರ್ಟ್ ಆಗಬೇಕು. ಆಯಾ ವರ್ಷದ ಖರ್ಚು ವೆಚ್ಚಗಳೆಲ್ಲವನ್ನೂ ಕೂಡ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇಡಬೇಕು. ಆಯಾ ಸೊಸೈಟಿಯು ಎಲ್ಲಾ ಷೇರ್ ಹೋಲ್ಡರಿಗೂ ಡಿವಿಡೆಂಡ್ ಕೊಡಬೇಕು ಎಂದು ಆಕ್ಟಿನಲ್ಲಿದೆ. ಆದರೆ ಟಿ-ನರಸೀಪುರದ ತಾಲ್ಲೂಕಿನಲ್ಲಿರುವ ಒಂದು ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಯಲ್ಲಿ 1950ನೇ ಇಸವಿಯಿಂದ ಜನರಲ್ ಬಾಡಿ ಮೀಟಿಂಗ್ ನಡೆದಿಲ್ಲ. ಷೇರ್ ಹೋಲ್ಡರುಗಳಿಗೆ ನೋಟೀಸ್ ಬಂದಿಲ್ಲ. ಆದರೆ ಜನರಲ್ ಬಾಡಿ ಮೀಟಿಂಗ್ ನಡೆಯಿತು ಎಂದು ಆ ಸೊಸೈಟಿಯ ಮೆಂಬರುಗಳ ರುಜುವನ್ನು ಖಾಸಗೀಯಾಗಿ ತೆಗೆದುಕೊಳ್ಳುತ್ತಿದ್ದಾರೆ.

ಈ ರೀತಿ ಟೀ ನರಸೀಪುರ ತಾಲ್ಲೂಕು. ಕೇತನಪುರದಲ್ಲಿ ಆಗಿದೆ. ಹೀಗೆ ಆಡಳಿತದಲ್ಲಿ ಬಹಳ ಅನೀತಿ ಇದೆ.

ಟಿ-ನರಸೀಪುರದಲ್ಲಿರುವ ಅಗ್ರಿಕಲ್ಚರಲ್ ಕೋ-ಆಪರೇಟೀವ್ ಸೊಸೈಟಿ ಹುಟ್ಟಿದ ತಾರೀಖಿನಿಂದ ಇದುವರೆಗೂ ಆಡಿಟ್ ಆಗಿಲ್ಲ. ನಾವು ಚಿಕ್ಕವರಾಗಿದ್ದಾಗಿನಿಂದ ನೋಡುತ್ತಿದ್ದೇವೆ. ಆಗಿನಿಂದಲೂ ಆಡಿಟ್ ಆಗಿಲ್ಲ. ಖರ್ಚೆಷ್ಟು, ಆದಾಯ ಎಷ್ಟು, ಬಂಡವಾಳ ಏನು ಒಂದೂ ತನಿಕೆ ಆಗಿಲ್ಲ. ಗೊಬ್ಬರ ಆ ಸೊಸೈಟಿ ಮುಖಾಂತರವೇ ಸಣ್ಣ ಸೊಸೈಟಿಗಳಿಗೆ ಸರಬರಾಯಿ ಆಗಬೇಕು. ಈ ರೀತಿ ಆದರೆ ಪ್ರತಿಸಾರಿ ಬಡ್ಜೆಟ್ ಅಧಿವೇಶ ಬಂದಾಗಲೂ ಇದೇ ಟೀಕೆ ಟಿಪ್ಪಣಿಗಳು ಬರುತ್ತವೆ, ಇದು ಸ್ವಾಭಾವಿಕ. ಮೊನ್ನೆ ಮುನಿಸಿಪಲ್ ಅಡ್ಮಿನ್‌ಸ್ಟ್ರೇಷನ್ ವಿಷಯ ಚರ್ಚೆಗೆ ಬಂದಾಗ ಹೇಳಿದಹಾಗೆ ಸಾಂಪ್ರದಾಯಕವಾಗಿ ಉತ್ತರ ಕೊಡುತ್ತಾರೆ ಎಂದರೆ ಅಷ್ಟು ಚೆನ್ನಾಗಿ ಇರುವುದಿಲ್ಲ. ಕಾನೂನಿನಂತೆ ನಡೆಯದೆ ಆರ್ಡರ್ ಮಾಡಿದರೆ ಹೈಕೋರ್ಟು ಇದ್ದೇ ಇರುತ್ತದೆ. ಅದರ ಆಜ್ಞೆ ಪ್ರಕಾರ ಮಾಡುತ್ತವೆ. ಅಂತೂ ಕೋ-ಆಪರೇಟೀವ್ ಸೊಸೈಟಿಯಲ್ಲಿ ಅನೀತಿ ಹೆಚ್ಚಾಗಿದೆ. ಮೊನ್ನೆ ಒಂದು ಆರ್ಡರ್ ಆಗಿದೆ. ಸೆಂಟ್ರಲ್ ಕೋ-ಆಪರೇಟೀವ್ ಸೊಸೈಟಿಯಲ್ಲಿರತಕ್ಕ ಗೊಬ್ಬರವನ್ನು ಸಣ್ಣ ಸೋಸೈಟಿಗಳು ತೆಗೆದು ಕೊಳ್ಳಬೇಕು. ಅದಕ್ಕೆ ಪ್ರತಿಯೊಂದು ಸೊಸೈಟಿಗಳಿಗೂ ಲೈಸೆನ್ಸ್ ಕೊಟ್ಟಿದ್ದಾರೆ. ಡಿಸೆಂಬರ್ ಮೂವತ್ತೊಂದರೊಳಗೆ ಪ್ರತಿಸಾರಿ ಲೈಸೆನ್ಸ್ ರಿನ್ಯೂ ಮಾಡಿಸಬೇಕೆಂದು ಹೇಳುತ್ತಾರೆ, ಆರೀತಿ ಒಂದು ಶರತ್ತು ಇದೆ. ಅದಕ್ಕೆ ತಪ್ಪಿದರೆ 12 ರೂಪಾಯಿ ಕೊಟ್ಟು ರಿನ್ಯೂ ಮಾಡಿಸಬೇಕು. ರಿನ್ಯೂ ಮಾಡಿಸದೇ ಈಗ 40 ಸೊಸೈಟಿಗಳಿಗೆ ಮೆನ್ಯೂರ್ ಸಿಕ್ಕಿಲ್ಲ. ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರಿಗೆ ಹೇಳಿದ್ದಾಯಿತು. ಪ್ರತಿಯೊಂದು ಸೊಸೈಟಿಯವರೂ ಮನ್ಯೂರ್ ಇಲ್ಲ ಎಂದು ಅನ್ನುತ್ತಾರೆ. ಸರ್ಕಾರದವರಿಗೆ ಬೇಕಾಗಿರುವುದು ಪೀನಲ್‌ಫೀ. ಅದು ಕೊಟ್ಟ ಮೇಲೆ ಏಕೆ ಗೊಬ್ಬರ ಕೊಡಬಾರದು ? ಟಿ-ನರಸೀಪುರಕ್ಕೇ ಕೊಡದಿರುವ ಪ್ರಮೇಯ ಏನಿದೆ ! ಅಧಿಕಾರ ಯಾರಕೈಯಲ್ಲಿದೆ ? ಏನು ಕಾರಣದಿಂದ ಅನಾನುಕೂಲವಾಗುತ್ತಾ ಇದೆ ಎಂಬುದನ್ನು ಅದಷ್ಟು ಜಾಗ್ರತೆ ಪರಿಶೀಲನೆ ಮಾಡಬೇಕು. ಒಂದು ಸೊಸೈಟಿಯಲ್ಲೂ ಆಡಿಟ್ ಆಗಿಲ್ಲ. 380 ಜನ ಸೀನಿಯರ್ ಆಡಿಟರ್ಸ್ ಜೂನಿಯರ್ ಆಡಿಟರ್ಸ್ ಅಂತ ಹೇಳಿ ಬುಕ್‌ನಲ್ಲಿದೆ. ಅವರು ಕೆಲಸ ಮಾಡುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ಸಹಕಾರ ಸಂಘದಲ್ಲಿ ಅನೇಕ ಲೋಪದೋಷಗಳು ನಡೆಯುತ್ತಾ ಇವೆ ಎಂಬುದರ ಬಗ್ಗೆ ಸಾಮಾನ್ಯವಾಗಿ ಎದುರು ಪಕ್ಷದವರು ಮತ್ತು ನಮ್ಮ ಪಕ್ಷದವರು ಎಲ್ಲರೂ ಕೂಡ ಸಲಹೆಗಳನ್ನು ಕೊಟ್ಟರು. ಈ ಸೇವಾ ಸಹಕಾರ ಸಂಘಗಳು ರೈತರಿಗೆ ಅಗತ್ಯವಾದ, ಸಹಾಯಕವಾಗತಕ್ಕ ಸಂಘಗಳು. ಈ ಸಂಘದಲ್ಲಿ, ಬರೀ ಕಾಂಗ್ರೆಸ್‌ನವರ ಒಂದು ಬೆಳವಣಿಗೆಗೆ, ಈ ಸಂಘಗಳನ್ನು ರಿಜಿಸ್ಟ್ರೇಷನ್ ಮಾಡಿಕೊಂಡು, ಅವರೇ ಈ ಸಂಘದಲ್ಲಿ ಇದ್ದುಕೊಂಡು ಹೋಗುತ್ತಾರೆ ಎಂಬ ಕೆಲವು ನಿದರ್ಶನಗಳನ್ನು ಕೆಲವು ಸ್ನೇಹಿತರು ಹೇಳಿದರು. ಇದರಲ್ಲಿ ಯಾರಾದರೂ ಸದಸ್ಯರಾಗ ಬಹುದು, ಸದಸ್ಯರಾಗಿ ರೈತರಿಗೆ ಬೇಕಾಗಿರತಕ್ಕ ಅನುಕೂಲವನ್ನಾಗಲಿ, ಸೊಸೈಟಿಯಲ್ಲಿ ಸಿಕ್ಕುವ ವಿಶಿಷ್ಟ ಸಾಮಾನುಗಳನ್ನಾಗಲೀ ರೈತರಿಗೆ ಒದಗಿಸಬಹುದು. ಈತರಹ ಒಂದು ಪಕ್ಷದವರ ಕೈಯಲ್ಲಿರುತ್ತದೆ ಎನ್ನುವುದು ಸಂಪಾಜಸವಾದ ಮಾತಲ್ಲ. ಶ್ರೀಮಾನ್ ಎಂ. ಆರ್. ಪಾಟೀಲ್ ರವರು ಒಂದು ಸಲಹೆ ಕೊಟ್ಟರು. ಜಮೀನು ಇಲ್ಲದೇ ಇರತಕ್ಕವರು ಇದರಲ್ಲಿ ಸದಸ್ಯರಾಗಬಾರದು ಎಂದು. ಈ ದಿವಸ ಈ ಸೇವಾ ಸಹಕಾರ ಸಂಘದಿಂದ ವ್ಯವಸಾಯಮಾಡತಕ್ಕ ರೈತರಿಗೆ ಆದಷ್ಟು ಅನುಕೂಲ ಮಾಡತಕ್ಕ ಒಂದು ಅವಕಾಶವಿದೆ. ಹಾಗಿರುವಾಗ ಯಾರೇ ಇರಲಿ ಲೋಪದೋಷವಿದ್ದರೆ ಖಾಸಗಿಯವರಾಗಲೀ ಅಧಿಕಾರಿಗಳಾಗಲಿ ವ್ಯತ್ಯಾಸ ಮಾಡಬಾರದು. ವ್ಯತ್ಯಾಸವಮಾಡಿದರೆ ಯಾವ ಸಂಘ ಸಂಸ್ಥೆಗಳೂಕೂಡ ಅಭಿವೃದ್ಧಿಯಾಗಲಾರವು. ನಮ್ಮಲ್ಲಿ ಅಪ್ರಾಮಾಣಿಕತೆ ಬೆಳೆದುಕೊಂಡು ಇರುವುದು ಹೋಗಬೇಕು. ತತ್ವ ಒಳ್ಳೆಯದು. ಸೇವಾ ಸಹಕಾರ ಸಂಘದಿಂದ ರೈತರಿಗೆ ಬೇಕಾದಷ್ಟು ಅನುಕೂಲಗಳು ಇವೆ. ಆ ಸೊಸೈಟಿಯಲ್ಲಿ ಹೊಂದಿಕೊಂಡಿರುವ ಅಧ್ಯಕ್ಷರಾಗಲೀ, ಸದಸ್ಯರಾಗಲೀ, ಅಧಿಕಾರಿಗಳಾಗಲೀ, ಒಳ್ಳೆಯ ಸಹಾಯವನ್ನು ಮಾಡತಕ್ಕ ಅವಕಾಶವನ್ನು ಸರ್ಕಾರದವರು ಅವರಿಗೆ ಒದಗಿಸಿಕೊಟ್ಟಿದ್ದಾರೆ. ಅವರಿಗೆ ಬಿತ್ತನೆ ಕಾಲದಲ್ಲಿ ಹಣ ಕೊಡುವುದು ಮತ್ತು ಬಿತ್ತನೆ ಪ್ರತಿಫಲ ಬಂದ ತಕ್ಷಣ ಅವರು ಪುನಃ ಆ ಹಣವನ್ನು ಸೊಸೈಟಿಗಳಿಗೆ ಕೊಡುವುದು ಹೀಗೆ ಬಹಳ ಒಳ್ಳೆಯ ಉದ್ದೇಶ ಇಟ್ಟುಕೊಂಡು ಸರ್ಕಾರ ಕೆಲಸ ಮಾಡುವುದಕ್ಕೆ ಆ ಸೊಸೈಟಿಗಳನ್ನು ಪ್ರಾರಂಭಮಾಡಿದ್ದಾರೆ. ಹಾಗಿರುವಾಗ ಇನ್ನೂ ಹೆಚ್ಚಿನ ಒಂದು ಸಹಾಯವನ್ನು ಈ ಸಹಕಾರ ಸಂಘದವರಿಗೆ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಪ್ರೈಮರಿ ಸೊಸೈಟಿಗಳನ್ನು ಗ್ರಾಮಾಂತರಗಳಲ್ಲಿ ಮಾಡಲಾಗಿದೆ. ಅಲ್ಲಿ ಬರೀ ಹಣದ ಒಂದು ವ್ಯವಸ್ಥೆ ಅವರಿಗೆ ಸಿಕ್ಕುತ್ತಿದೆಯೇ ಹೊರತು ಗೊಬ್ಬರ ಆಗಲಿ, ರೈತರಿಗೆ ಬೇಕಾಗಿರತಕ್ಕ ಕಬ್ಬಿಣದ ಸಾಮಾನು ಆಗಲೀ, ಮುಖ್ಯವಾಗಿ ವ್ಯವಸಾಯಗಾರನಿಗೆ ಬೇಕಾಗಿರತಕ್ಕ ಜಿಂಕ್‌ಶೀಟ್ ಆಗಲೀ ಯಾವುದೂ ಸಿಕ್ಕುತ್ತಿಲ್ಲ. ಈ ತಗಡುಗಳನ್ನು ಸಣ್ಣ ಪ್ರೈಮರೀ ಸಹಕಾರ ಸಂಘಗಳ ಮೂಲಕ ಒದಗಿಸುವ ಏರ್ಪಾಡನ್ನು ಮಾಡಬೇಕೆಂದು ಸಹಕಾರ ಸಂಘಗಳ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

6-00 P.M.

*†Sri S. RAJAGOPAL (Kolar Gold Field).—Sir, I rise to speak on the Demand relating to Labour and Employment. I request the Speaker to give me a little consideration in the matter of time.

Mr. SPEAKER.—The Chair is giving you the greatest consideration. I have greatest fondness for you but I cannot give you more than five minutes.

Sri S. RAJAGOPAL.—Sir, now that it seems certain that the K.G.F. mines will be handed over to the Central Government, we would be getting some compensation. The Hon. Chief Minister and the Revenue Minister openly assured the workers of K.G.F. that atleast half the amount of compensation will be utilised for the benefit of the local workers and the public. I request the Government to fulfil the promise

(SRI S. RAJAGOPAL)

held out and start State-owned industries in that place.

I wish to point out that the workers of the Government Electric Factory have not been paid house-rent and D.A. has not been merged with pay, according to the terms of the settlement memorandum. I request the Government to take action in the matter immediately. Also a large section of the workers are still temporary and they should be made permanent immediately.

The position of housing accommodation to workers presents a sad picture. Out of the 3 lakhs 85 thousand industrial workers in the State, hardly 10,000 houses have been provided to workers. In the Mandya Sugar Factory, there are 1,500 workers but only 50 of them are provided housing accommodation. In the Cement Factory at Shahbad, only 30 per cent of the workers are provided with houses. In the Silk Filatures at Kollegal, out of 150 workers only forty have houses. If we proceed at this rate, I am afraid that we will not be able to provide the workers with houses for any number of decades to come. Even the N.G.Os of the State are not provided with quarters. Government as an ideal employer must set an example by providing adequate houses for its own servants. At present, the Government servants are living in unhealthy conditions and yet pay high rents. How can anyone expect productive effort from people living in such conditions. I request the Government to pay greater attention to this aspect.

Sir, Mysore is noted for gardens in the whole of India. The gardens are managed by Government but the workers keep the flowers smiling by their hard labour. In Mysore, Mandya and Krishnarajasagar alone there are 600 garden workers. Out of them many who have put in 15 and more years of service have not been made permanent and they are getting Rs. 60 or Rs. 45 or even Rs. 35 as pay. I request the Government to consider their problem sympathetically.

Sir, if the nation should progress industrially, the willing co-operation and effort of the worker is a most important factor. To achieve this purpose, proper trade unions are essential to provide the necessary leadership. Such leaders should emerge from the rank and file of the workers. In 1959, we started workers' education centres. The idea was first to train worker-teachers. On completion of their training these worker-teachers are expected to start further centres in the industrial establishments. Since 1959, in the State Workers Education Centre we trained 182 workers inculding myself but so far only sixty of them have been absorbed. From 1959 onwards we have covered only 2824 workers but our labour strength in the State runs to four and half lakhs. I do not know how long it would take for us to train all of them. Certain Government-aided private industries are not in a position to give encourgement to this scheme. They have miserably failed, particularly in the K. G. F. and Government transport. They are not prepared to give any sort of facilities like furniture, maps, stationery etc. The Mysore Lamp Works and the Mysore Government Press did not agree to introduce the scheme at all. If this is the position, how can we expect the labour force to participate in the management? I request the Government to fully consider this aspect to encourage the scheme by providing the necessary facilities to the workers.

Sir, in regard to the employment exchanges the Resources and Economy Committee had made a reference that the number of exchanges could be reduced and the staff reduced.

MR. SPEAKER.—The Hon'ble Member's time is up. Hon. Sri Hasbi.

ಶ್ರೀ ಎಫ್. ಎಂ. ಹಸಬಿ (ಕಲ್ಘಟಗಿ).—ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸಮಿತಿ ಎಂದು ಒಂದು ಸಂಸ್ಥೆ ಇದೆ. ರೈತರು ಮಾರುವುದಕ್ಕೆ ತರುವ ಮಾಲನ್ನು ಸುರಕ್ಷಿತವಾಗಿಟ್ಟು ಮಾರುವುದಕ್ಕೆ ಅವಕಾಶ ಮಾಡುವುದು ಇದರ ಕೆಲಸ. ಇದರಲ್ಲಿ ಅನೇಕ ಕುಂದುಕೊರತೆಗಳಿವೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ರೈತರು ತಾವು ಬೆಳೆದ ಮಾಲನ್ನು ಅಲ್ಲಿಗೆ ತರುತ್ತಾರೆ. ಅದು ಬಂದ ಕೂಡಲೇ ಅದನ್ನು ಸರಿಯಾಗಿ ತೂಕಮಾಡಿ ಯೋಗ್ಯರೀತಿಯಲ್ಲಿ classifiy ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಅಲ್ಲಿರುವ ವೇಘರ್ ಅಥವಾ

ಇತರ ನೌಕರರಿಗೆ ಸರಿಯಾದ ಟ್ರೈನಿಂಗ್ ಇರುವುದಿಲ್ಲ. ಮಾರ್ಕೆಟಿಂಗ್ ಸಮಿತಿಯವರು ದುಡ್ಡು ಕೊಟ್ಟರೆ ಮಾತ್ರ ಲೈಸೆನ್ಸ್ ಕೊಡುತ್ತಾರೆ. ಯಾವ ರೈತರಿಗೆ ಎಷ್ಟೆಷ್ಟು Capacity ಇದೆ ಎನ್ನುವುದನ್ನು ಅಳೆದು ಲೈಸೆನ್ಸ್ ಕೊಡಬೇಕು. ಏಕೆಂದರೆ, ಲಕ್ಷಾಂತರ ರೂಪಾಯಿನ ಮಾಲನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿರುವ ಕುಂದುಕೊರತೆಗಳನ್ನು ಸರಿಮಾಡಲು ಸೂಕ್ತ ತಿದ್ದುಪಡಿ ಮಾಡಬೇಕು.

ವೇರ್‌ಹೌಸಸ್‌ನಿಂದ ರೈತರಿಗೆ ಏನೂ ಅನುಕೂಲ ಮಾಡುವುದಿಲ್ಲ. ಹೆಸರಿಗಿದೆ. ರೈತರು ಉಪಯೋಗ ಮಾಡುವುದಿಲ್ಲ. ನಮ್ಮಲ್ಲಿ searcity areas ನಲ್ಲಿ, ಉದಾಹರಣೆಗೆ ನರಗುಂದದಲ್ಲಿ ಇದುವರೆಗೆ ವೇರ್ ಹೌಸ್ ಆಗಿಲ್ಲ. ಇಂಥ ಕಡೆ ವೇರ್‌ಹೌಸಸ್ ಕೊಡಬೇಕು.

ಈಗ ಮಾರ್ಕೆಟ್ ಕಮಿಟಿ, ಸಕ್ಕರೆ ಕಾರ್ಖಾನೆ, ಟೆಕ್ಸ್‌ಟೈಲ್ ಸಂಸ್ಥೆಗಳು ಮುಂತಾದುವೇನಿವೆ ಅವುಗಳಲ್ಲಿ ನಾಮಿನೇಷನ್ ಮಾಡುವ ಪದ್ಧತಿಯಿದೆ. ತಜ್ಞರಲ್ಲದವರನ್ನು ನಾಮಿನೇಟ್ ಮಾಡುತ್ತಿದ್ದಾರೆ. ಇದರಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲ. ಸರ್ಕಾರಕ್ಕೆ ಸಂಬಂಧಪಡದಿರುವ ಮಿಲ್ಲುಗಳೊಂದಿಗೆ ಸರ್ಕಾರಿ ಸಂಸ್ಥೆಗಳನ್ನು ಹೋಲಿಸಿ ನೋಡಿದರೆ ಖಾಸಗಿಯವರು ನಡೆಸುವ ಕಡೆ ಒಳ್ಳೆಯ ಅನುಭವಸ್ಥರಿದ್ದು ಕೆಲಸ ಚೆನ್ನಾಗಿ ನಡೆಯುತ್ತಿದೆ. ಸರ್ಕಾರಿ ಹಣದಿಂದ ನಡೆಯುವಕಡೆ ನಷ್ಟವಾಗುತ್ತಿದೆ. ಆದುದರಿಂದ ಕಾನೂನಿಗೆ ಬೇಕಾದರೆ ತಿದ್ದುಪಡಿ ತಂದು ಒಳ್ಳೆಯ ಅನುಭವಿಗಳನ್ನು ಮತ್ತು ತಜ್ಞರಾಗಿರುವವರನ್ನು ಸರ್ಕಾರಿ ಸಂಘ ಸಂಸ್ಥೆಗಳಲ್ಲಿ ನೇಮಕ ಮಾಡುವುದು ಒಳ್ಳೆಯದು, ಹಾಗೆ ಮಾಡಿದರೆ ಕೆಲಸ ಸರಿಯಾಗಿ ನಡೆಯಬಹುದು ಎಂದು ವಿನಂತಿ ಮಾಡುತ್ತೇನೆ.

ಮಾರ್ಕೆಟ್ ಸಂಘಗಳೇನಿವೆ ಅವುಗಳಲ್ಲಿ ಹತ್ತಿ ಮತ್ತು ಸೇಂಗಾಕ್ಕೆ ಕೊರತೆಯಿಲ್ಲ. ಆದರೆ ಅಲ್ಲಿ ಸರಿಯಾದ ಕೆಲಸಗಾರರಿಲ್ಲ. ಅಲ್ಲಿರುವವರಿಗೆ ಮೊದಲನೆಯ ದರ್ಜೆ, ಎರಡನೆಯ ದರ್ಜೆ ಎಂದು ಪದಾರ್ಥಗಳನ್ನು ವಿಂಗಡಿಸಲು ಬರುವುದಿಲ್ಲ, ಅವರಿಗೆ ಸರಿಯಾದ ಟ್ರೈನಿಂಗ್ ಇಲ್ಲ. ಇದನ್ನು ಗಮನಿಸಿ ಟ್ರೈನಿಂಗ್ ಆದ ಸರಿಯಾದವರನ್ನು ಆ ಸಂಘಗಳಲ್ಲಿ ನೇಮಿಸಲು ವ್ಯವಸ್ಥೆ ಮಾಡಬೇಕು.

ದನಗಳನ್ನು ಮಾರುವುದಕ್ಕೆ ಸರಿಯಾದ ವ್ಯವಸ್ಥೆಯಿಲ್ಲ. ದಳ್ಳಾಳಿಗಳ ಕಾಟ ಹೆಚ್ಚಾಗಿ ದನಗಳು ಸರಿಯಾದ ಬೆಲೆಗೆ ದೊರೆಯದೆ ಹೆಚ್ಚು ಬೆಲೆ ಕೊಟ್ಟು ರೈತರು ಕೊಳ್ಳಬೇಕಾಗಿದೆ. ಇದರಿಂದ ರೈತರಿಗೆ ಉತ್ಸಾಹವಿಲ್ಲದಂತಾಗಿದೆ. ಆದುದರಿಂದ ರೋಣ, ಹುಬ್ಬಳ್ಳಿ ಪ್ರಾಂತಗಳಲ್ಲಿ ಅಗ್ರಿಕಲ್ಚರಲ್ ಆಫೀಸರನ್ನಾದರೂ ನೇಮಿಸಿ ರೈತರಿಗೆ ಸರಿಯಾದ ಬೆಲೆಗೆ ದನಗಳು ಸಿಕ್ಕುವಂತೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಗೋಪಾಲಶಾಲೆನ್ನ (ಮೂಡಬಿದ್ರೆ).—ಮಾನ್ಯ ಅಧ್ಯಕ್ಷರೆ, ಸಹಕಾರದ ವಿಷಯದಲ್ಲಿ ಬಹಳ ಗೊಂದಲಕ್ಕೆ ಕಾರಣವಾಗುವ ಪರಿಸ್ಥಿತಿಯನ್ನು ನಮ್ಮ ಸರ್ಕಾರ ಉಂಟುಮಾಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕಾರಣವೇನೆಂದರೆ, ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಕಾರ್ಯಾಚರಣೆಯಲ್ಲಿ ಮತ್ತು ಕ್ರಮವಾದ ರೀತಿಯಲ್ಲಿ ಯಾವುದೇ ತಾರತಮ್ಯವಿಲ್ಲದಿರುವ ರೀತಿ ಸರ್ಕಾರದ ಹಣ ಸಾಲವಾಗಿ ಅಥವಾ ಸಹಾಯದ ರೂಪವಾಗಿ ಕೊಡಲು ನಿರ್ದಿಷ್ಟವಾದ ರೀತಿನೀತಿ ನಿಯಮವಿಲ್ಲ. ಇದರಿಂದಾಗಿ ಯಾರಿಗೂ ಸಹಕಾರ ಚಳುವಳಿಯಲ್ಲಿ ಅಷ್ಟೊಂದು ಉತ್ಸಾಹವಿಲ್ಲದಂತಾಗಿದೆ, ಸಹಕಾರ ತತ್ವದಲ್ಲಿಯೇ ಉತ್ಸಾಹವಿಲ್ಲದಿರುವವರನ್ನು ಸಹಕಾರ ಸಂಘಗಳಿಗೆ ಅಧಿಕಾರಿಗಳನ್ನಾಗಿ ಸೇರಿಸಿಕೊಳ್ಳುತ್ತಿರುವುದರಿಂದ ಅವರು ಕೆಲವುಕಾಲ ನಡೆಸಿ ಸರಕಾರ ಕೊಟ್ಟ ಹಣ ಮುಗಿಸಿ ಸಂಘಗಳಿಗೆ ಕೆಟ್ಟ ಹೆಸರನ್ನು ತಂದು ಅದರ ಉದ್ದೇಶವನ್ನೇ ಹಾಳುಮಾಡಲು ಅವಕಾಶವಾಗಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಉತ್ತಮವಾದ ಆಡಳಿತ ನಡೆಸುವ ಸಹಕಾರ ಸಂಘಗಳೂ ಇವೆ. ಅವುಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕುತ್ತಿಲ್ಲ. ಮಂಗಳೂರಿನಲ್ಲಿ ಒಂದು ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯಿದೆ. ನಾನು ಅದರಲ್ಲಿ ಹಲವು ವರ್ಷಗಳಿಂದ ಒಬ್ಬ ಡೈರೆಕ್ಟರನಾಗಿರುವೆನು. ಅದು ಚೆನ್ನಾಗಿ ಕೆಲಸ ಮಾಡಿದೆ. ವರ್ಷೇವರ್ಷೆ ಅದರ ಲೆಕ್ಕಗಳು ಸರಿಯಾಗಿ ಆಡಿಟ್ ಆಗುತ್ತಿವೆ. ಅದಕ್ಕೆ ಸರ್ಕಾರದ ಯಾವ ಸಹಾಯವೂ ಇಲ್ಲ. ಅದು ಸ್ವತಂತ್ರವಾಗಿ ನಡೆಯುತ್ತಿದೆ. ಇಂಥ ಸಂಘಗಳು ಕೆಲವಿವೆ. ಅವುಗಳಿಗೆ ಸರ್ಕಾರದ ಸಹಾಯ ಸಾಲದ ರೂಪದಲ್ಲಿ ಅಥವಾ ಇತರ ರೀತಿಯಲ್ಲಿ ಸಾಕಷ್ಟು ಒದಗಿಸುತ್ತಿಲ್ಲ. ಕೇಂದ್ರ ಸರ್ಕಾರ ತನ್ನ ಯೋಜನೆ ಪ್ರಕಾರ ಕೊಡುವ ಹಣದಲ್ಲಾದರೂ ಸ್ವಲ್ಪ ಹೆಚ್ಚಿನ ಸಹಾಯ ಮಾಡಿದರೆ ಮನೆ ಕಟ್ಟಿಕೊಳ್ಳಲು ಬಯಸುವ ಸದಸ್ಯರಿಗೆ ಸ್ವಲ್ಪ ಹೆಚ್ಚು ಅನುಕೂಲವಾಗುತ್ತಿತ್ತು. ಈಗ ಹಣದ ಕೊರತೆಯಿಂದ ಅನೇಕ ಸದಸ್ಯರಿಗೆ ಸಾಲದ ಸಹಾಯ ದೊರೆಯುತ್ತಿಲ್ಲ. ಇಂಟಿಗ್ರೇಟೆಡ್ ಏರಿಯಾದಲ್ಲಿರುವ ಸಂಘಗಳಿಗೆ ಸಿಕ್ಕುವ ಸಹಾಯ ಬಹಳ ಕಡಮೆ. ಆದುದರಿಂದ ಆ ಪ್ರದೇಶದಲ್ಲಿರುವ ಸೊಸೈಟಿಯ ಸದಸ್ಯರು ಸದಸ್ಯತ್ವವನ್ನು ಬಿಟ್ಟು ಸಾಲಗಳಿಗಾಗಿ ಹೊರಗೆ ಹೋಗುವ ಪರಿಸ್ಥಿತಿಯಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವು ದಲಿತ ಜನರ ಸೊಸೈಟಿಯಿದೆ. ಅವುಗಳಿಗೆ ಕೋ-ಆಪರೇಟಿವ್ ಸೊಸೈಟಿ ಇನ್ಸ್‌ಪೆಕ್ಟರೇ ಬಂದು ಲೆಕ್ಕ ಬರೆಯುತ್ತಿದ್ದರು. ಅವರಿಗೆ ಚೆನ್ನಾಗಿ ಮಾಹಿತಿಯಿದ್ದು, ನಿಯಮದಂತೆ ನಡೆಯಿಸುತ್ತಿದ್ದುದರಿಂದ ಕೆಲವು ವರ್ಷ ಈ ಸೊಸೈಟಿಗಳೆಲ್ಲಾ ಕ್ರಮವಾಗಿ ನಡೆದವು. ಮೈಸೂರಿಗೆ ನಮ್ಮ ಪ್ರದೇಶ ಬಂದಮೇಲೆ ಈ ಸೊಸೈಟಿಯಕಡೆಗೆ ಸರಿಯಾದ ಗಮನ ಕೊಡದೆ ಅವ್ಯವಸ್ಥೆಗಳಿಗಿಳಿದಿದೆ. ಕಾರಣ ಅವುಗಳಿಂದ ಜನರಿಗೆ ಅನುಕೂಲವಾಗುತ್ತಿಲ್ಲ, ಸರ್ಕಾರಿ ನೌಕರರ ಸೊಸೈಟಿಗಳು ಕೆಲವುಕಡೆ ಇವೆ. ಈ ಪೈಕಿ ಒಂದುಕಡೆ ಸೆಕ್ರೆಟರಿಯ ಅಕ್ರಮ ನಡತೆ ಬಗ್ಗೆ ಪೋಲೀಸ್ ಇಲಾಖೆಗೆ ತಿಳಿಸಬೇಕಾಯಿತು. ಹಾಗೆಯೇ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷರನ್ನೂ ಕೆಲಸಗಾರರನ್ನೂ ಜೈಲಿಗೆ ಕಳುಹಿಸಬೇಕಾಯಿತು. ಆದರೆ ಪೊಲಿಟಿಕಲ್ ಹೆಂಚ್‌ಮೆನ್ ಎಂಬ ಕಾರಣದಿಂದ ಅಧಿಕಾರ ಪಕ್ಷದ ನಾಯಕರ ಶಿಫಾರ್ಸಿನಿಂದ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು ತಪ್ಪಿಹೋಗುತ್ತದೆ. ಹೀಗೆ ನಿಯಮವಿಲ್ಲದೆ ನಡೆಯುವುದನ್ನು ಆಡಿಟ್ ಅಧಿಕಾರಿಗಳು, ಲೆಕ್ಕ ಪರಿಶೋಧನೆಮಾಡಿ ವರದಿ ಕೊಡಲು ಆಡಿಟರುಗಳು ಅಧಿಕಾರಿ ಪಕ್ಷದ ನಾಯಕರಿಗೆ ಹೆದರುತ್ತಾರೆ. ಏಕೆಂದರೆ ಅವರು ಕೊಟ್ಟ ವರದಿಯಮೇಲೆ ಕೆಲವರು ಮಂತ್ರಿಗಳಮೇಲೆಯೂ ಪ್ರಭಾವ ಬೀರಿ ತಮ್ಮನ್ನು ನೌಕರಿಯಲ್ಲಿ ದುಸ್ಥಿತಿಗೆ ತರಬಹುದೆಂಬ ಹೆದರಿಕೆಯಿದೆ. ಈ ರೀತಿ ಆ ಇಲಾಖೆಯ ನೌಕರರಲ್ಲಿಯೂ ನೈತಿಕ ಮಟ್ಟ ಹಾಳಾಗುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಹೀಗಾಗಿ ಸಹಕಾರ ಚಳುವಳಿ ತತ್ವದ ಕೊಲೆಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದಕ್ಕೆ ಸರ್ಕಾರದ ರೀತಿ ನೀತಿಯೇ ಕಾರಣ. ರಾಜಕೀಯ ಪಕ್ಷದ ಗಮನವಿಲ್ಲದೆ ಯಾವತ್ತೂ ತಾರತಮ್ಯ

(ಶ್ರೀ ಗೋಪಾಲ ಸಾಲೆನ್ನ)

ವಿಲ್ಲದೆ ಕಾಯಿದೆಗಳನ್ನು ಜಾರಿ ಮಾಡುವುದರಲ್ಲಾಗಲಿ, ಧನ ಸಹಾಯ ಕೊಡುವುದರಲ್ಲಾಗಲೀ ಸರಕಾರ ಉತ್ತಮ ಸಹಕಾರಿಗಳಿಗೆ ಅವಕಾಶ ಕೊಡಲೇ ಬೇಕಾಗಿದೆ. ಲೋಕಲ್ ಬೋರ್ಡ್ ಮತ್ತು ಮುನಿಸಿಪಲ್ ಕೆಲಸಗಾರರಿಗೆ ೧೯೬೧ರ ಸರ್ಕಾರಿ ರಿವೈಜ್ಡ್ ಸ್ಕೇಲುಗಳ ಆಜ್ಞೆಯ ಪ್ರಕಾ ರ ಸಂಬಳ ದೊರೆತಿಲ್ಲ. ಅವರಿಗೆ ತುಂಬಾ ಅಸಮಾಧಾನ ಆಗಿದೆ. ಇದಕ್ಕೆ ಸರಕಾರ ಕೂಡಲೇ ಗಮನಕೊಡಬೇಕು. ಕಾರ್ಖಾನೆಗಳವರಿಗೆ ಯೂನಿಯನ್ ಮಾಡಿಕೊಳ್ಳಲು ಅವಕಾಶ ಕೊಟ್ಟು ಅವರ ಬೇಡಿಕೆಗಳನ್ನು ಹೋರಾಟದ ಮೂಲಕ ಈಡೇರಿಸಿಕೊಳ್ಳಲು ಕಾಯಿದೆಗಳಿಂದ ಅವಕಾಶ ಮಾಡಲಾಗಿದೆ. ಅದೇರೀತಿ ಇತರ ಕೆಳದರ್ಜೆ ನೌಕರರಿಗೂ ಅನ್ವಯಿಸಿ ಅವಕಾಶಗಳನ್ನು ಕಲ್ಪಿಸಿ ಟ್ರೇಡ್ ಯೂನಿಯನ್‌ಗಳನ್ನು ರಚಿಸುವ ಅವಕಾಶಕೊಟ್ಟು ಅವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು, ಅವರಿಗೆ ಇಂದಿನ ಪರಿಸ್ಥಿತಿ ಗನುಸಾರ ಸಲ್ಲಬೇಕಾದ ಕೆಲಸದ ಯೋಗ್ಯ ಫಲ ಸಿಗಲೇಬೇಕು. ಈ ದಿವಸ ಆಡಳಿತ ದಿನದಿನಕ್ಕೆ ಕೆಳಮಟ್ಟಕ್ಕಿಳಿಯುತ್ತಿದೆ, ಇದಕ್ಕೆ ಇಂದಿನ ಸರ್ಕಾರವೇ ಕಾರಣ. ಇದನ್ನು ಚೆನ್ನಾಗಿ ಪರಿಶೀಲಿಸಿ ತೀವ್ರ ಗಮನಿಸಿ ಸರ್ಕಾರದವರು ಸರಿಯಾದ ಸುವ್ಯವಸ್ಥೆ ಮಾಡಬೇಕು ಮತ್ತು ಕಾಯಿದೆ ರೀತಿ, ನೀತಿ ಹಾಗೂ ಧೋರಣೆಗಳನ್ನು ನಿಷ್ಪಕ್ಷಪಾತವಾಗಿ ಸಹಕಾರ ರಂಗದ ಸರಕಾರದ ಆಡಳಿತದ ನೌಕರರಲ್ಲಿಯೂ ಜಾರಿ ಮಾಡಲೇಬೇಕಾಗಿದೆ.

*ಶ್ರೀ ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೆ, ಈಗ ಸಹಕಾರ ಇಲಾಖೆಯಮೇಲೆ ಅನೇಕ ಮಾನ್ಯ ಸದಸ್ಯರು ಟೀಕೆ ಟಿಪ್ಪಣಿ ಮಾಡುವಾಗ ಕೆಲವು ಸಲಹೆಗಳನ್ನುಕೂಡ ಕೊಟ್ಟಿದ್ದಾರೆ. ನಾನು ಇಲ್ಲಿ ಸಹಕಾರದಬಗ್ಗೆ ಟೀಕೆ ಮಾಡುವುದಕ್ಕೆ ನಿಂತಿಲ್ಲ. ಆದಷ್ಟು ನಮ್ಮ ದೇಶದಲ್ಲಿ ಸಹಕಾರ ಚಳುವಳಿಯನ್ನು ಅಭಿವೃದ್ಧಿಮಾಡಬೇಕು, ಇದರಲ್ಲಿರುವ ಕೆಲವು ಲೋಪ ದೋಷಗಳನ್ನು, ನಮ್ಮ ಭಾಗದಲ್ಲಿ ಕಂಡುಬರುವುದನ್ನು ತಿಳಿಸಿದರೆ ಅವನ್ನು ಹೋಗಲಾಡಿಸಲು ಮಾನ್ಯ ಮಂತ್ರಿಗಳು ಇದರಕಡೆ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳಬಹುದೆಂದು ನಾನು ಅವನ್ನು ಹೇಳಲು ನಿಂತಿದ್ದೇನೆ.

ಈ ಸಹಕಾರ ಚಳುವಳಿ ನಮ್ಮ ಭಾರತದೇಶದಲ್ಲಿ, ಮುಖ್ಯವಾಗಿ, ನಮ್ಮ ಕರ್ಣಾಟಕದಲ್ಲಿ ಹೊಸ ವಿಷಯ ವಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ನೋಡುವು ದಾದರೆ ವಕ್ಕಲಿಗರು ತಮ್ಮ ಜನಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ಸಹಕಾರವನ್ನು ಅನುಸರಿಸುತ್ತಿದ್ದಾರೆ. ಈ ಒಂದು ಚಳುವಳಿಗೆ ನಾವು ಒಂದು ಸರಿಯಾದ ರೂಪಕೊಟ್ಟು ಚೆನ್ನಾಗಿ ಬೆಳವಣಿಗೆ ಮಾಡಬೇಕಾಗಿದೆ.

ಇದಕ್ಕೆ ಈ ಪಕ್ಷದವರೇ ಆಗಲಿ, ಆ ಪಕ್ಷದವರೇ ಆಗಲಿ, ಯಾವ ಪಕ್ಷಗಳವರೂ ಬೇಕಿಲ್ಲ. ಸಹಕಾರ ಬೇಕು ಅಷ್ಟೆ. ಇವತ್ತಿನ ದಿವಸ ನಾವು ಸಮಾಜವಾದ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ, ಸಹಕಾರ ಜೀವನ ಮುಖ್ಯವೆಂದು ಹೇಳುತ್ತೇನೆ.

ಇನ್ನು ಸಹಕಾರ ಸಂಘಗಳ ವಿಷಯದಲ್ಲಿ ಹೇಳ ಬೇಕಾದರೆ, ನಮ್ಮ ದೇಶದಲ್ಲಿ ಕೆಲವೊಂದು ಸೊಸೈಟಿ ಗಳು ಯಶಸ್ವಿಯಾಗಿವೆ. ಮೊದಲು ಹತ್ತು ಸೊಸೈಟಿ ಗಳಿರುವಕಡೆ ಇಂದು ನೂರು ಸೊಸೈಟಿಗಳಿವೆ. ಆದರೆ ಈ ಸೊಸೈಟಿಗಳಲ್ಲಿರತಕ್ಕ ಅಧ್ಯಕ್ಷರು ಮತ್ತು ಸೆಕ್ರೆಟರಿ ಗಳಿಗೆ ಟ್ರೈನಿಂಗ್ ಇಲ್ಲ. ಇದರಿಂದಾಗಿ ಸಹಕಾರ ಚಳವಳಿ ಯಶಸ್ವಿಯಾಗುವುದಕ್ಕೆ ಸ್ವಲ್ಪ ಅಡಚಣೆ ಯಾಗಿದೆ. ಆದ್ದರಿಂದ, ಸರ್ಕಾರದವರಲ್ಲಿ ನನ್ನ ಬಿನ್ನ ಹವೇನೆಂದರೆ, ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಒಂದು Training School ತೆಗೆದು ಸಹಕಾರ ಚಳವಳಿ ಜನತೆ ಯಲ್ಲಿ ಬೆಳೆದು ಬರುವಂತೆ ಮಾಡಬೇಕು. ಈಗಿನಂತೆ ಬರೀ ಅಧಿಕಾರಿಗಳಿಗೆ training ಕೊಡುವುದನ್ನು ಸಡಿಲಿಸಿ ಸಾರ್ವಜನಿಕರಿಗೂ ಸಹಕಾರ ತತ್ವದ ಪರಿಚಯ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ನಾವು ನೋಡಿರುವವರೆಗೆ ಈ ಇಲಾಖೆಯವರು ಅಧಿಕಾರಿಗಳ ದೃಷ್ಟಿಯಿಂದ ಮಾತ್ರ ನೋಡುತ್ತಿ ದ್ದಾರೆ. ಜನರ ದೃಷ್ಟಿಯಿಂದ ನೋಡುತ್ತಿಲ್ಲ. ಸೊಸೈಟಿ ಸ್ಥಾಪನೆ ಮಾಡಿದ್ದು ಆಯಿತೇ ಆಯಿತು, ಅದಾದಮೇಲೆ ಆ ಸೊಸೈಟಿಯನ್ನು ಸ್ಥಾಪನೆ ಮಾಡಿ ದವರು ಇದ್ದಾರೆಯೇ ಸತ್ತಿದ್ದಾರೆಯೇ ನೋಡುವವ ರಿಲ್ಲ. ಆದ್ದರಿಂದ ಅಧ್ಯಕ್ಷರಿಗೂ, ಕಾರ್ಯದರ್ಶಿಗಳಿಗೂ Training Courses ಅನ್ನು ತೆರೆಯಬೇಕೆಂದು ನನ್ನ ಸೂಚನೆ. ಇದನ್ನು ಮಾಡದೆ ಹೋದರೆ ಜನರಲ್ಲಿ ಸಹಕಾರದ ಜ್ಞಾನ ಬೆಳೆಯುವುದಿಲ್ಲ. ಅದಿಲ್ಲದೆ ಬರೀ ಏಳು ರೂಪಾಯಿನಂತೆ ಬಡ್ಡಿಸಿಕ್ಕುತ್ತದೆ, ಒಂಭತ್ತು ರೂಪಾಯಿನಂತೆ ಬಡ್ಡಿಸಿಕ್ಕುತ್ತದೆ ಎಂಬದರ ಮಟ್ಟಿಗೆ ಅವನು ತಿಳಿದಿದ್ದರೆ, ಏಳು ರೂಪಾಯಿಗಳ ಬದಲು ಹದಿನೇಳು ರೂಪಾಯಿ ಕೊಡಬೇಕಾದ ಪ್ರಸಂಗ ಬಂದೀತು. ಇದನ್ನು ಗಮನದಲ್ಲಿಟ್ಟುಕೊಂಡು ಇಲಾಖೆ ಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಎಲ್ಲ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದಿದ್ದೇನೆ. ಈ ಖಾತೆಯನ್ನು ಹೊಂದಿರತಕ್ಕ ಮಂತ್ರಿಗಳು ಮತ್ತು ಉಪಮಂತ್ರಿಗಳು ಉತ್ಸಾಹ ಶಾಲಿಗಳು ಮತ್ತು ಚಟುವಟಿಕೆ ಯಾಗಿದ್ದಾರೆ. ನಮ್ಮ ಮೈಸೂರು ದೇಶ ಯಾವರೀತಿ ಇಡೀ ಭಾರತ ದೇಶದಲ್ಲಿ ಇತರ ವಿಷಯ ಗಳಲ್ಲಿ ಮುಂದುವರಿದಿದೆಯೋ ಅದೇ ರೀತಿ ಸಹಕಾರದ ಚಳವಳಿಯಲ್ಲೂ ಮುಂದುವರಿಯಲು ಸಾಧ್ಯವಿದೆ ಯೆಂದು ಹೇಳಿ, ನಾನು ಸೂಚಿಸಿರುವ ಕೆಲವು ಲೋಪ ದೋಷಗಳನ್ನು ನಿವಾರಣೆ ಮಾಡಬೇಕೆಂದು ಹೇಳಿ ನನ್ನ ಭಾಷಣನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಈ ಹೊತ್ತು ದೇವರ ಪೂಜಾರಿಯಿಂದ ಹಿಡಿದು ಸೈಂಟಿಫಿಕ್ ರಿಸರ್ಚ್‌ವರಿಗೆ ೧, ೨, ೩, ೪, ೫, ೯, ೧೦, ೧೧, ಈ ರೀತಿ ೧೭-೧೭, ಡಿಮ್ಯಾಂಡುಗಳು ನಮ್ಮ ಮುಂದಿವೆ. ಒಮ್ಮೆ ಇವುಗಳ ಹೆಸರು ಹೇಳುವುದಕ್ಕೂ ಐದು ನಿಮಿಷಗಳಾಗುತ್ತವೆ. ಆದ್ದರಿಂದ ಎಲ್ಲದರ ಮೇಲೆ ನಾನು ವಿಶಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಮೊದಲನೆಯದಾಗಿ ದೇವಸ್ಥಾನಗಳ ವಿಷಯ ಹೇಳುವುದಾದರೆ, ದೇವಸ್ಥಾನಗಳಿಗೆ ನಾವು ಕೊಡುವ ದುಡ್ಡೆಷ್ಟು, ಅದರಲ್ಲಿ ಎಷ್ಟು ಖರ್ಚಾಗುತ್ತಿದೆ, ಎಷ್ಟು ಆದಾಯ ಬರುತ್ತಿದೆ ಎಂಬುದೊಂದೂ ಇದುವರೆಗೆ ನಮಗೆ ಗೊತ್ತಾಗಿಲ್ಲ. ಮಂಗಳಾರತಿ ಮೊದಲು ಗೊಂಡು ಪ್ರತಿಯೊಂದಕ್ಕೂ ನಾವು ಹಣ ಕೊಡುತ್ತೇವೆ, ಇಷ್ಟು ಹಣವನ್ನು ತೆಗೆದುಕೊಂಡು ಅಂಥ ಕೆಲಸವನ್ನು ಮಾಡಿಸುತ್ತೇನೆ, ಇಂಥ ಕೆಲಸವನ್ನು ಮಾಡಿಸುತ್ತೇನೆ ಎಂದು ದೇವದಾಸಿ ನಾಟಕದಲ್ಲಿ ನಾಜೂಕಯ್ಯನ ಪಾತ್ರ ನಮ್ಮ ಕೃಷ್ಣಪ್ಪನವರಿಗೆ ಬಂತಲ್ಲಾ ಎಂದು ನಾನು ವಿಷಾದ ಪಡಬೇಕಾಗಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಎಷ್ಟೋ ದೇವಸ್ಥಾನಗಳಿವೆ; ಎಷ್ಟೋ ಪೂಜಾರಿಗಳಿದ್ದಾರೆ. ಈ ದೇವಸ್ಥಾನಗಳಲ್ಲಿ ಎಷ್ಟೋ ಚೆನ್ನಾಗಿ ನಡೆಯುತ್ತಿವೆ, ಯಾವ್ಯಾವುಗಳಲ್ಲಿ ಪೂಜೆ ಪುನಸ್ಕಾರಗಳು ಸರಿಯಾಗಿ ಸಾಂಗವಾಗಿ ನಡೆಯು

ತ್ತಿವೆಯೇ, ಈ ಮುಜರಾಯ್ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿದೆಯೇ ಎಂಬ ಬಗ್ಗೆ ಒಂದು Administration ರಿಪೋರ್ಟ್ ಇದುವರೆಗೂ ನಾನು ನೋಡಿದ್ದಿಲ್ಲ. ಈ ಬಗ್ಗೆ ಪೂಜಾರಿ ನಾಜೂಕಯ್ಯನ್ನು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಸಹಕಾರದ ಇಲಾಖೆಯ ವಿಚಾರ ಹೇಳುತ್ತಾ, ನಮ್ಮ ಜೀವನವೇ ಸಹಕಾರದ ಮೇಲೆ ನಡೆಯಬೇಕು, ವ್ಯವಸಾಯ ಸಹಕಾರದ ತತ್ವದ ಮೇಲೆ ನಡೆಯಬೇಕು, ಕೈಗಾರಿಕೆಗಳಲ್ಲಿ ಸಹಕಾರ ಪದ್ಧತಿ ಬರಬೇಕು, ನಮ್ಮ ನಿಮ್ಮ ಜೀವನವೇ ಸಹಕಾರ ತತ್ವದ ತಳಹದಿಯ ಮೇಲೆ ಜರುಗಬೇಕು ಎಂದು ಹೇಳುವವರು ಮೊದಲು ಈ ಸಹಕಾರ ಪದ್ಧತಿಗೆ ಬಂದಿರುವ ತಲೆನೋವನ್ನು ಸರಿಮಾಡಿದರೇ ಸಾಕೆಂದು ನಾನು ಹೇಳುತ್ತೇನೆ. ಇಂದು ಇದು ಬರೀ ಹೆಸರಿಗೆ ಮಾತ್ರ ಸಹಕಾರವೆಂದಿದೆಯೇ ಹೊರತು, ಜನರಿಗೆ ಇದರಿಂದ ಉಪಕಾರವಾಗುತ್ತಿಲ್ಲವೆಂಬುದು ಆಕಡೆ-ಈಕಡೆ ಎಲ್ಲರ ಅಭಿಪ್ರಾಯ. ಅದರಲ್ಲೂ ಈಗ ಕಳೆದ ನಾಲ್ಕು ವರ್ಷಗಳು ನಮ್ಮ ದೇಶದಲ್ಲಿ ಸಹಕಾರ ಪದ್ಧತಿ ನಡೆದುಕೊಂಡುಬಂದಿದೆಯಲ್ಲಾ ಅದನ್ನು ನೋಡಿದರೆ, ಈ ನಾಲ್ಕು ವರ್ಷಗಳಲ್ಲಿ ಈ ಪದ್ಧತಿ ಕುಂಟಿರುವಷ್ಟು ಹಿಂದೆ ಯಾವಾಗಲೂ ಆಗಿಲ್ಲವೆಂದು ನಾನು ಅಂಕಿ ಅಂಶಗಳನ್ನು ಕೊಟ್ಟು ರುಜುವಾತು ಮಾಡಿತೋರಿಸಬಲ್ಲೆ.

೪೦ ಕೋ-ಆಪರೇಟಿವ್ ಫಾರಂಗಳು ನಮ್ಮ ದೇಶದಲ್ಲಿವೆ. ಇವಕ್ಕಾಗಿ ಖರ್ಚಾದ ಹಣವೆಷ್ಟು? ಆದಾಯವೇನು ; ಲಾಭವಾಗಿದೆಯೇ ನಷ್ಟವಾಗಿದೆಯೇ ಎಂಬುದನ್ನು ಹೇಳಬೇಕೆಂದು ನಾವು ಸರ್ಕಾರದವರನ್ನು ಪದೇ ಪದೇ ಕೇಳುತ್ತಿದ್ದೇವೆ. ಅವರು ನಷ್ಟದಲ್ಲಿದ್ದೇವೆಂದು ಮಾತ್ರ ಹೇಳುತ್ತಿದ್ದಾರೆಯೇ ಹೊರತು ಎಷ್ಟು ನಷ್ಟದಲ್ಲಿದ್ದೇವೆಂದು ಹೇಳಿಲ್ಲ! ಈಗಲಾದರೂ ಈ 40 ಕೊ-ಆಪರೇಟಿವ್ ಫಾರಂಗಳಲ್ಲಿ ನಡೆದಿರುವ ಅತ್ಯಾಚಾರ ಅನಾಚಾರಗಳೇನೆಂಬದನ್ನು ಅಂಕಿ-ಅಂಶಗಳ ಬಗ್ಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆ ಮೇಲೆ, ನಮ್ಮ ಸಂಸ್ಥಾನದಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಇದೆ. ಇದು ಎರಡುವರೆ ಕೋಟಿ ರೂಪಾಯಿಗಳ ವ್ಯವಹಾರ ಮಾಡಿದೆ. ಎರಡುವರೆ ಕೋಟಿ ರೂಪಾಯಿಗಳ ವ್ಯವಹಾರ ನಡಸಿ ಎರಡುವರೆ ಲಕ್ಷ ರೂಪಾಯಿಗಳ ನಷ್ಟ ಮಾಡಿದೆಯಲ್ಲಾ! ನಾವು ಹೀಗೆ ಎರಡುವರೆ ಲಕ್ಷ ರೂಪಾಯಿಗಳನ್ನು ನಷ್ಟವಾಗಿದೆಯೆಂದು ಹೇಳುವಾಗ, ಆ ಲೆಕ್ಕಗಳನ್ನು manage ಮಾಡುವುದಕ್ಕೆ ಜಾಯಿಂಟ್ ರಿಜಿಸ್ಟ್ರಾರ್‌ರವರಿಗೆ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ಕಾನೂನಿಗೆ ವ್ಯತಿರಿಕ್ತವಾಗಿ ಪ್ರಮೋಷನ್ ಕೊಟ್ಟು ಅಲ್ಲಿ ಮಡಗಿದ್ದೀರಲ್ಲಾ ಅವರಿಗೂ ಈ ನಷ್ಟವಾಗುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸಿದ್ದೀರಾ? ಆರು ಲಕ್ಷ ಜಿಂಕ್ ಷೀಟುಗಳನ್ನು ಇವರು ಮಾರಾಟ ಮಾಡುವಾಗ 6,000 ಜಿಂಕ್ ಷೀಟುಗಳ ಪಿಲ್‌ಫರೇಜ್ ನಡೆಯಿತಲ್ಲಾ ಇದು ಹೇಗೆ ಆಯಿತೆಂಬದನ್ನು ಹೇಳುತ್ತೀರಾ ;

ನಮ್ಮ ಜಿಲ್ಲೆಯಲ್ಲಿ ಶೇಕಡ 60 ಸೊಸೈಟಿಗಳಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ; ಆಡಿಟ್ ರಿಪೋರ್ಟ್ ಹೊರಬಿದ್ದಿಲ್ಲ! ಹೀಗಿರುವಲ್ಲಿ ಸಹಕಾರ ಚಳವಳಿಗೆ ಕುಮ್ಮಕ್ಕು ಕೊಡಿ ಹೇಗೆ ಕೇಳುತ್ತೀರೋ! ಯಾವ ತತ್ವದ ಮೇಲೆ ನೀವು ಈ ಇಲಾಖೆಯನ್ನು ನಡೆಸುತ್ತಿದ್ದೀರೋ ಗೊತ್ತಿಲ್ಲ! ಎಷ್ಟು ನಷ್ಟವಾಯಿತು, ಎಷ್ಟು ಆದಾಯ ಬಂತು ಎಂದು ಕೇಳಿದರೆ ನಾಲ್ಕು ವರ್ಷಗಳಿಂದಲೂ ಯಾವ ಅಧಿಕಾರಿಗಳಿದ್ದಾರೋ ಅವರಿಗೇ ಕುಮ್ಮಕ್ಕು ಕೊಟ್ಟರೆ ಸಾಧ್ಯವೇ? ೧೯೫೮ ರಲ್ಲಿ ಇಬ್ಬರು ಅಧಿಕಾರಿಗಳನ್ನು ತನಿಖೆಗೆ ಒಳಪಡಿಸಿ ಕೇಸ್ ಹಾಕಿಸಿದರೆ, ಅವರಲ್ಲಿ ಒಬ್ಬರಿಗೆ Conviction ಕೊಟ್ಟರಿ, ಇನ್ನೊಬ್ಬರನ್ನು ಆಚೆಗೆ ಬರಲು ಬಿಟ್ಟುಬಿಟ್ಟರಲ್ಲ! 4 ವರ್ಷದಿಂದ ಇದೇ ವಿಚಾರವನ್ನು ಕೇಳುತ್ತಿದ್ದೇನೆ. ಅದಕ್ಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಯಾವತ್ತು ಕೇಳಿದರು ಮಂತ್ರಿಗಳು file ನನ್ನ ಹತ್ತಿರವೇ ಇದೆ. ಒಂದು ಕೇಸಿನಲ್ಲಿ ಇಬ್ಬರನ್ನು ಸೇರಿಸಿರುವಾಗ ಒಬ್ಬನನ್ನು ಜೈಲಗೆ ಕಳುಹಿಸುವುದು, ಇನ್ನೊಬ್ಬನ ವಿಚಾರದಲ್ಲಿ ರುಜು ಅವನದೇ ಎಂದು ನೋಡಲಿಕ್ಕೆ Hand-writing expertನ ಹತ್ತಿರ ಓಡಾಡಿಸುವುತ್ತಾ ಕಾಲ ತಳ್ಳುವುದು ಸರಿಯಲ್ಲ ಇಂಥದನ್ನು ಸಹಕಾರ ಖಾತೆಯವರು ಗಮನಕ್ಕೆ ತೆಗೆದುಕೊಂಡರೆ ದೇಶಕ್ಕೇ ಒಳ್ಳೆಯದಾಗುತ್ತದೆ.

ಸಿರಾ ತಾಲ್ಲೂಕಿನ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಚುನಾವಣೆ ನಡೆದು ಹನ್ನೆರಡು ತಿಂಗಳಾಯಿತು. ಚುನಾವಣೆಯಲ್ಲಿ dispute ಬಂದು petiton ಸಲ್ಲಿಸಿದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು stay order ಕೊಟ್ಟಮೇಲೆ ಹನ್ನೊಂದು ತಿಂಗಳಾದರೂ ಇತ್ಯರ್ಥ ಮಾಡಬೇಡವೇ? Election petition ಕೊಟ್ಟಕೂಡಲೆ ಕಮಿಷನರು ತಕ್ಷಣ ಒಂದು ಟ್ರಿಬ್ಯುನಲ್‌ನ್ನು ನೇಮಕಮಾಡಿ ಕೂಡಲೆ ತೀರ್ಮಾನ ಮಾಡುತ್ತಾರೆ. ಅಂಥದ್ದರಲ್ಲಿ ಸ್ಟೇ-ಆರ್ಡರ್ ಕೊಟ್ಟ ಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮುಂದೆ ಯಾವ ಕಾರ್ಯಕ್ರಮವನ್ನು ಕೈ ಕೊಂಡಿಲ್ಲ. ಯಾರೊಬ್ಬರಿಗೂ ನೋಟೀಸ್ ಕೂಡ ಕೊಟ್ಟಿಲ್ಲ. ಈ ಒಂದು ಮಾತು ನಾನು ಹೇಳಬಯಸುತ್ತೇನೆ. ಈ ಇಲಾಖೆಯಲ್ಲಿ ರಿಜಿಸ್ಟ್ರಾರ್‌ರಿಂದ ಹಿಡಿದು ಕೋ-ಆಪರೇಟಿವ್ ಇನ್‌ಸ್ಪೆಕ್ಟರ್‌ವರೆಗೂ, ರಿಜಿಸ್ಟ್ರಾರಿಂದ ಹಿಡಿದು ಆಡಿಟರ್ ವರೆಗೂ ಒಂದು 'ಕ್ಲಿಕ್' ಇದೆ. ಈ 'ಕ್ಲಿಕ್'ನ್ನು ಮುರಿಯದೆ ಇದ್ದರೆ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆಂದು ನಾನು ಹೇಳಬಯಸುತ್ತೇನೆ.

6-30 P.M.

ಹೀಗಾದರೆ Co-operative Commonwealth ಎಂದು ಹೇಳುವಂತೆ ಸಹಕಾರದ ತಳಹದಿಯ ಮೇಲೆ ಹೇಗೆ ನಡೆಯಬೇಕು. ಇದು ಬರೀ ಭಾಷಣ ಮಾಡಲು ಹರಿಕಥೆ ದಾಸರುಗಳು ಹೇಳುವಂತೆ ಹೇಳಿಕೊಂಡು ಹೋಗಬೇಕಾಗುತ್ತದೆ. ಇದಕ್ಕೋಸ್ಕರ ರಿಜಿಸ್ಟ್ರಾರ್ ಆಫೀಸಿನಲ್ಲಿ ಸರಕಾರ ಮಾಡಿ ಕಳುಹಿಸಿದಂತಹ ಆರ್ಡರನ್ನು flout ಮಾಡುವಂತಹ ಒಂದು ಕ್ಲಿಕ್ ಇದೆ. ಇದೇನು ಎನ್ನುವುದನ್ನು ನೋಡಿಕೊಂಡು ಸರಕಾರ ಈ ತಪ್ಪನ್ನು ಸರಿಮಾಡಬೇಕೆಂದು ಹೇಳುತ್ತೇನೆ. ನಾನೇನಾದರೂ ತಮ್ಮ ಭಾಗದಲ್ಲಿದ್ದಿದ್ದರೆ ಈ ಅಧಿಕಾರಿಗಳನ್ನು I would have dealt with them with an iron hand. ಈ ರೀತಿಯಾದರೆ ದೇಶದಲ್ಲಿ ಸಹಕಾರ ಬೆಳೆಯುವುದು ಹೇಗೆ? ಈಗ ಕೋ-ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಎರಡು ತಿಂಗಳ ಹಿಂದೆ ಒಬ್ಬ ಅಧಿಕಾರಿಗಳನ್ನು ಟ್ರಾನ್ಸ್‌ಫರು ಮಾಡಿದರೂ ಅವರಿಗೆ ಇನ್ನೂ ಚಾರ್ಜು ಕೊಟ್ಟಿಲ್ಲ. ಅಲ್ಲಿಯೂ ಕೂಡ ವಶೀಲಿ ಬಾಜಿ ಮಾಡಿ ಇನ್ನೊಬ್ಬರನ್ನು ಟ್ರಾನ್ಸ್‌ಫರು ಮಾಡುವುದಕ್ಕೆ ಆಗಲಿಲ್ಲ. ಟ್ರಾನ್ಸ್‌ಫರು ಆದವರು ಇನ್ನೂ ಚಾರ್ಜನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಸಿರಾತಾಲ್ಲೂಕಿನಲ್ಲಿ ಸುಮಾರು ನೂರರಲ್ಲಿ 80 ರಿಂದ 90 ಕೋ ಆಪರೇಟೀವ್ ಸೊಸೈಟಿಗಳಲ್ಲಿ ಜನರಲ್ ಬಾಡಿ ಮೀಟಿಂಗನ್ನು ಮಾಡಿಲ್ಲ, ಜನಗಳಿಗೆ ಸುಮಾರು ಮೂರು ಲಕ್ಷದಷ್ಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ದುಡ್ಡನ್ನು ಮೋಸ ಮಾಡುವಂತೆ ತೋರುತ್ತಿದೆ. ನಾನು ಇದನ್ನು ಪದೇ ಪದೇ ಹೇಳಿಕೊಂಡು ಬರುತ್ತಲೇ ಇದ್ದೇನೆ. ಇನ್ನೂ ಇದರ ಬಗ್ಗೆ ಏನೂ ಆಗಿಲ್ಲ. ಏನೋ ಇವೊತ್ತು ದೇವರು ಅಧಿಕಾರವನ್ನು ನಿಮ್ಮ ಕೈಗೆ ಕೊಟ್ಟಿದ್ದಾರೆ. ಅದರಿಂದ ಈ ಹಿಂದೆ ಶ್ರೀಮಾನ್ ಕೆ. ಎಚ್. ರಾಮಯ್ಯನವರು ಆರಂಭ ಮಾಡಿದಂತಹ ಸಹಕಾರದ ತತ್ತ್ವ ಪ್ರಚಾರವನ್ನು ನೀವೂ ಸಹ ನಡೆಸಿಕೊಂಡು ಹೋಗಬಹುದು ಎಂದು ಹೇಳುತ್ತಿದ್ದೇನೆ. ಈ ರೀತಿ Misappropriation ಗಳು ಬಹಳವಾಗಿವೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಸೊಸೈಟಿಯಲ್ಲಿ Misappropriation ಆಗಿದೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ನಾನು ಹೇಳಿದಂತೆ ಎಂಬತ್ತು ಸೊಸೈಟಿಗಳಲ್ಲಿ ಒಂದು ಸೊಸೈಟಿಯಲ್ಲಿಯೂ ಲೆಕ್ಕಪತ್ರಗಳನ್ನು ಆಡಿಟ್ಟು ಮಾಡಿಸಿಲ್ಲ. ಜನರಲ್ ಬಾಡಿ ಮೀಟಿಂಗ್ ಆಗಿಲ್ಲ. ಒಂದು ಸೊಸೈಟಿಯಲ್ಲಿ ಸುಮಾರು 30,000 ರಷ್ಟು ದುರುಪಯೋಗವಾಗಿದೆ ಎಂದು ಸೊಸೈಟಿ ರಿಜಿಸ್ಟ್ರಾರ್‌ರವರಿಗೆ ಹೇಳಿದಾಗ ಅವರು ಇದನ್ನು ತನಿಖೆ ಮಾಡಲು ಊರಿಗೆ ಬಂದಾಗ ಅಲ್ಲಿ ಪ್ರೆಸಿಡೆಂಟರೂ ಸಿಕ್ಕುವುದಿಲ್ಲ, ಇತರ ಯಾವ ನೌಕರರೂ ಇರುವುದಿಲ್ಲ. ಇದನ್ನೆಲ್ಲಾ ಸರಕಾರ ಗಮನಕ್ಕೆ ತೆಗೆದು ಕೊಳ್ಳಬೇಕು.

ಮಧುಗಿರಿಯಲ್ಲಿರುವ ಒಂದು ಸೊಸೈಟಿಯಲ್ಲಿ ಒಂದು ಮೆಷಿನ್ನನ್ನು ಕೊಂಡು ಕೊಂಡರು, ಇದನ್ನು ತೆಗೆದುಕೊಳ್ಳುವಾಗ ಯಾವ ಟೆಕ್ನಿಕಲ್ ಎಕ್ಸ್‌ಪರ್ಟು ಗಳನ್ನು ಕೇಳಲಿಲ್ಲ. ಹಾಗೆ ಕೇಳದೆ ಸುಮಾರು 37,000 ರೂಪಾಯಿಗಳಷ್ಟು ಹಣ ಕೊಟ್ಟು ಈ ಮೆಷಿನರಿ ತೆಗೆದಿರುವುದು, ಈಗ ಹತ್ತು ಹನ್ನೊಂದು ವರ್ಷಗಳಿಂದ ತುಕ್ಕು ಹಿಡಿದು ಹಾಳಾಗಿ ಹೋಗುತ್ತಿದೆ. ಇದನ್ನು ಈಗ ಯಾರೂ 7,000 ರೂಪಾಯಿಗಳಿಗೆ ಕೊಡುತ್ತೇವೆಂದರೂ ಕೊಳ್ಳುವವರು ಇಲ್ಲ. ಈ ರೀತಿ ಅಧಿಕಾರಗಳನ್ನು ದುರುಪಯೋಗ ಮಾಡಿ ಏನು ಅನಾಹುತವಾಗಿದೆ ಎನ್ನುವುದನ್ನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಸೊಸೈಟಿಯಲ್ಲಿ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ —ಮಧುಗಿರಿಯಲ್ಲಿರುವ Industrial Co-operative Society ಎಂದಿದೆ. ಇಲ್ಲಿ ಹನ್ನೊಂದು ವರ್ಷಗಳ ಹಿಂದೆ 37,000 ರೂಪಾಯಿಗಳಷ್ಟು ಕೊಟ್ಟು ತೆಗೆದ ಮೆಷಿನರಿ ತುಕ್ಕು ಹಿಡಿದು ಹಾಳಾಗಿ ಹೋಗುತ್ತಿದೆ. ಹೀಗಾದರೆ ದೇಶದಲ್ಲಿ ಸಹಕಾರ ಹೇಗೆ ಅಭಿವೃದ್ಧಿಯಾಗುತ್ತದೆ? ಅಪಪ್ಪಕ್ಕೆ ಅಪ್ಪಣೆ ಏನೆಂದರೆ ಬಂದದ್ದೇ ಹೇಳು ಎನ್ನುವಂತೆ ಸರಕಾರದ ಅಧಿಕಾರಿಗಳು ಹೀಗೆ ಮಾಡುತ್ತಿದ್ದಾರೆ, ಸಹಕಾರದ ಚರ್ಚೆ ಮೇಲೆ ನಾಲ್ಕು ವರ್ಷಗಳಿಂದಲೂ ಈ ಲೋಪಗಳನ್ನು ಹೇಳುತ್ತಲೇ ಬರುತ್ತಿದ್ದರೂ ಇದರ ಬಗ್ಗೆ ಸರಕಾರ ತೀವ್ರವಾಗಿ ಗಮನ ಕೊಟ್ಟಿಲ್ಲ. ಅಧಿಕಾರಿಗಳು ಈ ವಶೀಲಿ ಬಾಜಿಗೆ ಒಳಗಾಗದಂತೆ ನೋಡಿಕೊಳ್ಳಿ. ನಿಮ್ಮ ಕೈಯಲ್ಲೇ ಅಧಿಕಾರವಿದೆ ಎಂದು ಬೇಲಿಯೇ ಹೊಲವನ್ನು ಮೇಯುತ್ತದೆ ಎನ್ನುವಂತೆ ಅಧಿಕಾರಿಗಳು ವಶೀಲಿ ಬಾಜಿಗೆ ಒಳಗಾಗಿ ಈ ರೀತಿ ಮಾಡುವುದನ್ನು ತಪ್ಪಿಸಬೇಕು. ಈ ರೀತಿ ಸಹಕಾರದ ಶಾಖೆಯಲ್ಲಿರುವ ಲೋಪ ದೋಷಗಳ ಕಡೆಗೆ ಹೆಚ್ಚಿನ ಗಮನ ಸರಕಾರ ಕೊಡಬೇಕೆಂದು ಹೇಳಿ, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—I suggested that members might send me the points. I have already some points and I have passed three points to the Minister to be referred to during the reply tomorrow in the course of the Appropriation Bill. The number of members who have participated today and on other days on the Demands will be the largest.

ಶ್ರೀ ಎಸ್. ಗೋಪಾಲಗೌಡ.—ನನ್ನ ಪಾಯಿಂಟು ಆಫ್ ಆರ್ಡರು ನಾನು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಿಲ್ಲ. ಕಾಗದದಲ್ಲಿ ಬರೆದು ಕೊಡಬಹುದು ಎಂದು ಹೇಳಿದುದು ತಪ್ಪು ಎಂದು ಹೇಳಲು ಎದ್ದು ನಿಂತಿದ್ದೇನೆ.

Mr. SPEAKER.—I will hear you tomorrow. I am not hearing you today. If what I have said is wrong I will consider it and I will apologise to the House. I will not allow you now. The Minister will begin to reply.

ಶ್ರೀ ಬಿ. ಎಲ್. ಗೌಡ.—ಸ್ವಾಮಿ, ಏನು ಹೇಳಬೇಕಾದರೂ ಈ ಸಂದರ್ಭದಲ್ಲಿ ಹೇಳಬೇಕು. ಅದು ಪಾಯಿಂಟ್ ಆಫ್ ಆರ್ಡರು. ಮಾನ್ಯ ಗೋಪಾಲಗೌಡರ ಪಾಯಿಂಟ್ ಆಫ್ ಆರ್ಡರು ಅದರ ಬಗ್ಗೆ ಈ ಸಂದರ್ಭದಲ್ಲಿ ಹೇಳಿದರೆ We will be in a position to clarify one position.

Mr. SPEAKER.—The Chair has called upon the Minister. The Hon'ble Member Sri Gowda must know that when Iam on my legs he should not rise.

(The member resumed his seat)

He has not said that it is a point of order. Do you say that it is a point of order ? Do you maintain it a point of order ?

†Sri S. GOPALGOWDA (Thirthahalli).—Yes, it is a point of order. ಸ್ವಾಮೀ, ಈ ಸಭೆಯಲ್ಲಿ ಚರ್ಚೆಯಾಗದೆ ಇರತಕ್ಕ ಯಾವ ವಿಚಾರಗಳೂ ಆಫೀಸು ರಿಕಾರ್ಡಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅವರು ಮನೆಯಲ್ಲಿ ಬರೆದು ಕಳುಹಿಸಬಹುದು, ಮನೆಯಲ್ಲೇ ಉತ್ತರವನ್ನು ಕೊಡಬಹುದು. ಮಂತ್ರಿಗಳು ಯಾವುದೇ ವಿಷಯ ಈ ಸಭೆಯಲ್ಲಿ ಶಬ್ದದ ರೂಪದಲ್ಲಿ ಯಾವುದು ಅನ್ವಯವಾಗುವುದಿಲ್ಲವೋ ಅದು ರಿಕಾರ್ಡಿನಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಇದು ನನ್ನ ಪಾಯಿಂಟ್ ಆಫ್ ಆರ್ಡರ್. ಆ ರೀತಿ ಯಾರಾದರೂ ಏನಾದರೂ ಬರೆದು ಕೊಟ್ಟಿದ್ದರೆ, ಮಂತ್ರಿಗಳು ಉತ್ತರವನ್ನು ಕೊಡುವುದಾದರೆ ಅದು ರಿಕಾರ್ಡಿಗೆ ಹೋಗಕೂಡದು ಆ ರೀತಿ ಮಾಡುವುದು ತಪ್ಪು ಎಂದು ಹೇಳುತ್ತೇನೆ.

Mr. SPEAKER.—A point of order has been raised. I have examined the position and that has been allowed in the Lok Sabha. In fact if I refer to one of the rules it will be clear :

> "The Speaker may, in order to avoid repetition of debate, require members desiring to take part in discussion on an Appropriation Bill to give advance intimation of the specific points they intend to raise, and he may withhold permission for raising such of the points as in his opinion appear to be repetitions of the matters discussed on a demand for grant or as may not be of sufficient public importance"

This is about the Appropriation Bill. I have examined the position before I made the suggestion to the House that in case where it is not possible to cover the points, the members are permitted if they so desire to send their points to me. It is not a direction ; a member is not bound to send. If such points are given and if they are to be answered. I said that it will be answered tomorrow at the time of the Appropriation Bill and if it goes on record there is nothing wrong. The Hon'ble Member's point of order is ruled out.

Now the Minister will reply.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ ಮತ್ತು ಸಾರಿಗೆ ಶಾಖಾ ಸಚಿವರು).—ಸ್ವಾಮೀ, ಕಾರ್ಮಿಕರುಗಳ ಮತ್ತಿತರ ವಿಷಯಗಳಲ್ಲಿ ಸಂಬಂಧಪಟ್ಟಂತೆ ಅನೇಕ ಮಾನ್ಯ ಸದಸ್ಯರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಕೆಲವು ರಚನಾತ್ಮಕವಾದ ಟೀಕೆಗಳನ್ನು ಸಹ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತಾ ಕೆಲವು ವಿಷಯಗಳನ್ನು ಅವರ ಮುಂದೆ ಇಡುತ್ತೇನೆ.

ಮೊದಲನೇದಾಗಿ, ಮೂರು ಪಾಂಚವಾರ್ಷಿಕ ಯೋಜನೆಗಳಲ್ಲಿ ಈ ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಏನು ಕೆಲಸ ನಡೆದಿದೆ, ಎಷ್ಟು ಮಟ್ಟದಲ್ಲಿ ಹಣ ಒದಗಿಸಿದೆ ಎನ್ನುವುದನ್ನು ಸಂಕ್ಷೇಪವಾಗಿ ಹೇಳುವುದಾದರೆ, ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಅಭಿವೃದ್ಧಿ ಕಾರ್ಯಗಳೂ ಕೇಂದ್ರದಿಂದ ನಡೆಯಲು ನಡೆಸಿದ ಪ್ರಯೋಗಗಳನ್ನು ನೋಡಿದರೆ ನಮ್ಮ ರಾಜ್ಯ ಸರಕಾರದಿಂದ ಯಾವ ಹಣವೂ ಕೂಡ ಒದಗಿರಲಿಲ್ಲ. ಆದ್ದರಿಂದ ನೇರವಾಗಿ ರಾಜ್ಯ ಸರಕಾರದಿಂದ ಯಾವ ಖರ್ಚು ಆಗಿಲ್ಲ. ಇನ್ನ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೂಡ ಯೋಜನೆಗೆ ಸಂಬಂಧಪಟ್ಟ ಹಾಗೆ ಸುಮಾರು 232.6 ಲಕ್ಷದಷ್ಟು ಹಣ ಒದಗಿಸಿದ್ದರೂ ಅದರಲ್ಲಿ ಪೂರ್ತಿ ಒದಗಿಸಿದಷ್ಟು ಹಣ ಎಲ್ಲಿಯೂ ಖರ್ಚಾಗುವುದಕ್ಕೆ ಸಾಧ್ಯವಾಗಲಿಲ್ಲ.

ಸುಮಾರು 91 ಲಕ್ಷ ಚಿಲ್ಲರೆ ಮಾತ್ರ ಖರ್ಚಾಗಿರುತ್ತೆ. ಆದರೆ ಈ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಮಿಕರ ಅಭಿವೃದ್ಧಿಗಾಗಿ ಅವರ ವಸತಿ ಸೌಕರ್ಯ ಇಂಥ ಅವರ ಎಲ್ಲ ಕೆಲಸ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಹಣವನ್ನೊದಗಿಸಬೇಕೆಂಬ ದೃಷ್ಟಿಯನ್ನಿಟ್ಟುಕೊಂಡಿರುವುದರಿಂದ ನಮ್ಮ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈಬಾಬಿಗೆ ಒದಗಿಸಲಾಗಿದ್ದ 232 ಲಕ್ಷ ರೂಪಾಯಿಗಳ ಮೊತ್ತವನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 3.2 ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ. ಹೀಗೆ ಈಗ ಈ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗಾಗಿ ಖರ್ಚು ಮಾಡಬೇಕೆಂದು ಒದಗಿಸಲಾಗಿದೆಯೋ ಅಷ್ಟೂ ಪೂರಾ ಹಣವನ್ನು ಖರ್ಚುಮಾಡಬೇಕೆಂದು ಸರ್ಕಾರದವರ ಉದ್ದೇಶವಾಗಿದೆ. ಅದಕ್ಕೆ ಅನುಗುಣವಾಗಿ ಇಲಾಖೆಯವರು ಈ ಕೆಲಸಕಾರ್ಯಗಳನ್ನು ಆದಷ್ಟು ತೀವ್ರವಾಗಿ ನಡೆಸಲು ಏನೇನು ಏರ್ಪಾಡುಗಳನ್ನು ಮಾಡಬೇಕೋ ಅದೆಲ್ಲವನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಬಸವರಾಜ ನಾಗಾವಿ ಅವರು ಈ ವಸತಿ ನಿರ್ಮಾಣಗಳ ಬಗ್ಗೆ ಎಲ್ಲೆಲ್ಲಿ ಜನರು ಪ್ರವಾಹದ ಹಾವಳಿಗೆ ತುತ್ತಾಗಿ ತೊಂದರೆಯಲ್ಲಿರತಕ್ಕವರಿಗೆ ಈಗ ವಸತಿ ನಿರ್ಮಾಣಗಳನ್ನು ಒದಗಿಸಲು ಪ್ರಯತ್ನಗಳು ನಡೆಯುತ್ತಿದೆ. ಆದರೆ ಈಗ ಅಲ್ಲಲ್ಲೇ ಏನು ಕೆಲವು ಕಟ್ಟಡಗಳನ್ನು ಕಟ್ಟಲಾಗಿದೆಯೋ ಅವು ಚೆನ್ನಾಗಿಲ್ಲ-ಬಂದೂಬಸ್ತಾಗಿಲ್ಲ-ಸಮಾಧಾನಕರವಾದ ರೀತಿಯಲ್ಲಿಲ್ಲ, ಉತ್ತಮ ಕಟ್ಟಡಗಳಾಗಿಲ್ಲ ಎಂತ ಹೇಳಿ ಕೊನೆಗೆ ಅವರು ಒಂದು ಮಾತನ್ನು ಹೇಳಿದರು. ಅದೇನೆಂದರೆ ಈ ಕಟ್ಟಡಗಳ ಕಾರ್ಯವನ್ನು ರೂರಲ್ ಹೌಸಿಂಗ್ ನೆಲೆನವರಿಗೆ ವಹಿಸಿದರೆ ಉತ್ತಮವಾಗಿರುತ್ತೆಂದು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಆ ವಿಚಾರ ಈಗಾಗಲೇ ಸರ್ಕಾರದವರ ಪರಿಶೀಲನೆಯಲ್ಲಿರುತ್ತೆ. ಆದನ್ನು ವಿಮರ್ಶೆಮಾಡೋಣ. ಇದೇ ಸಂದರ್ಭದಲ್ಲಿ ನನ್ನ ಇನ್ನು ಕೆಲವು ಸ್ನೇಹಿತರು ಈ ಕಾರ್ಮಿಕರ ವಸತಿ ನಿರ್ಮಾಣಗಳ ಬಗ್ಗೆ ಈಗ ಖರ್ಚುಮಾಡುತ್ತಿರುವ ಮೊತ್ತ ಸಾಲದು, 4 ಲಕ್ಷ ಚಿಲ್ಲರೆ ಕಾರ್ಮಿಕರಿದ್ದಾರೆ, ಈಗ ಸರ್ಕಾರದವರು ಅವರಿಗೆ ಒದಗಿಸುತ್ತಿರುವ ಹಣವೇನಿದೆ, ಅದೇ ದಾಮಾಷದಲ್ಲಿ ಇನ್ನು ಮುಂದಕ್ಕೂ ಒದಗಿಸುತ್ತಾ ಹೋಗುವುದಾದರೆ ಈ ವಸತಿ ಸೌಕರ್ಯ ನಿರ್ಮಾಣ ಕಾರ್ಯ ಮುಗಿಯಲು ಸಾಧ್ಯವಿಲ್ಲ ಎನ್ನುವುದಾಗಿ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಅದು ನಿಜ. ಆ ಮಾತನ್ನು ನಾನು ಒಪ್ಪುತ್ತೇನೆ. ಇಷ್ಟು ಸಣ್ಣ ಮೊತ್ತದಿಂದ ಈ ಕಾರ್ಯವನ್ನು ನಾವು ಮಾಡುತ್ತಾ ಹೋದರೆ ಅನೇಕ ವರ್ಷಗಳವರೆಗೆ ಕೊಡಬೇಕಾಗುತ್ತದೆ ಅವರಿಗೆ ಬೇಕ ಈ ಸೌಕರ್ಯವನ್ನೊದಗಿಸಲು ಸಾಧ್ಯವಾಗುವುದಿಲ್ಲವೆಂಬ ಅಂಶವನ್ನು ಒಪ್ಪಬಹುದಾದರೂ, ನಾವು ಈ ವರ್ಷ ಈ ಬಾಬಿಗೆ ಒದಗಿಸಿರುವ ಮೊತ್ತ ನಾವೇನು ಒಂದು ಆಸೆಯನ್ನು ಇಟ್ಟುಕೊಂಡಿದ್ದೇವೆಯೋ ಆ ಆಸೆಯನ್ನು ಈಡೇರಿಸುವಷ್ಟು ಮೊತ್ತವನ್ನು ಒದಗಿಸಿದ್ದೇವೆ. ಈಗ ಸದಸ್ಯರು ಹೇಳಿರತಕ್ಕ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಹಣವನ್ನು ಖರ್ಚುಮಾಡಬೇಕಾಗಿದೆ. ಈಗ ಕಾರ್ಮಿಕಾಭಿವೃದ್ಧಿ ಯೋಜನೆಯ ಕಾರ್ಯಗಳು ಬಹಳ ತೀವ್ರವಾಗಿ ನಡೆಯಬೇಕಾಗಿದೆ. ಆದರೆ ಕಾರ್ಯಗಳಲ್ಲಿ ಕೇವಲ ನಾಲ್ಕಾರು ವರ್ಷಗಳಲ್ಲೇ ಮುಗಿಸಬೇಕೆಂದರೆ ಅಷ್ಟೊಂದು ಹಣವನ್ನೊದಗಿಸಲು ಸ್ವಲ್ಪ ಕಷ್ಟವಾಗು

(ಶ್ರೀ ಡಿ. ದೇವರಾಜ ಅರಸ್)

ತ್ತದೆ. ಈ ಸಾರ್ತಿ ತಮಗೆಲ್ಲರಿಗೂ ಈಗಾಗಲೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದಲ್ಲಿ ಈ ಬಾಬಿಗೆ ಮಂತ್ರಿಗಳಾಗಿರತಕ್ಕ ಶ್ರೀ ಮೆಹಲ್ ಚಂದ್‌ಖನ್ನಾರವರು ಇಲ್ಲಿಗೆ ಬಂದಿದ್ದಾಗ ನಾವು ನಮ್ಮ ಮೈಸೂರು ಸರ್ಕಾರದ ಪರವಾಗಿ ಅವರಿಗೂ ಮತ್ತು ಅವರ ಮುಖೇನ ಪ್ಲಾನಿಂಗ್ ಕಮಿಷನ್ನಿನವರಿಗೂ ಏನು ಪ್ರಾರ್ಥನೆ ಮಾಡಿದ್ದೇವೆಂದರೆ ನಮ್ಮ ರಾಜ್ಯಕ್ಕೆ ಈ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಗೃಹ ವಸತಿ ಕಾರ್ಯಗಳಿಗಾಗಿ ಈಗೇನು ಮೊತ್ತವನ್ನೊದಗಿಸಿದ್ದಾರೋ ಅದಕ್ಕೆ ದ್ವಿಗುಣವಾಗಿ ಮೊಬಲಗನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಈಗ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಬಾಬುಗಳಿಗೆ ಈ ವಸತಿ ಕಾರ್ಯದ ಬಗ್ಗೆ ಆರು ಕೋಟಿ ರೂಪಾಯಿಗಳನ್ನೊದಗಿಸಿದ್ದಾರೆ ಎಂದರೆ ಈ ಮೊಬಲಗನ್ನು ಅವರು ಎಲ್ಲಾ ತರಹೆ ಗೃಹನಿರ್ಮಾಣ ಕಾರ್ಯಗಳಿಗೂ ಕೊಟ್ಟಿದ್ದಾರೆ. ಇದರಲ್ಲಿ ಹಳ್ಳಿಗಳಲ್ಲಿ ಕಟ್ಟಿಸತಕ್ಕ ಮನೆಗಳೂ ಸೇರಿವೆ; ಕಾರ್ಮಿಕರಿಗಾಗಿ ಕಟ್ಟಿಸತಕ್ಕ ಮನೆಗಳೂ ಸೇರಿವೆ, ಇನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ಲೋ-ಇನ್‌ಕಂ ಗ್ರೂಪಿನವರ ಮತ್ತು ಮಿಡಲ್ ಇನ್‌ಕಂನವರ ಮನೆಗಳೂ ಸೇರಿರುತ್ತವೆ. ಇಷ್ಟೆಲ್ಲಾ ಬಾಬುಗಳಿಗೂ ಈಗ ಅರು ಕೋಟಿ ರೂಪಾಯಿಗಳನ್ನೊದಗಿಸಿದ್ದಾರೆ. ಈಗ ನಾವು ಈ ಮೊಬಲಗನ್ನು ದ್ವಿಗುಣಮಾಡಿ 12 ಕೋಟಿ ಚಿಲ್ಲರೆ ರೂಪಾಯಿಗಳನ್ನು ಈ ಮೂರನೆ ಯೋಜನೆಗೆ ಒದಗಿಸಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅವರ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಒದಗಿಸುವುದಾಗಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈಗ ನಮ್ಮ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಮಿಕರ ಗೃಹ ನಿರ್ಮಾಣಕ್ಕಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು-ಅಂದರೆ ಈ ಅಂಕಿ-ಅಂಶ ನನಗೆ ಅಷ್ಟು ಖಚಿತವಾಗಿ ಜ್ಞಾಪಕವಿಲ್ಲ, ಒದಗಿಸಬೇಕೆಂಬ ಉದ್ದೇಶವಿದೆ. ಮೊದಲು ಈ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ಕೆ 80 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಈಗ ಮೊಬಲಗಳನ್ನು 150 ಲಕ್ಷ. ರೂಪಾಯಿಗಳಿಗೆ ಹೆಚ್ಚಿಸಿ ಈ ಕಾರ್ಮಿಕರಿಗೆ ಗೃಹ ನಿರ್ಮಾಣದ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂಬ ಆಸೆಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಆದರೆ ಕೆಲವರು ಈ ಗೃಹ ನಿರ್ಮಾಣದ ಬಾಬಿನಲ್ಲಿ ಖರ್ಚು ಬಹಳ ಕುಂಠಿತವಾಗಿದೆ. ಇಲ್ಲಿಯ ತನಕ ಕೇವಲ ಒಂದು ಸಾವಿರ ಜನರಿಗೆ ಮಾತ್ರ ಈ ವಸತಿಗಾಗಿ ಮನೆಗಳನ್ನು ಒದಗಿಲಾಗಿದೆ ಎಂತ ಹೇಳಿದ್ದಾರೆ. ಆದರೆ ಈಗ ನನ್ನಲ್ಲಿರತಕ್ಕ ಲೆಕ್ಕಗಳನ್ನು ನೋಡಿದರೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 2 ಸಾವಿರ ಮನೆಗಳನ್ನು ಕಟ್ಟಿಸಲಾಗಿದೆ. ಇನ್ನು ಮೂರನೆಯ ಯೋಜನೆಯಲ್ಲಿ ಎರಡುವರೆ ಸಾವಿರ ಮನೆಗಳನ್ನು ಕಟ್ಟಿಸುವ ಯೋಜನೆಯಿದೆ. ಆದರೆ ಈಗಾಗಲೇ ಈ ಹಣದ ವಿಚಾರದಲ್ಲಿ ನಾವೇನು ಪ್ರಯತ್ನ ಮಾಡುತ್ತಿದ್ದೇವೆಂಬ ಅಂಶವನ್ನು ತಮಗಾಗಲೇ ತಿಳಿಸಿದ್ದೇನೆ. ಕೇಂದ್ರದವರು ನಮಗೆ ಹೆಚ್ಚು ಹಣ ಒದಗಿಸುವುದಾದರೆ ಆಗ ಇನ್ನು ಒಂದು ಸಾವಿರ ಮನೆಗಳನ್ನು ಹೆಚ್ಚಿಗೆ ಕಟ್ಟಿಸಲಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಹಿಂದೆ ಇದೇ ಈ ಗೃಹ ವಸತಿ ಬಾಬಿಗೆ ಒದಗಿಸಲಾಗುತ್ತಿದ್ದ ಪೂರಾ ಹಣವನ್ನು ಕೇಂದ್ರ ಸರ್ಕಾರವೊಂದೇ ಒದಗಿಸುತ್ತಿತ್ತು. ಆದರೆ ಈಗ ರಾಜ್ಯ ಸರ್ಕಾರದವರೂ ಕೂಡ ಒಂದು ಭಾಗವನ್ನು ಒದಗಿಸಬೇಕಾಗಿದೆ. ಆದರೆ ಈ ವರ್ಷ ಆ ಹಣವನ್ನು ನಮ್ಮ ಸರ್ಕಾರ ಹಾಕಲು ಸ್ವಲ್ಪ ಅಡಚಣೆ ಉಂಟಾಗಿದೆ. ಆದರೆ ಈಗಾಗಲೇ ಈ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ $2\frac{1}{2}$ ಸಾವಿರ ಮನೆಗಳನ್ನು ಒದಗಿಸಬೇಕೆಂಬ ಒಂದು ಗುರಿಯಿದೆ. ಅದರ ಜೊತೆಗೆ ಇನ್ನೂ ಹೆಚ್ಚಿನ ಹಣದ ಸಹಾಯದೊರೆತರೆ ಇನ್ನು ಒಂದು ಸಾವಿರ ಮನೆಗಳನ್ನು ಹೆಚ್ಚಿಗೆ ಕಟ್ಟಿಸತಕ್ಕ ಪ್ರಯತ್ನವನ್ನೂ ಸಹಮಾಡುತ್ತೇವೆ. ಇನ್ನು ಶ್ರೀ ರಾಜಗೋಪಾಲ್ ಅವರು ಮಾತನಾಡುತ್ತ ವಿದ್ಯುತ್ ಇಲಾಖೆ ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಈಗ ಅವರ ಸಂಬಳ ಏನಿದೆ ಅದರ ಜೊತೆಗೆ ಅವರಿಗೀಗ ಕೊಡುತ್ತಿರುವ ತುಟ್ಟಿಭತ್ಯದ ಮೊಬಲಗನ್ನು ಸಹ ಮರ್ಜ್ ಮಾಡಬೇಕೆಂದು ಹೇಳಿದ್ದಾರೆ. ಈ ಹಿಂದೆಯೇ ಇದಕ್ಕೆ ಒಪ್ಪಿಗೆ ಕೊಡಲಾಗಿತ್ತು. ಆದರೆ ಆದಿನ್ನೂ ಕಾರ್ಯಗತವಾಗಿಲ್ಲ ಎಂದು ಹೇಳಿದರು. ಅದು ನಿಜ. ಆ ರೀತಿ ಒಪ್ಪಂದವಾಗಿದೆ. ಆದರೆ ಆ ಒಪ್ಪಂದ ಈ ಇಲಾಖೆಯ ಒಂದರ ವಿಚಾರದಲ್ಲೇ ಅಲ್ಲ. ಸರ್ಕಾರದ ಆಧೀನದಲ್ಲಿ ನಡೆಯುತ್ತಿರುವ ಎಲ್ಲ ಫ್ಯಾಕ್ಟರಿಗಳಿಗೂ ಈ ರೀತಿಯ ಒಂದು ಒಪ್ಪಂದವಾಗಿದೆ. ಕೆಲವು ಕಾರಣಗಳಿಂದ ಈ ಒಪ್ಪಂದ ಜಾರಿಗೆ ಬರಲು ನಿಧಾನವಾಗಿದೆ. ಆದಷ್ಟು ಜಾಗ್ರತೆ ಎಲ್ಲ ಫ್ಯಾಕ್ಟರಿಗಳಿಗೂ ತಿಳಿಸಿ ಈ ಒಪ್ಪಂದ ಜಾರಿಗೆ ತರುವುದಕ್ಕೆ ಏನು ಕೆಲಸ ನಡೆಸಬೇಕೋ ಅದನ್ನು ಮಾಡಲು ಒತ್ತಾಯ ಪಡಿಸುತ್ತೇವೆ. ಆದಷ್ಟು ಜಾಗ್ರತೆ ಇದರ ಪ್ರತಿ ಫಲ ಕಾರ್ಮಿಕರಿಗೆ ಒದಗಿಸುವ ಹಾಗೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ.

ಇನ್ನೊಬ್ಬ ಸದಸ್ಯರು ಇನ್ನೊಂದು ವಿಚಾರ ಹೇಳಿದ್ದಾರೆ. ಕೆಲವು ಟೆಂಪರರಿ ಕಾರ್ಮಿಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡಿದ್ದಾರೆ. ಮೈಸೂರು ಪಟ್ಟಣದಲ್ಲಿ ಗಾರ್ಡನ್ ಇಲಾಖೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಬಗ್ಗೆ ಹೇಳಿದ್ದಾರೆ. ಅದು ಸರಕಾರದ ಗಮನಕ್ಕೆ ಬಂದಿದೆ. ಇದನ್ನು ಸಹಾನುಭೂತಿಯಿಂದ ವಿಚಾರ ಮಾಡಿ ಅವರನ್ನು ಪರ್ಮನೆಂಟಾಗಿ ಮಾಡಲು ಏನು ಕ್ರಮ ತೆಗೆದುಕೊಳ್ಳಲು ಸಾಧ್ಯವಿದೆಯೋ ಅದನ್ನು ಸರಕಾರ ಮಾಡುತ್ತದೆ.

ಇನ್ನು ಎಂಪ್ಲಾಯಮೆಂಟ ಎಕ್ಸಚೇಂಜ ಬಗ್ಗೆ ಕೆಲವು ಸ್ನೇಹಿತರು ಮಾತನಾಡುತ್ತಾ ಕೆಲಸ ಕಾರ್ಯಗಳ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ಹಾಗು ಈ ವಿಚಾರದಲ್ಲಿ ಶ್ರೀಮಾನ್ ರಾಮಚಂದ್ರರಾಯರ ವರದಿಯನ್ನು ಓದಿದರು. ಎಂಪ್ಲಾಯಮೆಂಟ ಎಕ್ಸಚೇಂಜ್ ಕೇಂದ್ರಗಳಿರುವುದು ಅಗತ್ಯವಿಲ್ಲ ಎಂದು ಹೇಳಿದ್ದಾರೆ, ಇವುಗಳ ಸಂಖ್ಯೆ ಕಡಿಮೆ ಮಾಡಬೇಕೆಂದೂ ಸಹ ಸಲಹೆ ಕೊಟ್ಟಿದ್ದಾರೆ. ಮತ್ತು ಇದನ್ನು ಆಲೋಚನೆ ಮಾಡಬೇಕು ಎಂದು ಹೇಳಿದರು. ನನಗಾದರೂ ಸಹ ಅನಿಸುತ್ತದೆ. ಈ ಕೇಂದ್ರಗಳ ಕೆಲಸ ಕಾರ್ಯಗಳು ಏನು ಎಂಬುದನ್ನು ತಿಳಿದುಕೊಳ್ಳದೆ ಕಡಿಮೆ ಮಾಡಬೇಕೆಂದು ಹೇಳಿದ್ದಾರೆಂದು ಭಾಸವಾಗುತ್ತದೆ. ಇಷ್ಟು ಕೇಂದ್ರಗಳು ಇರುವುದು ಅಗತ್ಯ. ನನ್ನ ಅನುಭವ ಹೇಳುತ್ತೇನೆ. ಎಲ್ಲ ಕೇಂದ್ರಗಳ ಚಟುವಟಿಕೆ ಯಾವ ರೀತಿ ಇದೆ ಎನ್ನುವದನ್ನು ಅಂಕೆ-ಅಂಶಗಳ ಮೂಲಕ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. 1956-57ನೇ ಇಸವಿಯಲ್ಲಿ ರಿಜಿಸ್ಟರ್ ಅಂದರೆ ದಾಖಲಾಗಿರತಕ್ಕಂಥ ಎಲ್ಲ ಜನರ ಸಂಖ್ಯೆ 25,954 ಇದೆ. ಎಲ್ಲ ಸಂಖ್ಯೆ ಒದಗಿಸುವುದಕ್ಕೆ ಈಗ ಕಾಲಾವಕಾಶವಿಲ್ಲ. 1961-62 ರಲ್ಲಿ ಎಷ್ಟು ಎನ್ನುವದನ್ನು ಮಾತ್ರ ಹೇಳುತ್ತೇನೆ. 1961-62ಸ

ಸಾಲಿನಲ್ಲಿ 64,207 ಆಗಿದೆ. 1956-27ನೇ ಇಸವಿಯಲ್ಲಿ 8,975 ಜನರಿಗೆ ಕೆಲಸ ಒದಗಿಸಲಾಗಿದೆ. 1961-62 ರಲ್ಲಿ ಎಕ್ಸ್‌ಚೇಂಜ ಮೂಲಕ 22,943 ಜನರಿಗೆ ಕೆಲಸ ಒದಗಿಸಲಾಗಿದೆ. 1956 ರಿಂದ 1962ರ ವರೆಗೆ ಒಟ್ಟು 68,367 ಜನರಿಗೆ ಕೆಲಸ ಒದಗಿಸಲಾಗಿದೆ. ನಾವು ತಿಳಿದು ಕೊಂಡಿರುವ ಹಾಗೆ ಎಂಪ್ಲಾಯ ಮೆಂಟ ಎಕ್ಸಚೇಂಜನಿಂದ ಓದಿರುವವರಿಗೆ ನೇರವಾಗಿ ಕಡ್ಡಾಯವಾಗಿ ಎಲ್ಲರಿಗೂ ಕೆಲಸ ದೊರೆಯುತ್ತದೆ ಎಂದು ಇರುವದಿಲ್ಲ, ಕೆಲಸ ಹುಡುಕಿಕೊಂಡು ಬರುವ ಎಲ್ಲರಿಗೆ ನೇರವಾಗಿ ಕೆಲಸ ಒದಗಿಸಲು ಸಾಧ್ಯವಿಲ್ಲ. ಎಲ್ಲಿ ಕೆಲಸವಿದೆ ಎನ್ನುವ ತಿಳುವಳಿಕೆ ಕೊಡುವದಕ್ಕೆ ಮಾತ್ರ ಇದೆ. ಎಲ್ಲೆಲ್ಲಿ ಎಂಪ್ಲಾಯರ್ಸ್ ಇದ್ದಾರೆಯೋ ಅವರಿಂದ ಆಯಾಯ ಸ್ಥಳಗಲ್ಲಿರತಕ್ಕಂಥ ಖಾಲಿ ಜಾಗಗಳ ವಿವರ ತರಿಸಿ, ಇಂಥಿಂಥ ಕಡೆ ಕೆಲಸವಿದೆ, ಅಲ್ಲಿ ಹೋಗುವುದಕ್ಕೆ ಸಾಧ್ಯವಿದೆ ಎಂದು advise ಮಾಡಲಾಗುವುದು. ಎಂಪ್ಲಾಯಮೆಂಟಿಗಾಗಿ ಹೆಸರುಗಳನ್ನು ಕಳಿಸಬಹುದು. ಈಗ ಇರತಕ್ಕಂಥ ಕಾನೂನು ಪ್ರಕಾರ ಎಂಪ್ಲಾಯ ಮೆಂಟ ಎಕ್ಸಚೇಂಜನವರು ತಿಳಿಸಿದವರನ್ನೇ ತೆಗೆದುಕೊಳ್ಳಬೇಕೆಂದು ಕಡ್ಡಾಯ ಮಾಡಲು ಸಾಧ್ಯವಿಲ್ಲ. ಸಲಹೆ ಮಾಡಬಹುದು ಅಷ್ಟೇ ಇದನ್ನು ಲೋಪವೆಂದು ಕರೆಯಬಹುದು ಈಗ ಇರುವ ಪರಿಸ್ಥಿತಿ ಹೀಗೆ ಇದೆ. ಮನವಿ ಮಾತ್ರ ಮಾಡಿಕೊಳ್ಳಬಹುದು. ಆದರೆ ಎಂಪ್ಲಾಯ ಮೆಂಟ ಎಕ್ಸಚೇಂಜ ಕೆಲಸ ಒದಗಿಸುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಅನೇಕ ಜನರ ಹೆಸರುಗಳನ್ನು ರಿಜಿಸ್ಟರ್ ಮಾಡಬಹುದು. ಸಲಹೆ ಕೊಡಬಹುದು. ಆದರೆ ಕೆಲಸ ಕೊಡಲು ಸಾಧ್ಯವಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ವರ್ಷ ಎಂಪ್ಲಾಯಮೆಂಟ್ ಎಕ್ಸಚೇಂಜಿನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿದವರಿಗೆ ಕೂಡಲೇ ಅವಕಾಶ ಸಿಕ್ಕುತ್ತದೆ ಆದರೆ ಎಂಟು ವರ್ಷಗಳ ಹಿಂದೆ ರಿಜಿಸ್ಟರ್ ಮಾಡಿಸಿ, ರಿನ್ಯೂ ಮಾಡಿಕೊಂಡು ಬಂದಿರುವವರಿಗೆ ಇನ್ನು ನೌಕರಿ ಸಿಕ್ಕಿರುವದಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜಅರಸ್.—ಅಲ್ಪ ಸ್ವಲ್ಪ ಲೋಪ ದೋಷಗಳಿರಬಹುದು. ಸಂದರ್ಭಕ್ಕೆ ಅನುಸಾರವಾಗಿ ನಾಲ್ಕು ವರ್ಷಗಳ ಹಿಂದೆ ಯಾವದೇ ಒಂದು ಕೆಲಸಕ್ಕೆ ಒಬ್ಬ ವ್ಯಕ್ತಿ ತನ್ನ ಹೆಸರನ್ನು ರಿಜಿಸ್ಟರ್ ಮಾಡಿಸುತ್ತಾನೆ ಇಂಥಿಂಥ ಕ್ವಾಲಿಫಿಕೇಷನ್ಸ್ ಇರಬೇಕೆಂದು ಹೇಳದ ಕಾಲದಲ್ಲಿ ಹಾಗೆ ರಿಜಿಸ್ಟರ್ ಮಾಡಲಾಗುತ್ತದೆ. ಆದರೆ ಎರಡು ವರ್ಷಗಳ ನಂತರ ಸಂದರ್ಭ ಬದಲಾಗುತ್ತದೆ. ಇನ್ನು ಕೆಲವು ಖಾಸಗೀ ಫರ್ಮ್ಸ್‌ಗಳಲ್ಲಿ ಫ್ಯಾಕ್ಟರಿಗಳಲ್ಲಿ ಮೊದಲೇ ಮಾತನಾಡಿಕೊಂಡು ತಮಗೆ ಬೇಕಾದವರ ಹೆಸರುಗಳು ಎಂಪ್ಲಾಯಮೆಂಟ ಎಕ್ಸಚೇಂಜಿನಿಂದ ಬರುವ ಹಾಗೆ ಮಾಡಿಕೊಂಡು ಅಂಥವರಿಗೆ ಕೆಲಸ ಒದಗಿಸುತ್ತಾರೆ ನಾಲ್ಕು ವರ್ಷಗಳಿಂದ ತನ್ನ ಹೆಸರನ್ನು ರಿನ್ಯೂ ಮಾಡಿಕೊಂಡು ಬಂದಿರತಕ್ಕವರನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಎಂಪ್ಲಾಯರ್‌ಗೆ ಇಷ್ಟವಿಲ್ಲದಿದ್ದರೆ ಅವನನ್ನು ತೆಗೆದುಕೊಳ್ಳುವದಿಲ್ಲ. ತನಗೆ ಬೇಕಾದವರು ಯಾರೋ ಅವರನ್ನು ತೆಗೆದುಕೊಳ್ಳುತ್ತಾನೆ. ಈ ಎಕ್ಸಚೇಂಜಿನಿಂದ ಬರುವ ಹೆಸರುಗಳನ್ನು ಒಂದು ನೆಪ ಆಗಿ ಇಟ್ಟುಕೊಳ್ಳುತ್ತಾನೆ. ಯಾಕೆಂದರೆ ಎಂಪ್ಲಾಯಮೆಂಟ್ ಎಕ್ಸಚೇಂಜಿನಿಂದ ಬರದೇ ಇರತಕ್ಕಂಥ ಯಾವದೇ ಒಬ್ಬ ವ್ಯಕ್ತಿಯನ್ನು ತೆಗೆದು ಕೊಳ್ಳಬಾರದು ಎಂದು ಕಡ್ಡಾಯ ಆಜ್ಞೆಯಿದೆ. ಒಂದು ವೇಳೆ ಹಾಗೇನಾದರು ಒಬ್ಬನನ್ನ ಹೊರಗಿನಿಂದ ತೆಗೆದುಕೊಂಡರೆ ಆತನಿಗೆ ಸಂಬಂಧ ಪಟ್ಟ ಅಧಿಕಾರಿಗಳು 500 ರೂಪಾಯಿ ದಂಡವಿಧಿಸಬೇಕೆಂದಿದೆ. ಏನೇ ಕಷ್ಟ ಬಂದರೂ ಸಹ ಕಾನೂನಿನ ಸಂದಿನೊಳಗೆ ಸಂದರ್ಭನುಸಾರ ತೂರಿಕೊಂಡು ಹೋಗುವುದು ನಿಮಗೆ ಗೊತ್ತಿದೆ. ಈಗಿರತಕ್ಕ ಕಾನೂನಿನ ಚಾಕಟ್ಟಿನಲ್ಲಿ ಸಂಪೂರ್ಣವಾಗಿ ಎಂಪ್ಲಾಯಮೆಂಟ್ ಎಕ್ಸಚೇಂಜಿನಿಂದ ಹೋದವರೆಲ್ಲರನ್ನು ತೆಗೆದುಕೊಳ್ಳಬೇಕೆಂದು ಕಡ್ಡಾಯ ಮಾಡುವದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ಶ್ರೀ ಹುಚ್ಚಮಾಸ್ತಿಗೌಡ.—ಐದು ವರ್ಷಗಳ ಹಿಂದೆ ರಿಜಿಸ್ಟರ್ ಮಾಡಿಸಿಕೊಂಡು ಹೆಸರನ್ನು ರಿನ್ಯೂ ಮಾಡಿಕೊಂಡವರ ಹೆಸರುಗಳನ್ನು ಮತ್ತು ಇತ್ತೀಚೆಗೆ ಹೆಸರುಗಳನ್ನು ರಿಜಿಸ್ಟರ್ ಮಾಡಿದವರ ಹೆಸರುಗಳನ್ನು ಜೊತೆಗೆ ಲಿಸ್ಟಿನಲ್ಲಿ ಸೇರಿಸಿ ಒಟ್ಟಿಗೆ ಎಲ್ಲ ಹೆಸರುಗಳನ್ನು ಸೇರಿಸಿದರೆ ಅದಕ್ಕೇನು ಅಭ್ಯಂತರವಿಲ್ಲ. ಆದರೆ ಹಳೇ ಹೆಸರುಗಳನ್ನು ಬಿಟ್ಟುಕೊಟ್ಟು ಹೊಸದಾಗಿ ರಿಜಿಸ್ಟರ್ ಆದವರ ಹೆಸರುಗಳ ಲಿಸ್ಟನ್ನು ಕಳಿಸುವದರಲ್ಲಿ ಅನುಮಾನಕ್ಕೆ ಅವಕಾಶವಿದೆ. ಇದನ್ನು ಸರಕಾರದವರು ರಿಯಲೈಜ್ ಮಾಡಿದರೆ ಸಾಕು.

ಶ್ರೀ ಡಿ. ದೇವರಾಜ ಅರಸ್.—ಅಂಥಾದ್ದೇನಾದರೂ ಲೋಪದೋಷಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ.

ಕಾರ್ಮಿಕರ ವಿದ್ಯಾಭ್ಯಾಸದ ಸಂಬಂಧವಾಗಿ ಕೆಲವು ಟೀಕೆಗಳನ್ನು ಮಾನ್ಯ ಸ್ನೇಹಿತರು ಮಾಡಿದ್ದಾರೆ. ಮೊದಲನೆಯದಾಗಿ ನಾನು ನಮ್ಮ ಮಾನ್ಯ ಸ್ನೇಹಿತರಲ್ಲಿ ಮತ್ತು ಈ ಸಭೆಗೆ ಈ ವಿಷಯದಲ್ಲಿ ಮನವಿ ಮಾಡುವುದೇನೆಂದರೆ ಕಾರ್ಮಿಕರ ವಿದ್ಯಾಭ್ಯಾಸದ ವಿಚಾರ ನೇರವಾಗಿ ನಮ್ಮ ರಾಜ್ಯ ಸರ್ಕಾರದ ಖರ್ಚಿನಿಂದ ಆಗುತ್ತಿಲ್ಲ. ಕೇಂದ್ರ ಸರ್ಕಾರದವರೇ ಸಂಪೂರ್ಣವಾಗಿ ಈ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಎಲ್ಲ ಖರ್ಚನ್ನೂ ಒದಗಿಸುತ್ತಾರೆ. ಆ ದುಡ್ಡನ್ನೂ ನಾವು ಖರ್ಚು ಮಾಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಅಲ್ಲಿಂದ ಹೆಚ್ಚು ಹಣವನ್ನು ಪಡೆದರೆ ಆ ವಿಷಯದಲ್ಲಿ ಗಮನಕೊಟ್ಟು ಹೆಚ್ಚು ಹೆಚ್ಚು ಖರ್ಚು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರೇ ಹೇಳಿದ ಹಾಗೆ ಇತ್ತೀಚೆಗೆ ಹೊಸದಾಗಿ ಜಾರಿಗೆ ಬಂದಿರುವ ಒಂದು ಯೋಜನೆ ಇದೆ. ಇದರ ವಿಷಯದಲ್ಲಿ ಕೇಂದ್ರ ಸರ್ಕಾರದವರು ಒದಗಿಸಿರತಕ್ಕ ದುಡ್ಡನ್ನೆಲ್ಲ ಖರ್ಚುಮಾಡಿ ಸದುಪಯೋಗ ಮಾಡಿ ಕಾರ್ಮಿಕರಿಗೆ ಅದರಿಂದ ವಿದ್ಯಾಭ್ಯಾಸವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ.

7-00 P.M.

Sri S. RAJA GOPAL.—I have spoken only about giving encouragement.

Sri D. DEVRAJ URS.—The encouragement is proportionate to the money we spend.

ಇದಕ್ಕೆ ಒಂದು ಕೇಂದ್ರದ ಬೋರ್ಡ್ ಕೂಡ ಇದೆ. ಇದಕ್ಕೆ ಸರ್ಕಾರ, employers, workers ಎಲ್ಲರ ಪ್ರತಿನಿಧಿಗಳಿದ್ದಾರೆ. ಇದಕ್ಕೆ Joint Secretary, Government of India Ministry of Labour and Employment ಅವರು ಚೇರ್‌ಮನ್ ಆಗಿದ್ದಾರೆ. ಈಗ ನಮ್ಮ ಮಾನ್ಯ ಸ್ನೇಹಿತರ ಅವಗಾಹನೆಗೆ ಒಂದು ವಿಷಯವನ್ನು ತರುತ್ತೇನೆ, ನಮ್ಮ ಸಂಸ್ಥಾನದಲ್ಲಿ ಇದ

(ಶ್ರೀ ಡಿ. ದೇವರಾಜ ಅರಸ್)

ಯಾವ ರೀತಿ ಕೆಲಸಮಾಡುತ್ತಿದೆ ಎನ್ನುವ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಟ್ಟರೆ ಅದರ ಪ್ರಗತಿ ಹೇಗಿದೆ ಎನ್ನುವುದನ್ನು ತಾವೇ ತಿಳಿಯಬಹುದು. ಒಟ್ಟು 56 unit level class ಕೆಲಸಮಾಡುತ್ತಿವೆ, ಅನೇಕ ಕೈಗಾರಿಕೆಗಳಲ್ಲಿ organise ಮಾಡಿದ್ದಾರೆ. ಸುಮಾರು ೨,೮೪೦ ಜನ ಕೆಲಸಗಾರರಿಗೆ ಟ್ರೈನಿಂಗ್ ಕೊಟ್ಟಿದೆ. ೧,೦೦೭ ಜನದವರೆಗೆ ಟ್ರೈನಿಂಗ್ ತೆಗೆದು ಕೊಳ್ಳುತ್ತಿದ್ದಾರೆ. ೧೭ನೇ ಜನವರಿ ೧೯೬೨ರಿಂದ ಕೋಲಾರದ ಚಿನ್ನದಗಣಿ ಪ್ರದೇಶ, ಮಡಕೇರಿ ಹುಬ್ಬಳ್ಳಿ. ಮಂಗಳೂರು ಮತ್ತು ದಾಂಡೇಲಿ, ಇಷ್ಟು ಸ್ಥಳಗಳಲ್ಲಿ temporary sub regional centres open ಮಾಡಬೇಕು ಎಂದು ತೀರ್ಮಾನವಾಗಿದೆ. ಈ ಭಾಗದಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಪ್ರಗತಿಯಾಗುತ್ತಿಲ್ಲವೆಂದು ಒಪ್ಪಿದರೂ ಸಾಕಷ್ಟು ಜಾಗ್ರತೆಯಿಂದ ಕಾರ್ಮಿಕರ ಹಿತರಕ್ಷಣೆ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಮಾರ್ಗದಲ್ಲಿ ಮಾಡಬಹುದೋ ಅದನ್ನೆಲ್ಲವನ್ನೂ ಕೂಡ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮಾಡುತ್ತಿದ್ದಾರೆ.

ಪ್ಲಾಂಟೇಷನ್ ವಿಚಾರವಾಗಿ ಒಂದು ಮಾತನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ. ಅವರಿಗೆ ಹೆಚ್ಚು ಮನೆಗಳನ್ನು ಕಟ್ಟಿಸುತ್ತಿಲ್ಲ ಎಂದು ಹೇಳಿದ್ದಾರೆ. ಸರ್ಕಾರದವರು ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರತಕ್ಕ ಹಣವನ್ನು ಪ್ಲಾಂಟೇಷನ್ ಮಾಲೀಕರು ಸಾಲದ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲವೆಂಬುದನ್ನು ಈಗಾಗಲೇ ತಾವು ತಿಳಿದಿರಬಹುದು. ನಾವು ಒದಗಿಸಿರುವ ಹಣವನ್ನು ಅವರು ಉಪಯೋಗಿಸುತ್ತಇಲ್ಲ. ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಆದರೂ ಅನೇಕ ಕಡೆ ಮನೆಗಳನ್ನು ಅವರೇ ಕಟ್ಟಿಸಿಕೊಡುತ್ತಿದಾರೆ. ಒಟ್ಟಿನಲ್ಲಿ ಹೇಳುವುದಾದರೆ ಶೇಕಡ ೪೦ ಕ್ಕಿಂತ ಹೆಚ್ಚಾಗಿ ಈ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ, ಇನ್ನೂ ಹೆಚ್ಚು ಹೆಚ್ಚು ಕಟ್ಟಿಸಿಕೊಡುವುದರಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ಸ್ವಾಮಿ, ಒಟ್ಟಿನಲ್ಲಿ ಕಾರ್ಮಿಕರ ಹಿತರಕ್ಷಣೆ ಸಾಕಷ್ಟು ನಡೆಯುತ್ತಿಲ್ಲ. ಅವರಿಗೆ ಒದಗಬೇಕಾದ ಸೌಕರ್ಯ, ವಿದ್ಯಾಸೌಕರ್ಯ, ವಸತಿಸೌಕರ್ಯ, ತುಟ್ಟಿಭತ್ಯ ಮತ್ತು ಸಂಬಳ ಈ ಎಲ್ಲ ವಿಷಯಗಳಲ್ಲಿಯೂ ಕೂಡ ಸರ್ಕಾರಕ್ಕೆ ಸಾಕಷ್ಟು ಗಮನವಿಲ್ಲವೆನ್ನತಕ್ಕ ಒಂದು ಒಟ್ಟಿನ ಮಾತನ್ನು ನಮ್ಮ ಸ್ನೇಹಿತರು ಹೇಳಿದರು, ನಿಜ. ನಾವು ಎಷ್ಟು ಆಸೆ ಇಟ್ಟುಕೊಂಡಿದ್ದೆವೋ, ನಾವು ಅವರ ವಿಷಯದಲ್ಲಿ ಎಷ್ಟು ಬೇಗ ಬೇಗ ಮುಂದೆ ಬರಬೇಕು, ಅವರ ಹಿತರಕ್ಷಣೆ ಯಾವ ಮಟ್ಟದಲ್ಲಿ ನಡೆಯಲ್ಪಡಬೇಕು, ಅವರಿಗೆ ಯಾವ ಯಾವ ರೀತಿಯ ಸೌಖ್ಯ ಸೌಲಭ್ಯಗಳನ್ನು ಒದಗಿಸಬೇಕು ಎನ್ನುವ ಆಸೆ ಎಷ್ಟೇ ಇದ್ದರೂ ಒಂದೆರಡು ವಿಷಯಗಳನ್ನು ನಮ್ಮ ಮಾನ್ಯಸ್ನೇಹಿತರು ಈ ಸಂದರ್ಭದಲ್ಲಿ ಗಮನದಲ್ಲಿಡಬೇಕು ಎಂದು ಈ ಸಭೆಯ ಮುಖಾಂತರ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏನೆಂದರೆ ನಮ್ಮ ದೇಶ ಈಗ ತಾನೇ ಯಂತ್ರಗಳ ಉಪಯೋಗ, ಮತ್ತು ಕಾರ್ಖಾನೆಗಳ ಸ್ಥಾಪನೆಯಲ್ಲಿ ಪ್ರಾರಂಭದಿಸೆಯಲ್ಲಿದೆ. Industrialisation ಎಂದು ಏನು ಹೇಳುತ್ತೇವೆ, ಔದ್ಯೋಗೀಕರಣ ಇನ್ನೂ ಪ್ರಾರಂಭದಿಸೆಯಲ್ಲಿರುವುದರಿಂದ ಒಂದುವೇಳೆ ಕಾರ್ಮಿಕರ ಹಿತರಕ್ಷಣೆ ಮಾಡುವ ಭರಾಟೆಯಲ್ಲಿ, ಈ ವಿಚಾರದಲ್ಲಿ ಹೆಚ್ಚು ಒತ್ತಾಯ ಮಾಡಿದ್ದೇ ಆದರೆ ಒಂದು ಮಟ್ಟ ಮೀರಿ ಹೆಚ್ಚಾಗಿ ನಮ್ಮ ಬೇಡಿಕೆಗಳನ್ನು ಇಟ್ಟು ಯಾವ ರೂಪದಲ್ಲಿಯೇ ಆಗಲೀ ಬೆಳೆಯುತಕ್ಕ developing economy ಎಂದು ಏನು ಹೇಳುತ್ತಾರೆ ಅದರ ಮೇಲೆ ದೃಷ್ಟಿಯಿಲ್ಲದೆ ಕಾರ್ಮಿಕರ ಹಿತವೇ ಅಂತ್ಯವಾದುದು ಎಂದು ಈ ಕಾರ್ಖಾನೆಗಳ ಔದ್ಯೋಗೀಕರಣ ವಿಚಾರದಲ್ಲಿ ಗಮನಕೊಡದೆ, ಕಾರ್ಮಿಕರ ಹಿತದ ಕಡೆಗೇ ಹೆಚ್ಚು ಗಮನ ಕೊಟ್ಟರೆ ಔದ್ಯೋಗೀಕರಣದ ಪ್ರಗತಿ ಕುಂಠಿತವಾಗಲೇಬೇಕಾಗುತ್ತದೆ. ಇದರ ಜೊತೆಗೆ ಕಾರ್ಮಿಕ ವರ್ಗದವರು ಇನ್ನೂ ಒಂದು ಮುಖ್ಯ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಡೀ ದೇಶದ ಆರ್ಥಿಕ ಮಟ್ಟ, ಸಾಮಾನ್ಯ ಜನತೆಯ ಜೀವನ ಮಟ್ಟ, ಏನಿದೆ ಅದಕ್ಕಿಂತಲೂ ಬಹಳ ಎತ್ತರವಾಗಿ ಬಹಳ ದೂರವಾಗಿ ಕಾರ್ಮಿಕರ ಜೀವನ ಮಟ್ಟ ಏರಬೇಕು ಎಂದು ಆಸೆ ಪಡುವುದಾದರೆ ಅದೂಕೂಡ ವಸ್ತುಸ್ಥಿತಿ ಏನಿದೆ ಅದಕ್ಕೆ ದೂರವಾದ ಮಾತಾದೀತು. ಇವೆರಡನ್ನೂ ಗಮನದಲ್ಲಿಟ್ಟುಕೊಂಡು ನಮ್ಮ ಕಾರ್ಮಿಕರ ಹಿತಸಾಧನೆಯನ್ನು ಮಾಡಿಕೊಂಡು ಹೋಗಬೇಕಾಗಿರುತ್ತದೆ. ಇದಕ್ಕಾಗಿ ಮಧ್ಯಸ್ತಿಕೆ ದಾರಿ (middle path)ಯನ್ನು ನಡೆಸಿಕೊಂಡು ಹೋಗಬೇಕಾಗಿರುವುದರಿಂದ ನಾನು ನಮ್ಮ ಸ್ನೇಹಿತರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನಮ್ಮ ಆಶೋತ್ತರಗಳು ಎಷ್ಟೇ ಇದ್ದರೂ, ಈ ಒಂದು ವಸ್ತು ಸ್ಥಿತಿಯನ್ನು ಗಮನದಲ್ಲಿಟ್ಟು ಅದಕ್ಕನುಗುಣವಾಗಿ ಕಾರ್ಮಿಕರ ಹಿತಸಾಧನೆಯನ್ನು ಮಾಡಿಕೊಂಡು ಹೋಗಬೇಕು. ಆ ರೀತಿ ಮಾಡುವುದರಲ್ಲಿ ತಮ್ಮೆಲ್ಲರ ಸಹಕಾರವಿದೆ ಎಂದು ನಾನು ಭಾವಿಸಿಕೊಂಡು ಕಾರ್ಮಿಕರ ಹಿತರಕ್ಷಣೆ ವಸತಿ ನಿರ್ಮಾಣದ ಬಗ್ಗೆ ಇಟ್ಟಿರತಕ್ಕ ಈ ಒಂದು ಪುಟ್ಟ ಬೇಡಿಕೆಯನ್ನು ತಾವೆಲ್ಲರೂ ಕೂಡ ಒಪ್ಪಿ ಸಹಾಯ ಮಾಡುತ್ತೀರೆಂದು ನಂಬಿ ತಮ್ಮನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆ ಮಂತ್ರಿಗಳು).—ಸ್ವಾಮಿ, ಸಹಕಾರ ಖಾತೆಗೆ ಸಂಬಂಧಪಟ್ಟಂಥ ಬೇಡಿಕೆಯನ್ನು ಈ ಸಭೆಯ ಮನ್ನಣೆಗೆ ಶಿಫಾರಸು ಮಾಡುತ್ತಾ, ಇಂದಿನ ಅಲ್ಪ ವೇಳೆಯಲ್ಲಿ ಉತ್ತರ ರೂಪವಾಗಿ ನಾಲ್ಕು ಮಾತುಗಳನ್ನು ಹೇಳುವುದು ನನ್ನ ಕರ್ತವ್ಯ.

ಮಾನ್ಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆ, ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಕೃತಜ್ಞನಾಗಿದ್ದೇನೆ, ಆದರಲ್ಲಿ ಕೆಲವು ಸ್ಥಾನಿಕ ತೊಂದರೆಗಳು, ಸ್ಥಾನಿಕ ಸಮಸ್ಯೆಗಳು ಇವೆ. ಆ ಸ್ಥಾನಿಕ ತೊಂದರೆಗಳು ಮತ್ತು ಸಮಸ್ಯೆಗಳ ಬಗ್ಗೆ ಈ ಸಂಧರ್ಭದಲ್ಲಿ ನಾನು ಸಂಪೂರ್ಣವಾಗಿ ಆಶ್ವಾಸನೆಯನ್ನು ಕೊಡುವುದು ಸಾಧ್ಯವಿಲ್ಲ. ಅದಕ್ಕೆ ಕಾಲ ಕೂಡ ಇಲ್ಲ, ಆದ್ದರಿಂದ ಸಾಮಾನ್ಯವಾಗಿ ಬಂದಂಥ ಸೂಚನೆಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ಪ್ರಾರಂಭದಲ್ಲಿ ಮಾನ್ಯ ಸದಸ್ಯರ ಅವಗಾಹನೆಗೆ ಕೆಲವೊಂದು ಅಂಕೆ ಸಂಖ್ಯೆಗಳನ್ನು ನಮ್ಮ ಸಹಕಾರಿ ಆಂಧೋಳನದ ವಿಷಯವಾಗಿ ಕೊಟ್ಟರೆ ಒಳ್ಳೆಯದು, ಆದ್ದರಿಂದ ಕೊಡಲು ಕುತೂಹಲಿಯಾಗಿದ್ದೇನೆ. ಇದು ನಮ್ಮ ಮೈಸೂರು ರಾಜ್ಯ ದೇಶದ ಸಹಕಾರದ ನಕಾಶೆಯಲ್ಲಿ ಒಂದು ಅಗ್ರಸ್ಥಾನವನ್ನು ಪಡೆದಿದೆಯೆಂದು ಹೇಳಿದರೆ ಅತಿಶಯೋಕ್ತಿಯ ಮಾತಲ್ಲ, ನಮ್ಮ ಸಹಕಾರೀ ಸಂಸ್ಥೆಗಳ ರಚನೆ ಸಾಮಾನ್ಯವಾಗಿ ಎಲ್ಲ ಅಂಶಗಳಿಂದಲೂ ಇಂದು ಪೂರ್ಣಗೊಂಡಿದೆ. ಗವರ್ನ್‌ಮೆಂಟ್ ಆಫ್ ಇಂಡಿಯದವರು ಮತ್ತು ಪ್ಲಾನಿಂಗ್

ಕಮಿಷನ್ನಿನವರು ಯಾವ ಮುಖ್ಯ ಮುಖ್ಯವಾದ ಸೂಚನೆಗಳನ್ನು ಮಾಡಿದ್ದಾರೆಯೋ ಆ ಸೂಚನೆಗಳನ್ನು ನಮ್ಮ ಪರಿಸ್ಥಿತಿಗೆ ಅಳವಡಿಸಿಕೊಂಡು, ಈಗಾಗಲೇ ಆ ಮಾರ್ಗದಲ್ಲಿ ಬಹಳ ಮುಂದುವರಿದಿದ್ದೇವೆ. ಈ ಸಹಕಾರಿ ಸಂಸ್ಥೆಗಳ ಪ್ರಮಾಣದಲ್ಲಿ ಅಂಕಿ ಸಂಖ್ಯೆಯಲ್ಲಿ ಹೆಚ್ಚಳ ಆಗಿರುವ ಹಾಗೆ ಅವುಗಳ ಕ್ವಾಲಿಟಿಯಲ್ಲಿ ಕೂಡ ಅಷ್ಟೇ ಅಭಿವೃದ್ಧಿ ಪ್ರಗತಿಯಾಗಿದೆಯೆಂದು ನಾನು ಹೇಳಿ ಕೊಳ್ಳುವುದಿಲ್ಲ. ಸಂಖ್ಯೆ ಹೆಚ್ಚಾದ ಹಾಗೆ ಕ್ವಾಲಿಟಿ ಸ್ವಲ್ಪ ಮಟ್ಟಿಗೆ ಕಡಿಮೆ ನಿಸರ್ಗವಾಗಿರಬಹುದು. ಪ್ರಾರಂಭದಲ್ಲಿ ಮೊದಲು ಹೇಳಿದ ಹಾಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಇಂದು ನಮ್ಮ ಮೈಸೂರು ರಾಜ್ಯದಲ್ಲಿ ಒಟ್ಟಾಗಿ ೧೪,೦೦೦ಕ್ಕಿಂತ ಸಹಕಾರ ಸಂಸ್ಥೆಗಳು ಹೆಚ್ಚಾಗಿವೆ, ಅವುಗಳ ಸದಸ್ಯರ ಸಂಖ್ಯೆ ೨೪ ಲಕ್ಷ. Paid-up Share Capital Rs. 17,38,00,000; Deposit Rs. 23 crores, Borrowings Rs. 2,99,00,000, Central Institutions Rs. 35,59,00,000, Other Resources Rs. 17,72,00,000, Reserve Rs. 7,72,00,000. Total Working Capital Rs. 103,40,00,000. Loans Issured Rs. 83,53,00,000; Loans Recovered Rs. 67,77,00,000. Total Outstanding loans: about 15 crores.

ಇದರ ಮೇಲೆ ಇವತ್ತಿನವರೆಗೆ ಸುಮಾರು ನೂರರಲ್ಲಿ ೮೪ ಭಾಗದಷ್ಟು ಹಳ್ಳಿಗಳು ಇವತ್ತು ನಮ್ಮ ಸಹಕಾರಿ ಆಂದೋಳನದಲ್ಲಿ ಸೇರಿವೆ. ಕಳೆದ ಎರಡನೆಯ ಯೋಜನೆಯ ಅವಧಿಯಲ್ಲಿ ಸಹಕಾರಿ ಆಂದೋಳದಲ್ಲಿನ ಪ್ರಗತಿಯ ಬಗ್ಗೆ ಒಟ್ಟು ೨೭೬ ಲಕ್ಷರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೆವು, ಅದರಲ್ಲಿ ೨೩೧ ಲಕ್ಷ ರೂಪಾಯಿಗಳು ಖರ್ಚಾಗಿವೆ. ಇಂದು ಸಹಕಾರಿ ಸಂಸ್ಥೆಗಳ ಮುಖಾಂತರವಾಗಿ ನಾವು short-term ಮತ್ತು medium-term loanಗಳನ್ನು ೧೯೬೦-೬೧ನೇ ಇಸವಿಯಲ್ಲಿ ಹದಿನಾಲ್ಕು ಕೋಟಿ ಹದಿನಾಲ್ಕು ಲಕ್ಷ ರೂಪಾಯಿಯಷ್ಟು ಕೊಟ್ಟಿದ್ದೇವೆ. ಅದರಂತೆಯೇ ಧೀರ್ಘಾವಧಿ ಸಾಲಗಳನ್ನೂ ೯೭ ಲಕ್ಷದಷ್ಟು ಕೊಟ್ಟಿದ್ದೇವೆ. Marketing finance ವಿಷಯದಲ್ಲಿ ಹೇಳುವುದಾದರೆ ೧೯೬೦-೬೧ನೇ ಇಸವಿಯಲ್ಲಿ ೩೩೫ ಲಕ್ಷದಷ್ಟು ಕೊಟ್ಟಿದ್ದೇವೆ. House buliding ಕೆಲಸದ ಬಗ್ಗೆ ೪೪ ಲಕ್ಷ ರೂಪಾಯಿ ನಷ್ಟು ಇದೇ ವರ್ಷ ಕೊಟ್ಟಿದ್ದೇವೆ. ಈ ಅಂಕಿ ಅಂಶ ಗಳನ್ನು ನೋಡಿದರೆ ನಮ್ಮ ರಾಜ್ಯದ ಸಹಕಾರಿ ಆಂದೋಳನ ಬಹಳ ತೀವ್ರಗತಿಯಿಂದ ನಡಿದಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಮನದಬಲ್ಲದು ಎಂದು ಆಸೆ ಮಾಡುತ್ತೇನೆ. ಈಗ ಸದಸ್ಯರು ಮಾತನಾಡುವಾಗ ಅನೇಕ ರೀತಿಯ ಸೂಚನೆಗಳನ್ನೂ ಮಾಡಿದ್ದಾರೆ. ಮತ್ತು ಕೆಲವರು ಟೀಕೆಗಳನ್ನು ಕೂಡ ಮಾಡಿದ್ದಾರೆ ಅವುಗಳಲ್ಲಿ ಮುಖ್ಯವಾದುವು ಮಾತ್ರ ಇಟ್ಟುಕೊಂಡು ಉತ್ತರ ರೂಪವಾಗಿ ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಮೊದಲನೆಯದು, ಸಹಕಾರ ಆಂದೋಳನದಲ್ಲಿ ಸರ್ಕಾರ ಒಂದು ವಿಶಿಷ್ಟ ರಾಜಕೀಯ ಪಕ್ಷದವರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತಾ ಇದೆ, ರಾಜಕೀಯ ಇದರಿಂದ ಹೋಗಬೇಕು ಎಂದು ಕೆಲವು ಜನ ಹೇಳಿದರು, ನಾಮಿನೇಷನ್ ಅಥವಾ ನೇಮಕ ಸಹಕಾರ ಸಂಘಗಳಿಗೆ ಮಾಡುವಾಗ ತಮ್ಮದೇ ಪಕ್ಷಕ್ಕೆ ಸರ್ಕಾರ ಹೆಚ್ಚು ಪ್ರಾತಿನಿಧ್ಯ ಕೊಡುವುದು ಎಂದು ಉಲ್ಲೇಖಿಸಿದರು. ಈ ಸಹಕಾರ ಆಂದೋಳನದಲ್ಲಿ ರಾಜಕೀಯ ಇರಬಾರದು ಎಂದು ಹೇಳುವ ಬಗ್ಗೆ ನನ್ನ ಮತ್ತು ಸರ್ಕಾರದ ಭಿನ್ನಾಭಿಪ್ರಾಯವಿಲ್ಲ, ಸದಸ್ಯರು ಯಾವ ಅಭಿಪ್ರಾಯ ಪಟ್ಟರೋ ಅದೇ ಸರ್ಕಾರದ್ದು. ಆದರೆ ಸಹಕಾರ ಸಂಸ್ಥೆಗಳಲ್ಲಿ ರಾಜಕೀಯ ಸಂಸ್ಥೆಗಳಿಗೆ ಸೇರಿದಂಥ ಜನರಿಗೆ ಪ್ರವೇಶವಿರಬಾರದು ಅನ್ನತಕ್ಕ ನಿರ್ಬಂಧವನ್ನು ಹಾಕಲು ಸಾಧ್ಯವಿಲ್ಲ. ಹೀಗೆ ಸೇರಿಸಬಾರದೆಂದು ಯಾವ ಒಬ್ಬ ಮಾನ್ಯ ಸದಸ್ಯರು ಹೇಳಿದರೋ ಅವರೇ ಒಂದು ವೈಶಿಷ್ಟ್ಯ ರಾಜಕೀಯ ಪಕ್ಷಕ್ಕೆ ಸೇರಿದವರು. ಅವರೇ ಸಹಕಾರ ಸಂಸ್ಥೆಯ ಸದಸ್ಯರಾಗಿರುವರು. ಇಷ್ಟು ಮಾತ್ರ ಈ ವಿಷಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಯಾವುದೇ ರಾಜಕೀಯ ಕಾರಣದಿಂದ ಅಥವ ಯಾವುದೇ ವ್ಯಕ್ತಿ ವಿಶಿಷ್ಟ ರಾಜಕೀಯ ಪಕ್ಷಕ್ಕೆ ಸೇರಿದಂಥ ಕಾರಣದಿಂದ, ಆ ಪಕ್ಷವನ್ನು ಪಕ್ಷಪಾತ ದೃಷ್ಟಿಯಿಂದ ನೋಡುವುದಿಲ್ಲ, ಇಂದು ಯಾರೋ ಒಬ್ಬ ಮಾನ್ಯ ಸದಸ್ಯರು ವಿಶಿಷ್ಟವಾದಂಥ ರಾಜಕೀಯ ಪಕ್ಷಕ್ಕೆ ಸೇರಿದ್ದಾರೆಂಬ ಒಂದೇ ಕಾರಣದಿಂದ ಸಹಕಾರ ಸಂಸ್ಥೆಗೆ ಒಪ್ಪಿಗೆ ಕೊಡದಿದ್ದನ್ನು ಅಥವಾ ಏನೊಂದು ರೀತಿಯ ಅನಾನುಕೂಲತೆ ಒದಗಿಸದುದ್ದನ್ನು ದೃಷ್ಟಾಂತ ಸಹಿತ ನನ್ನ ಹತ್ತಿರ ತಂದರೆ ಬಗೆಹರಿಸಲಿಕ್ಕೆ ಸಿದ್ಧನಿದ್ದೇನೆ. ಅದೇ ರೀತಿ ನಾಮಕರಣ ಮಾಡುವಾಗ ಸರ್ಕಾರದವರು ಅನೇಕ ರೀತಿಯ ಫ್ಯಾಕ್ಟರುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುತ್ತಾರೆ. ಸರ್ಕಾರದ ರಾಜಕೀಯ ಪಕ್ಷಕ್ಕೆ ಸೇರಿದವರೂ ಮಾತ್ರವೇ ಅಲ್ಲ, ಅನೇಕ ಜನ ಸಹಕಾರ ಸಂಸ್ಥೆಗಳಿಗೆ ನೇಮಕ ಮತ್ತು ನಾಮಕರಣ ಮಾಡಿದವರಲ್ಲ, ಆಡಳಿತ ಪಕ್ಷವನ್ನು ವಿರೋಧಿಸಿರುವವರೂ ಇದ್ದಾರೆ, ಅಂಥ ಉದಾಹರಣೆಗಳನ್ನು ಕೊಡಬಲ್ಲೆ, ಆದರೆ ಇಂದು ಸಮಯವಿಲ್ಲ, ಆದ್ದರಿಂದ ನಾಮಕರಣ ಮಾಡುವಾಗ ಸರ್ಕಾರದವರು ಅದೊಂದೇ ಕಾರಣವನ್ನು ನೋಡುತ್ತಾರೆಂದು ಹೇಳುವುದು ಸರಿಯಲ್ಲ ಎಂದು ನಮ್ರವಾಗಿ ಹೇಳಲು ಬಯಸುತ್ತೇನೆ.

ಈ ಸಹಕಾರ ಯೂನಿಯನ್ನುಗಳ ವಿಷಯದಲ್ಲಿ ಮಾನ್ಯ ಸದಸ್ಯರು ಅನೇಕ ರೀತಿಯ ಸೂಚನೆ ಮಾಡಿದರು. ಸದಸ್ಯರುಗಳಿಗೆ ಗೊತ್ತಿರುವ ಹಾಗೆ ಸುಮಾರು ಒಂದುವರೆ, ಎರಡು ವರ್ಷಗಳ ಹಿಂದೆ ಶ್ರೀಮಾನ್ ನಾಗನಗೌಡ ಕಮಿಟಿ ಮಾಡಿದಂಥ ಶಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಸಹಕಾರ ಯೂನಿಯನ್ನು ಸ್ಥಾಪನೆ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ.

ಆದರೆ ರಾಜ್ಯಾಡಳಿತದ ಯೂನಿಯನ್ ಮತ್ತು ಜಿಲ್ಲಾಮಟ್ಟದ ಯೂನಿಯನ್ ಒಂದೇ ಸಲ ಬರಲಿಲ್ಲ. ಆದರೂ ಸಹ ಆ ವಿಷಯದಲ್ಲಿ ಚುನಾವಣೆ ಒಮ್ಮೆಯೇ ನಡೆಸುವುದಕ್ಕೆ ಸಾಧ್ಯವಾಗಲಿಲ್ಲ ಸರ್ಕಾರದವರು ಈಗ ಆ ವಿಷಯವನ್ನು ಬಹಳ ತೀವ್ರವಾಗಿ ಗಮನಿಸುತ್ತಿದ್ದಾರೆ. ಆದಷ್ಟು ತೀವ್ರವಾಗಿ ಈ ಯೂನಿಯನ್ ಚುನಾಯಿತವಾಗಿ ರಚಿಸಬೇಕೆಂಬ ಅಭಿಪ್ರಾಯ ಇದೆ. ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಈ ಸಭೆಗೆ ತಿಳಿಸಲಿಚ್ಛಿಸುತ್ತೇನೆ. ಈಗ ತಾಲ್ಲೂಕು ಮಟ್ಟದಲ್ಲಿ, ಬ್ಲಾಕ್ ಮಟ್ಟದಲ್ಲಿ ಯಾವ ತರಹ ಯೂನಿಯನ್ ಇಲ್ಲ. ಕೇಂದ್ರ ಸರ್ಕಾರದಿಂದ ಬ್ಲಾಕ್ ಮಟ್ಟದಲ್ಲಿ ಆಗಬೇಕೇ ಅಥವಾ ತಾಲ್ಲೂಕ್ ಮಟ್ಟದಲ್ಲಿ ಆಗಬೇಕೆಂಬ ವಿಚಾರದಲ್ಲಿ ನಿರ್ದಿಷ್ಟವಾಗಿ ಸೂಚನೆ ಬಂದಿಲ್ಲ. ಇವತ್ತು ತಾಲ್ಲೂಕು ಮಟ್ಟದಲ್ಲಿ ಇಂತಹ ಯೂನಿಯನ್ ಆಗಬೇಕೆಂಬ ಅಭಿಪ್ರಾಯ ಇದೆ.

(ಶ್ರೀ ರಾಮಕೃಷ್ಣ ಹೆಗ್ಗಡೆ)

ಆ ರೀತಿ ಯೂನಿಯನ್‌ಗಳನ್ನು ಈಗಾಗಲೇ ಸರ್ಕಾರ ಸ್ಥಾಪನೆ ಮಾಡುತ್ತಿದೆಯೆಂದು ನಾನು ಘೋಷಣೆ ಮಾಡುವುದಕ್ಕೆ ಬಯಸುತ್ತೇನೆ. ಇನ್ನು ಮ್ಯಾನೇಜ್‌ಮೆಂಟ್ ಕಾಸ್ಟ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿದರು. ಇದರ ಪೂರಾ ಎಸ್ಟ್ಯಾಬ್ಲಿಷ್‌ಮೆಂಟನ್ನು ಸರ್ಕಾರದವರು ನಡೆಸುದಕ್ಕಾಗುವುದಿಲ್ಲ. ಸ್ವಲ್ಪಮಟ್ಟಿಗೆ ಮಾತ್ರ ಸಹಾಯಮಾಡುವ ವ್ಯವಸ್ಥೆ ಮಾಡಿದ್ದಾರೆಂಬುದಾಗಿ ಹೇಳಿದರು. ಇದರಲ್ಲಿ ಸರ್ಕಾರಕ್ಕೆ ಸ್ವಲ್ಪವೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನೂ ಕೂಡ ಸಾಲ ತೆಗೆದುಕೊಂಡ ರೈತರು ತಮ್ಮ ಸರಕುಗಳ ಮಾರಾಟವನ್ನು ಈ ಸಹಕಾರ ಸಂಘಗಳ ಮುಖಾಂತರ ಮಾಡಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಆ ವಿಷಯದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಕೆಲವು ಜನ ಸದಸ್ಯರು ರೈತರಿಗೆ ಕೊಟ್ಟ ಸಾಲವನ್ನು ರಿಕವರಿ ಮಾಡುವ ಬಗ್ಗೆ ಅದರಲ್ಲೂ ನೂರಕ್ಕೆ ನೂರರಷ್ಟು ವಸೂಲು ಮಾಡುವ ಹಾಗೆ ಕೆಲವಾರು ಸಲಹೆಗಳನ್ನು ಮಾಡಿದರು. ಈ ಸಂದರ್ಭದಲ್ಲಿ ನಾನು ಈ ಸಭೆಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಕೆಲವು ಜನರು ಉದ್ದೇಶ ಪೂರ್ವಕವಾಗಿಯೇ ಸಹಕಾರ ಸಂಘಗಳ ಮುಖಾಂತರ ಸಾಲ ತೆಗೆದುಕೊಂಡು ಅದನ್ನು ಕೊಡದೆಯೇ ಸಹಕಾರ ಸಂಘಗಳಿಗೆ ಇಲ್ಲದಸಲ್ಲದ ಅಡ್ಡಿ ಆತಂಕಗಳನ್ನು ತಂದೊಡ್ಡಿ ಒಂದು ಕೆಟ್ಟ ಪರಿಸ್ಥಿತಿಯನ್ನು ಕಲ್ಪಿಸಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಸದಸ್ಯರು ಕೆಲವರು ಹೇಳಿದ ಹಾಗೆ ಇದು ಬಹಳ ಪವಿತ್ರವಾದ ಕೆಲಸ. ಅದರಲ್ಲಿ ಯಾವ ತರಹ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಸಾರ್ವಜನಿಕರಿಗೆ ಹೆಚ್ಚಿನಮಟ್ಟಿಗೆ ಸಾಲದ ಸೌಲಭ್ಯ ದೊರೆಯಲಿ ಎಂಬ ನೀತಿಯನ್ನು ಹಾಕಿಕೊಂಡಿರುವಾಗ ಅಂತಹ ಒಂದು ಅಭಿಪ್ರಾಯಕ್ಕೆ ಯಾವ ರೀತಿಯ ಅಂದೋಳನವೂ ಸಹಕಾರ ಸಂಸ್ಥೆಗಳಿಗೆ ದೊರೆಯದಂತೆ ವ್ಯವಸ್ಥೆ ಮಾಡಬೇಕಾದುದು ಈಗಿನ ಸಂದರ್ಭದಲ್ಲಿ ಅತ್ಯಗತ್ಯವಾದುದು. ಆ ಸಂಸ್ಥೆಗಳಲ್ಲಿ ಯಾರನ್ನು ಒಳಗೆ ಬಿಡಬೇಕು, ಯಾರನ್ನು ಒಳಗೆ ಬಿಡಬಾರದು ಎಂಬ ಬಗ್ಗೆ ಕಠಿಣಾಜ್ಞೆಯನ್ನು ಹಾಕುವುದಕ್ಕೆ ಖಂಡಿತವಾಗಿ ಹಾಕುವುದಕ್ಕಾಗುವುದಿಲ್ಲ. ಆ ಭರವಸೆಯನ್ನು ಬಿಡಬೇಕಾಗಿದೆ. ಏಕೆಂದರೆ ಯಾರೇ ಆಗಲೀ ಅವರು ಒಂದು ಭ್ರಮಣೆಯನ್ನು ಇಟ್ಟುಕೊಂಡು ಯಾವುದಾದರೂ ಒಂದು ರೀತಿಯಲ್ಲಿ ಸ್ವಾರ್ಥವನ್ನು ಇಟ್ಟುಕೊಂಡು ಈ ಸಂಘ ಸಂಸ್ಥೆಗಳಿಗೆ ಸೇರುತ್ತಾರೆ. ಅದರಿಂದ ನಮಗೆ ಯಾವ ರೀತಿಯಲ್ಲೂ ಉಪಯೋಗವಿಲ್ಲ. ಆದ್ದರಿಂದ ಈ ಸಹಕಾರ ಸಂಸ್ಥೆಗಳಲ್ಲಿ ಕೆಲವು ಕಡೆ ವೆಸ್ಟೆಡ್ ಇಂಟರೆಸ್ಟ್ ಎಂದೇನು ಹೇಳುತ್ತಾರೋ ಅದು ಕೆಲವು ಕಡೆ ಬಂದಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ಹೋಗಬೇಕಾದರೆ ಎಲ್ಲಾ ಸಹಕಾರ ಸಂಸ್ಥೆಗಳ ಸದಸ್ಯರು ಬಹಳ ಜಾಗರೂಕರಾಗಿರಬೇಕು. ಅಂತಹ ವೆಸ್ಟೆಡ್ ಇಂಟರೆಸ್ಟ್‌ಗಳಿಗೆ ಈ ಸಂಸ್ಥೆಗಳಲ್ಲಿ ಆಸ್ಪದ ಕೊಡಬಾರದು. ಆದ್ದರಿಂದ ಸಹಕಾರ ಸಂಸ್ಥೆಗಳ ಮುಖಾಂತರ ರೈತರಿಗೆ ಕೊಟ್ಟ ಸಾಲ ವಾಪಸ್ಸು ಪೂರ್ತಿ ಪಡೆಯದೇ ಇದ್ದರೆ ಸಹಕಾರಿ ಆಂದೋಳನ ಬಹಳ ಕುಂಠಿತವಾಗುತ್ತದೆ ಆದ್ದರಿಂದ ನಮ್ಮಲ್ಲಿ ಎಷ್ಟೋ ವಿಶಾಲವಾದ ಮತ್ತು ನೈಸರ್ಗಿಕವಾದ ಸಮಸ್ಯೆಗಳು ಇರುತ್ತವೆ. ಅನೇಕ ನಿಯಮಗಳನ್ನು ಸಡಿಲಮಾಡಿದ್ದೇವೆ. ಎಂತಹ ಪ್ರಸಂಗ ಬಂದರೂ ನೂರಕ್ಕೆ ನೂರರಷ್ಟು ರೈತರಿಗೆ ಕೊಟ್ಟ ಸಾಲವನ್ನು ವಸೂಲು ಮಾಡತಕ್ಕ ಭರವಸೆ ನಮಗಿದೆ.

ಇನ್ನು ಸ್ಟೇಟ್ ರಿಲೀಫ್ ಮತ್ತು ಗ್ಯಾರಂಟಿ ಫಂಡ್ ಮಾಡಬೇಕೆಂದು ಶ್ರೀಮಾನ್ ಎ. ಎಸ್. ಪಾಟೀಲ್ ಅವರು ಹೇಳಿದರು. ಈಗಾಗಲೇ ಸರ್ಕಾರದವರು ಆ ಬಾಬಿಗೆ ನಾಲ್ಕು ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಅದನ್ನು ಉಪಯೋಗ ಮಾಡುವ ಪ್ರಸಂಗ ಬಾರದೇಇದ್ದುದರಿಂದ ಅದು ಇದುವರೆಗೂ ಉಪಯೋಗವಾಗಲಿಲ್ಲ.

ಇನ್ನು ಅನೇಕ ಸಹಕಾರಿ ಸಂಸ್ಥೆಗಳಲ್ಲಿ ಬಹಳ ಅಪ್ರಾಮಾಣಿಕತೆ ನಡೆಯುತ್ತಿದೆ. ಅಲ್ಲಿ ದುಡ್ಡನ್ನು ತಿಂದು ಹಾಕಿದವರ ಮೇಲೆ ಸರ್ಕಾರದವರು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದರೂ ಆ ರೀತಿ ತೆಗೆದುಕೊಳ್ಳುತ್ತಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ನಾನು ಆಗಲೇ ಹೇಳಿದಹಾಗೆ ಅನೇಕ ರೀತಿಯಲ್ಲಿ ಜನರು ಸಹಕಾರೀ ಸಂಸ್ಥೆಗಳಲ್ಲಿರುತ್ತಾರೆ. ಕೆಲವು ಪ್ರಸಂಗಗಳಲ್ಲಿ ಅಂತಹ ಸಮಸ್ಯೆಗಳು ನಡೆಯುತ್ತವೆಂಬುದಾಗಿ ನಾನು ಈ ಸಭೆಯಮುಂದೆ ಖಂಡ ತುಂಡವಾಗಿ ಹೇಳಲಿಕ್ಕೆ ಬಯಸುತ್ತೇನೆ. ಯಾವುದೇ ಸಹಕಾರ ಸಂಘದಲ್ಲಾಗಲೀ ಅಥವಾ ಯಾವುದೇ ಸಹಕಾರೀ ಸಂಸ್ಥೆಯಲ್ಲಾಗಲೀ ಇಂತಹ ಅಪ್ರಾಮಾಣಿಕತೆ ನಡೆದಿದೆ. ಸಾರ್ವಜನಿಕರ ಸ್ವತ್ತನ್ನು ಕೆಲವಾರು ವ್ಯಕ್ತಿಗಳು ಸೇರಿಕೊಂಡು ಅಲ್ಲಿ ತಿಂದುಹಾಕುತ್ತಿದ್ದಾರೆ. ಇಷ್ಟಬಂದಹಾಗೆ ಆಡಳಿತವನ್ನು ನಡೆಸುತ್ತಿದ್ದಾರೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದರೆ ಬಹಳ ಉಗ್ರವಾದ ಕ್ರಮವನ್ನು ಅಂತಹವರ ಮೇಲೆ ಮಾನಮೋಹಾಪೇಕ್ಷೆಗಳಿಗೆ ಒಳಗಾಗದೆ ತೆಗೆದುಕೊಳ್ಳುತ್ತೇವೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಪಾಂಡವಪುರದ ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ ಮಾನ್ಯಸದಸ್ಯರೊಬ್ಬರು ಅಲ್ಲಿರತಕ್ಕ ಲೆಖ್ಖಪತ್ರಗಳು ಸರಿಯಾಗಿ ಆಡಿಟ್ ಆಗಿಲ್ಲ. ಅಲ್ಲಿ ಕೂಡ ಕೊಂಚಮಟ್ಟಿಗೆ ಅಪ್ರಮಾಣಿಕತೆ ನಡೆದಿದೆ ಎಂಬುದಾಗಿ ಹೇಳಿದರು. ಈಗ ನನ್ನ ಮುಂದಿರುವ ಮಾಹಿತಿಯ ಮೇಲೆ ಈ ವಿಷಯದಲ್ಲಿ ತಿಳಿಸಬೇಕಾದರೆ 1960-61 ನೇ ಸಾಲಿನವರೆಗೂ ಎಲ್ಲಾ ಲೆಖ್ಖ ಪತ್ರಗಳೂ ಆಡಿಟ್ ಆಗಿವೆ. ಕೆಲವೊಂದು ಸಣ್ಣ ಪುಟ್ಟ ಕೆಲಸ ಕಾರ್ಯಗಳು ಇಲ್ಲಿ ತಡೆಯಾಗಿರಬಹುದು. ಅಂತಹ ದೊಡ್ಡಪ್ರಮಾದ ನಡೆದಿದ್ದೇನೂ ಕಂಡು ಬರಲಿಲ್ಲ. ಈ ಆಡಿಟ್ ಮಾಡುವ ಬಗ್ಗೆ ನಾನು ಸೂಚನಾರೂಪವಾಗಿ ಒಂದು ಮಾತನ್ನು ಹೇಳುತ್ತೇನೆ. ಇಂದು ಸಹಕಾರಿ ಖಾತೆಯಲ್ಲಿ ಯಾವ ಒಂದು ಪತ್ರ ಆಡಿಟ್ ವಿಷಯವಾಗಿ ಇದೆಯೋ ಅದನ್ನು ಸರ್ಕಾರದವರು ಪುನರಾಲೋಚಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಸಹಕಾರೀ ಸಂಸ್ಥೆಯಲ್ಲಿ ಹಣದ ವ್ಯವಹಾರ ಮತ್ತು ಕಾಗದ ಪತ್ರಗಳ ವ್ಯವಹಾರ ಪ್ರಾಮಾಣಿಕವಾಗಿ ಮತ್ತು ಸರಿಯಾಗಿ ನಡೆಯಬೇಕು ಅದರಲ್ಲೂ ಈ ಸಹಕಾರೀ ಸಂಸ್ಥೆಗಳ ಬೆಳವಣಿಗೆಗೆ ಏನೇನು ಅವಶ್ಯಕತೆ ಇದೆಯೋ ಅವೆಲ್ಲವನ್ನೂ ಮತ್ತು ಸಹಕಾರದ ಸಂಘದ ಅಭಿಲಾಷೆಯನ್ನು ಈಡೇರಿಸುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಮಾಡುತ್ತಾರೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳ ಬಯಸುತ್ತೇನೆ.

ಇನ್ನು ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಕೆಲವು ಉಪಯುಕ್ತವಾದ ಸೂಚನೆಗಳನ್ನು ಮಾಡಿದ್ದಾರೆ. ಎಲ್ಲಕ್ಕೂ ಉತ್ತರಕೊಡುವುದಕ್ಕೆ ಕಾಲಾವಕಾಶ ಸಾಕಾಗುವುದಿಲ್ಲ. ಇನ್ನು ಕೆಲವು ಮಂತ್ರಿಗಳು

ಮಾತನಾಡುವವರಿದ್ದಾರೆ. ಗ್ರೇಡಿಂಗ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗಾಗಲೇ ಹತ್ತಿಗ್ರೇಡಿಂಗ್ ವಿಷಯದಲ್ಲಿ ಸೂಪರ್‌ವೈಜ್ ಮಾಡುವುದಕ್ಕೆ ಮೂರು ಯೂನಿಟ್ಟುಗಳನ್ನು ಸ್ಥಾಪನೆ ಮಾಡಿದ್ದೇವೆ. ಇದಕ್ಕೂ ಹೆಚ್ಚು ಅವಶ್ಯಕತೆ ಇದ್ದರೆ ಅದನ್ನೂ ಮಾಡುವುದಕ್ಕೆ ಸಿದ್ಧರಿದ್ದೇವೆ. ಸುಮಾರು ಹದಿನೈದು ದಿವಸಗಳಲ್ಲಿ ಅದನ್ನು ಮಂಜೂರುಮಾಡಿ ಕೊಡುತ್ತೇವೆಂದು ಹೇಳುತ್ತೇನೆ.

ಕೊನೆಯದಾಗಿ ಮತ್ತೊಂದು ಸೂಚನೆ ಬಂದಿತ್ತು. ಅದಕ್ಕೆ ಉತ್ತರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದೇನೆಂದರೆ ಈಗ ಹೊಸದಾಗಿ ನಮ್ಮ ಕರ್ನಾಟಕ ರಾಜ್ಯವಾದ ಮೇಲೆ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಹ ಕಾಯಿದೆಗಳು ಇದ್ದುದನ್ನೆಲ್ಲಾ ಒಂದುಗೂಡಿಸಿ ಒಂದು ಕಾಯಿದೆ ಈಗ ನಮ್ಮ ಮುಂದೆ ಬಂದಿದೆ. ಈ ಕಾಯಿದೆ ಜಾರಿಬಂದು ಕಳೆದ ಸುಮಾರು ಒಂದು ಒಂದೂವರೆ ವರ್ಷಗಳ ಅವಧಿಯಲ್ಲಿ ಕೆಲವೊಂದು ಬದಲಾವಣೆಗಳು ಆಗಬೇಕು ಎಂಬುದಾಗಿ ಕೆಲವು ಸದಸ್ಯರು ಅಭಿಪ್ರಾಯ ಪಟ್ಟಿದ್ದಾರೆ. ಸರ್ಕಾರ ಇದನ್ನು ಪೂರ್ಣವಾಗಿ ಗಮನಿಸುತ್ತದೆ ಎಂದು ನಾನು ಹೇಳುತ್ತೇನೆ. ಅದರಂತೆಯೇ ಏಕೀಕರಣವಾಗಿ ಈಗ್ಗೆ ಐದಾರು ವರ್ಷಗಳಾದರೂ ಕೆಲವೊಂದು ರೂಲ್ಸ್‌ಗಳಲ್ಲಿ ಇನ್ನೂ ಏಕರೂಪತೆ ಬಂದಿಲ್ಲ. ಅವುಗಳಲ್ಲೆಲ್ಲಾ ಏಕರೂಪತೆ ಬರಬೇಕೆಂದು ತಾವು ಸೂಚನೆ ಮಾಡಿರುವುದರಿಂದ ಕೇವಲ ಇನ್ನು ಒಂದೆರಡು ತಿಂಗಳುಗಳಲ್ಲಿ ತರುತ್ತೇವೆಂದು ನಾನು ಸದಸ್ಯರೆಲ್ಲರಿಗೂ ಆಶ್ವಾಸನೆಯನ್ನು ಕೊಡುತ್ತೇನೆ.

ಇನ್ನು ಟ್ರೈನಿಂಗ್ ವಿಷಯದಲ್ಲಿ ಕೋ-ಆಪರೇಟಿವ್ ಯೂನಿಯನ್ನನ್ನು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರದವರಿಗೆ ಇಲ್ಲವಲ್ಲಾ ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಹೇಳಿದರು. ಶಿಕ್ಷಣ ಪ್ರಚಾರ ವಿಷಯಗಳ ಬಗ್ಗೆ ಕೂಡಲೆ ಕ್ರಮ ಕೈಗೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕೆ ಪೂರ್ಣವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಈಗಾಗಲೇ ಎಲ್ಲೆಲ್ಲಿ ಜಿಲ್ಲಾ ಸಂಸ್ಥೆಗಳು ಕೆಲಸ ಮಾಡುತ್ತಿವೆಯೋ ಅಲ್ಲಿಂದ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಶಿಕ್ಷಣಕೊಡುವ ಏರ್ಪಾಡು ಆಗಿದೆ. ಇದನ್ನು ಇನ್ನೂ ತೀವ್ರವಾಗಿ ನಡೆಸಲಿಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಹೇಳುತ್ತೇನೆ.

ಕೊನೆಯದಾಗಿ, ಮಾನ್ಯಸದಸ್ಯರು ಮಾಡಿದಂತಹ ಸೂಚನೆಗಳಿಗೆ ಮತ್ತೊಂದು ಸಾರಿ ಅವರನ್ನು ಅಭಿನಂದಿಸುತ್ತೇನೆ. ಈ ಸಹಕಾರಿ ಆಂದೋಳನ ನಮ್ಮ ರಾಜ್ಯದಲ್ಲಿ ಒಂದು ಆದರ್ಶ ಪ್ರಾಯವಾಗಿ ನಡೆಯಬೇಕೆಂಬುದೇ ನಮ್ಮೆಲ್ಲರ ಉದ್ದೇಶ. ಇಂದು ನಮ್ಮ ಜೀವನಕ್ಷೇತ್ರದಲ್ಲಿ ಸಹಕಾರ ಎಲ್ಲೆಲ್ಲೂ ವ್ಯಾಪಿಸಿ ಈ ಮೂರನೆಯ ಪಾಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಪ್ರತಿಯೊಂದು ಹಳ್ಳಿಯಲ್ಲೂ ಸಾಮಾನ್ಯವಾಗಿ ಎಲ್ಲಾ ವ್ಯವಹಾರಗಳೂ ಸಹಕಾರೀ ಪದ್ಧತಿಯ ಮೇಲೆ ಸಹಕಾರೀ ಚೌಕಟ್ಟಿನಲ್ಲಿ ನಡೆಯಬೇಕೆಂಬುದೇ ನಮ್ಮ ಗುರಿಯಾಗಿದೆ. ಆ ಗುರಿಯನ್ನು ಸಾಧಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದುಕೊಳ್ಳಲು ಸರ್ಕಾರದವರು ಸಿದ್ಧವಾಗಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಸಹಕಾರ ಸಂಘಗಳ ಆಡಳಿತದಲ್ಲಿ ಏನಾದರೂ ತಪ್ಪುಗಳು ಅಥವಾ ಕೊಂದರೆ ಇದ್ದರೆ ಅದನ್ನು ಸರ್ಕಾರದವರ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

7-30. P.M.

ಈ ಪವಿತ್ರವಾದ ಸಹಕಾರ ಆಂದೋಳನವನ್ನು ಆದರ್ಶಪ್ರಾಯ ಮಾಡಲು, ಅದರಲ್ಲೂ ವೆಸ್ಟೆಡ್ ಇಂಟರೆಸ್ಟ್ ಇರುವವರಿಗೆ ಆಶ್ರಯವೀಯದ ಹಾಗೆ ಇದನ್ನು ನಡೆಸುವ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. D. JATTI (Minister for Finance).—Sir, some of the Hon'ble members pointed out that there is delay in the payment of pensions. It is true to a certain extent. Sir, this is because after the formation of the New Mysore State, it was not possible for Government to get all the statistical information from the erstwhile States. This obviously led to some difficulty in disposing of the pension cases early. Recently, Government have appointed a Special Officer to deal with this matter and dispose of these cases. The latest position is, cases pending for over 5 years have been disposed of. Cases pending for over three years are also disposed of. There are only six cases pending final disposal. Cases within three years will be decided as early as possible and according to my calculation, Government will require six months more to finally dispose of these cases. Special arrangement has been made by Government to settle pension claims of the officers who will retire immediately. The pension papers will be kept ready six months earlier to the date of retirement. So, nobody need have any difficulty in this matter. Sir, that was the only point raised concerning my department and I do not think it is necessary for me to say anything more.

Mr. SPEAKER.—Now there is a little time; if any Hon'ble Member wants any clarification, he may ask.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಪ್ಲಾಂಟೇಷನ್‌ನಲ್ಲಿರತಕ್ಕ ಕೂಲಿಗಾರರಿಗೆ ಮನೆಗಳನ್ನು ಕಟ್ಟಿಸಿ ಕೊಡಲು, ಪ್ಲಾನ್‌ಟೇಷನ್ ಮಾಲಿಕರನ್ನು ಇಷ್ಟೇ ವರ್ಷಗಳಲ್ಲಿ ಆ ಕೂಲಿಗಾರರಿಗೆಲ್ಲಾ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಸರ್ಕಾರದವರು ಕಡ್ಡಾಯ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಕಾನೂನು ರೀತ್ಯಾ ಆ ರೀತಿ ಕಡ್ಡಾಯ ಮಾಡುವುದಕ್ಕೆ ಸಾಧ್ಯವಿದೆ. ಆದರೆ ಒಂದೆರಡು ವರ್ಷಗಳಲ್ಲಿಯೇ ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕಡ್ಡಾಯ ಮಾಡುವುದಕ್ಕೆ ಆಗುವುದಿಲ್ಲ. ಫೇಜ್ಡ್ ಪ್ರೋಗ್ರಾಮ್ ಪ್ರಕಾರ ಆ ರೀತಿ ಮಾಡುವುದು ಇದೆ. ಕೆಲವಾರು ವರ್ಷಗಳಲ್ಲಿ ಪ್ಲಾಂಟೇಷನ್ ಮಾಲೀಕರು ಕೂಲಿಗಾರರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಾರೆ. ಈಗ ಅವರು ಆ ರೀತಿ ಮಾಡುತ್ತಿದ್ದಾರೆ.

Sri K. S. SURYANARAYANA RAO (Mysore City).—In regard to the Credit Ma keting Societies, the Minister said that efforts are being made for the sale of produce of the agriculturists that are given loan through these societies. How far and to what extent it has paid dividends ?

Sri RAMAKRISHNA HEGDE.—Sir, when the credit is advanced to the agriculturists, it is insisted upon that they should sell their agricultural produce through the Marketing Societies I am not in a position to produce any facts and figures to show what dividends it has paid.

ಶ್ರೀ ಬಿ. ಹುಚ್ಚೇಗೌಡ.—ಮಾನ್ಯ ಮಂತ್ರಿಗಳು ಎಲ್ಲಾ ಸೊಸೈಟಿಗಳೂ ಸರಿಯಾಗಿ ನಡೆಯುತ್ತಿವೆ ಎಂದು ಹೇಳಿದರು. ಈಗ ಕೆಲವು ಸೊಸೈಟಿಗಳಲ್ಲಿ ಆರೇಳು ವರ್ಷಗಳಿಂದ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ. ಡೈರೆಕ್ಟರುಗಳ ಚುನಾವಣೆ ಮಾಡಿಲ್ಲ. ಇಂಥವುಗಳನ್ನು ಯಾವ ರೀತಿ ಪರಿಹಾರ ಮಾಡುತ್ತೀರಿ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಲ್ಲಾ ಸೊಸೈಟಿಗಳೂ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಾನು ಹೇಳಲಿಲ್ಲ. ಕೆಲವು ಕಡೆ ಅಂಥಾ ತೊಂದರೆಗಳು ಇದ್ದು ಅದನ್ನು ಸರ್ಕಾರದ ಗಮನಕ್ಕೆ ತಂದಾಗ ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈಗ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ಸೊಸೈಟಿಗಳಲ್ಲಿ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ, ಲೆಕ್ಕ ಪತ್ರ ಆಡಿಟ್ ಆಗಿಲ್ಲ, ಕೋ-ಆಪರೇಟೀವ್ ಆಕ್ಟ್ ಪ್ರಕಾರ ಅದು ಪ್ರತಿ ವರ್ಷವೂ ನಡೆಯಬೇಕಾಗಿತ್ತು. ಆದ್ದರಿಂದ ಅಂಥಾ ಸೊಸೈಟಿಗಳ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಂಥಾ ನಿದರ್ಶನಗಳನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ತಕ್ಷಣ ಅದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸೊಸೈಟಿಯವರು ರೈತರಿಗೆ ಕೊಟ್ಟ ಸಾಲಗಳನ್ನು ವಸೂಲು ಮಾಡುವ ವಿಷಯದಲ್ಲಿ, ಫಸಲು ಆಗದೆ ಇರುವ ಕಡೆ ರೈತರಿಗೆ ರಿಯಾಯಿತಿಯನ್ನು ಕೊಡುತ್ತಿದ್ದೇವೆಂದು ಹೇಳಿದರು. ಹಾಗಾದರೆ ಬೆಳೆಗಳು ಆಗದೆ ಅಭಾವ ಉಂಟಾಗಿರುವ ಪ್ರದೇಶಗಳಲ್ಲಿ ಸರ್ಕಾರದವರು ಎಷ್ಟರಮಟ್ಟಿಗೆ ರಿಯಾಯಿತಿಯನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಳೆದ ವರ್ಷ ಅನೇಕ ಕಡೆ ಅತಿ ವೃಷ್ಟಿಯಿಂದ ಪ್ರವಾಹ ಬಂದು ಬೆಳೆಗಳೆಲ್ಲಾ ಹಾಳಾಗಿ ಬೆಳೆಗಳು ಜನಗಳ ಕೈಸೇರಲಿಲ್ಲ. ಅಂಥಾ ಸಂದರ್ಭದಲ್ಲಿ ಸರ್ಕಾರದವರು ಅನೇಕ ಕಡೆ ಕಂದಾಯವನ್ನು ಸಸ್‌ಪೆಂಡ್ ಮಾಡಿದ್ದಾರೆ. ಮತ್ತು ಸಹಕಾರ ಸಂಘಗಳಲ್ಲಿ ರೈತರು ಸಾಲ ತೆಗೆದುಕೊಂಡ ಹಣದಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ರಿಕವರಿಯನ್ನು ಇಕ್ಸಿಸ್ಟ್ ಮಾಡಕೂಡದೆಂದು ಸರ್ಕಾರದವರು ತಿಳಿಸಿದ್ದಾರೆ.

Sri A. KRISHNA SHETTY.—I want to know whether the Government is going to frame any legislation for national festival holidays as paid holidays ?

Sri B. D. JATTI.—There is no proposal for the present before this Government.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮಾನ್ಯ ಮಂತ್ರಿಗಳು ಒಂದು ಜೀಪನ್ನು ತೆಗೆದುಕೊಂಡು ನನ್ನ ಜೊತೆಯಲ್ಲಿ ತುಮಕೂರು ಜಿಲ್ಲೆಯವರೆಗೆ ಬಂದರೆ ಅಲ್ಲಿ ಯಾವ ಯಾವ ಸೊಸೈಟಿಯಲ್ಲಿ ಏನೇನು ಅನ್ಯಾಯ ನಡೆದಿದೆ, ಎಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ನಾನು ತೋರಿಸಿಕೊಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿತಕ್ಕ ಹರಳೂರು ಸೊಸೈಟಿಯಲ್ಲಿ ಎಪ್ಪತ್ತು-ಎಂಬತ್ತು ಸಾವಿರ ರೂಪಾಯಿಗಳ ದುರುಪಯೋಗ ನಡೆದಿದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಶಿಕ್ಷೆ ಮಾಡಬೇಕಾದರೆ ಅದಕ್ಕೆ ಒಂದು ಕ್ರಮ ಇದೆ. ಈಗ ಅಪರತಪರ ಎಂದರೆ ಮಿಸ್ ಅಪ್ರೋಪ್ರಿಯೇಷನ್ ಆದ ಸಂದರ್ಭದಲ್ಲಿ ಮೂರು ತರಹ ವಿಚಾರಣೆ ಆಗಬೇಕಾಗುತ್ತದೆ. ಅದು ಯಾವುದೆಂದರೆ ಒಂದು ಆರ್ಬಿಟ್ರೇಷನ್, ಎರಡನೆಯದು ಸಿವಿಲ್ ಮತ್ತು ಮೂರನೆಯದು ಕ್ರಿಮಿನಲ್—ಈ ರೀತಿ ಎಲ್ಲಿ irregularities ಅಥವಾ misappropriation ಆಗಿದೆಯೋ ಅಲ್ಲಿ ಈ ಮೂರು ಕ್ರಮದಿಂದಲೂ ವಿಚಾರಣೆಮಾಡಿ ಶಿಕ್ಷಿಸಲಾಗುವುದು.

Sri S. RAJAGOPAL.—The Minister for Labour was kind enough to say that the question of merging the D.A. with pay as well as making the temporary workers permanent, is under consideration. May I know how long will it take for Government to consider this question and take a decision thereon.

Sri D. DEVARAJ URS.—As I have already pointed out, it would be done as expeditiously as possible.

Sri SANJEEVANATHA AIKALA (Suratkal).—You have not mentioned anything about the pilot projects in co-operative farming. The House would be obliged if you just give an idea as to how many pilot projects have been started, how they are working and all that.

Sri RAMAKRISHNA HEGDE.—In the course of my reply I mentioned it. It is not possible within the time limit at my disposal to reply to all the points raised in the course of the debate. The pilot project in co-operative farming is in the initial stage. We have to watch and see what progress we can make in these projects.

Sri B. V. MAGAVI.—The Minister concerned did not clarify the position regarding the supply of zinc sheets to the flood affected areas.

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರವಾಹದ ಹಾವಳಿಯಿಂದ, ಹಾವೇರಿ ತಾಲ್ಲೂಕಿನಲ್ಲಿ ಬಹಳ ಕಷ್ಟವಾಯಿತು. ಆ ಸಂದರ್ಭದಲ್ಲಿ ಸರ್ಕಾರದವರು ಬಹಳ ಉದಾರವಾಗಿ ಹಣ ಖರ್ಚುಮಾಡಿ ಸಹಾಯ ಮಾಡುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡಿದ್ದರು. ಅಲ್ಲಿ ಇಪ್ಪತ್ತೊಂದ ಸಾವಿರ ಜಿಂಕ್ ಷೀಟುಗಳನ್ನು ಹಂಚಲಾಗಿದೆ. ಇನ್ನೂ ಸ್ವಲ್ಪ ಬೇಕು ಎಂದು ಕೇಳಿದ್ದೇವೆ. ಬಹಳ ಅಭಾವವಿದೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಟ್ರೋಲರ್ ಅವರು ಬರೆಯುತ್ತಾರೆ. ಅವರು ಕೊಟ್ಟರೆ ಹಂಚಲು ಏರ್ಪಾಡು ಮಾಡುತ್ತೇವೆ.

Sri SANJEEVANATHA AIKALA.—At the end of last year of the Third Five Year Plan there would be a bad ground of nearly twelve million unemployed people—skilled, semi—skilled or unskilled, educated or uneducated. The Planning Commission has suggested to have intensive schemes in production enterprises. What are the steps taken by Government in this direction and what is the background of unemployed people in Mysore State ?

Sri D. DEVARAJ URS.—How can I clarify the point now ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—೪೦ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ದೇಶದಲ್ಲಿ ಇವೆ. ಅವಕ್ಕೆ ಬಂಡವಾಳ ಏನು, ಸರಿಯಾಗಿ ಕೆಲಸ ಮಾಡುತ್ತಿವೆಯೇ ಎಂದು ಕೇಳಿದೆ, ಅದಕ್ಕೆ ತಾವು ಉತ್ತರ ಕೊಡಲಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಪ್ರತ್ಯೇಕವಾಗಿ ಕೊಡುತ್ತೇನೆ. ಆಗಲೇ ಹೇಳಿದೆ ಈ ಕೋ-ಆಪರೇಟಿವ್ ಫಾರ್ಮಿಂಗ್ ಇನ್ನೂ ಪ್ರಾರಂಭದ ದಿಶೆಯಲ್ಲಿದೆ. ಈಗಲೇ ಅದು ಯಶಸ್ವಿಯಾಗಿದೆಯೋ ಇಲ್ಲವೋ ಎನ್ನುವ ಬಗ್ಗೆ ಜಡ್ಜ್‌ಮೆಂಟ್ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಮಾನ್ಯ ಮಂತ್ರಿಗಳು ಅವು ಇನ್ನೂ ಶೈಶವಾವಸ್ಥೆಯಲ್ಲಿ ಇವೆ ಎಂದು ಹೇಳಿದರು. ಮಾಗಡಿ ತಾಲ್ಲೂಕಿನಲ್ಲಿ ಬೂಕನಕೆರೆ, ಬಾಳೆಗೊಂದಿ ಇಲ್ಲೆಲ್ಲಾ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕೆಂದರೆ ತಾವು ರೈತರಿಗೆ ಸರ್ವೀಸ್ ಕೋ-ಆಪರೇಟಿವ್ಸ್ ಮೂಲಕ ಸಹಾಯ ಮಾಡಬೇಕೆಂದು ನನ್ನ ಸಲಹೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸರ್ವೀಸ್ ಕೋ-ಆಪರೇಟಿವ್ಸ್ ಮುಖಾಂತರ ಯಾವ ಸಹಾಯ ಬೇಕೋ ಅದನ್ನು ಕೊಡುತ್ತಾ ಇದ್ದೇವೆ. ರೈತರು ತಾವಾಗಿಯೇ ಬಂದು ಸಹಕಾರ ಪದ್ಧತಿ ಮೇಲೆ ಕೆಲಸ ಮಾಡುತ್ತೇವೆ ಎಂದರೆ ಪ್ರೋತ್ಸಾಹ ಕೊಡುವುದಕ್ಕೆ ಸರ್ಕಾರದವರಿಗೆ ಇಚ್ಛೆ ಇದೆ.

ಶ್ರೀ ಎಚ್. ಎ. ಕರಿಲಿಂಗಣ್ಣಾವರ್.—ಸೊಸೈಟಿಗಳ ಸಲುವಾಗಿ ಇರುವ ಕಟ್ಟಡದಲ್ಲಿ ಪ್ರೈಮರಿ ಶಾಲೆಗಳನ್ನು ನಡೆಸುತ್ತಾರೆ. ಅಲ್ಲಿ ಸಾಕಾದಷ್ಟು ಸ್ಥಳ ಇಲ್ಲ. ಆ ದೃಷ್ಟಿಯಿಂದ ಅದಕ್ಕೆ ಪ್ರತ್ಯೇಕ ಸ್ಥಳ ಇರಬೇಕೆಂದು ನನ್ನ ಅಭಿಪ್ರಾಯವಿದೆ. ತಮ್ಮ ಅಭಿಪ್ರಾಯವೇನು ?

Sri RAMAKRISHNA HEGDE.—That is with regard to the Education of children of labourers I do not think I need give any reply to this.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಿಷಯ ಚರ್ಚೆಗೆ ಬಂದಿರಲಿಲ್ಲ. ಪ್ರತಿ ವರ್ಷವೂ ಕೂಡ ಲಾರಿಗಳಿಂದ ಬಹಳ ಅನಾಹುತಗಳು ಆಗುತ್ತಾ ಇವೆ. ಆದ್ದರಿಂದ ಮೋಟಾರು ವಾಹನಗಳ ಮೇಲೆ ಟ್ಯಾಕ್ಸ್ ಜಾಸ್ತಿಮಾಡಿ, ಒಂದು ಪರಿಹಾರ ನಿಧಿ ಇಟ್ಟು, ಅನಾಹುತಕ್ಕೆ ತುತ್ತಾದವರಿಗೆ ಪರಿಹಾರ ಕೊಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಕೆ. ಪಿ ರೇವಣ್ಣಸಿದ್ಧಪ್ಪ.—ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತೇವೆ ಎಂದು ಹೇಳಿ ಜಮೀನು ಪಡೆದುಕೊಂಡು ಅದನ್ನು ಕೆಲವರೇ ಉಪಯೋಗಿಸುತ್ತ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಂಥ ನಿದರ್ಶನ ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ಎಂ. ಸಿದ್ಧಯ್ಯ.—ಮೊದಲು ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹೆಸರು ರಿಜಿಸ್ಟರ್ ಮಾಡಿಸುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಅಲ್ಲಿ ನೂರಾರು ಜನರು ಇರುತ್ತಾರೆ. ಅಲ್ಲಿರತಕ್ಕ ಜವಾನನ ಕೃಪಾಶ್ರಯಕ್ಕೆ ತುತ್ತಾಗಬೇಕಾಗಿದೆ. ಯಾವ ಇಲಾಖೆಗೆ ಆದರೂ ಎಂಪ್ಲಾಯ್‌ಮೆಂಟ್ ಇಲಾಖೆಯಲ್ಲಿ ಹೆಸರು ಕಡ್ಡಾಯಕವಾಗಬೇಕು. ರಿಜಿಸ್ಟರ್ ಮಾಡಿಸಿ ಆರು, ಎಂಟು ವರ್ಷಗಳಾದರೂ ಕೆಲಸ ಸಿಕ್ಕದೇ ಈಚೀಚೆಗೆ ರಿಜಿಸ್ಟರ್ ಆದವರಿಗೆ ಕೆಲಸ ಸಿಕ್ಕುವುದಾದರೆ ಅನೇಕ ಬಡ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಿರ್ದಿಷ್ಟವಾದ ಆರ್ಡರ್ ಕೊಟ್ಟು ಮೊದಲು ಯಾರು ರಿಜಿಸ್ಟರ್ ಮಾಡಿಸುತ್ತಾರೋ ಅವರಿಗೆ ಮೊದಲು ಕೆಲಸಕೊಡಬೇಕೆಂದು ಖಡಾ ಖಂಡಿತವಾಗಿ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳಿದಂತೆ ಮೊದಲು ರಿಜಿಸ್ಟರ್ ಮಾಡಿರತಕ್ಕವನನ್ನೇ ತೆಗೆದುಕೊಳ್ಳಬೇಕೆಂದು ಕಡ್ಡಾಯ ಮಾಡುವುದಕ್ಕೆ ಈಗಿರತಕ್ಕ ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಿಲ್ಲ. ಎರಡನೆಯದಾಗಿ ಹೆಸರು ರಿಜಿಸ್ಟರ್ ಮಾಡಿಸುವುದಕ್ಕೆ ಬಹಳ ತೊಂದರೆಗಳಿವೆ ಎಂದು ಹೇಳಿದರು. ಆ ರೀತಿ ನ್ಯೂನಾತಿರಿಕ್ತಗಳಿದ್ದರೆ ಅವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri S. RAJAGOPAL.—We have not been supplied with the up-to-date administration report of the Labour Department. After five years the administration report of the year 1957-58 is supplied. Will the Minister for Labour consider to supply the reports as early as possible so that we may be in a position to know the exact state of affairs of the administration?

Sri D. DEVARAJ URS.—That is a good suggestion and it will be considered.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಗಡಿಬಿಡಿಯಲ್ಲಿ ಎಸ್. ಪಿ. ಸಿ. ವಿಷಯವನ್ನೇ ಮರೆತಿರುವಂತೆ ಕಾಣುತ್ತದೆ. ಈ ಸ್ಪೋರ್ಟ್ಸ್‌ಪರ್‌ಚೇಸ್ ಕಮಿಟಿಯ ವಿಚಾರದಲ್ಲಿ ಜನ ಏನೇನೋ ಮಾತನಾಡಿಕೊಳ್ಳುತ್ತಿದ್ದಾರೆ. ಮಂತ್ರಿಗಳು ಅದಕ್ಕೆ ಗಮನ ಕೊಟ್ಟು ಸರಿಪಡಿಸಬೇಕು.

Sri D. DEVARAJ URS.—That is too general.

ಶ್ರೀ ಅಂದಾನಯ್ಯ (ಕುಣಿಗಲ್).—ಒಂದು ಗ್ರಾಮ ಪಂಚಾಯಿತಿಗೆ ಒಂದೇ ಸೊಸೈಟಿ ಇರಬೇಕೆಂದು ನಿಯಮವಿರುವಾಗ ಕೆಲವು ಕಡೆ ಎರಡಿವೆ. ಈ ವಿಚಾರದಲ್ಲಿ ಯಾವ ಉತ್ತರವನ್ನೂ ಮಂತ್ರಿಗಳು ಕೊಡಲಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ನಿಯಮ ಜಾರಿಗೆ ಬರುವುದಕ್ಕೆ ಮೊದಲೇ ಎರಡು ಇದ್ದುವೋ ಏನೋ ಗೊತ್ತಿಲ್ಲ. ಅಥವಾ ಒಂದು ಸೊಸೈಟಿ ಪ್ರಾರಂಭವಾಗಿ ಅದು defunct ಆಗಿದ್ದು; ಇನ್ನೊಂದು ಬಂದಿರಬಹುದು.

ಶ್ರೀ ಎಲ್. ಎ. ಕರಿಲಿಂಗಣ್ಣಾವರ್ (ಗೋಕಾಕ್).—ಗೋಕಾಕ ಮಿಲ್ ಕೂಲಿಗಾರರ ಮಕ್ಕಳ ವಿದ್ಯಾಭ್ಯಾಸದ ವ್ಯವಸ್ಥೆಯ ವಿಚಾರದಲ್ಲಿ ಉತ್ತರ ಕೊಡಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ಎರಡು ಸಂಸ್ಥೆಗಳಿವೆ. ಅವುಗಳಲ್ಲಿ ಒಂದು recognise ಆಗಿದೆ ಎಂದು ನಮಗೆ ಸಮಾಚಾರಬಂದಿದೆ. ಇದಕ್ಕಿಂತ ಹೆಚ್ಚು ಮಾಹಿತಿ ನನ್ನಲ್ಲಿಲ್ಲ.

ಅಲ್ಲಿ ಮಕ್ಕಳ ವಿದ್ಯಾಭ್ಯಾಸದ ಸಂಬಂಧವಾಗಿ ಯಾವುದೇ ಕೊರತೆಯಿದ್ದರೆ ವಿಚಾರ ಮಾಡುತ್ತೇವೆ. ಮಾಲೀಕರು ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದು ಗೊತ್ತಿಲ್ಲ. ಕಾನೂನು ಪ್ರಕಾರ ಮಾಡಬೇಕಾದ ಕೆಲಸವನ್ನು ಅವರು ಮಾಡದೆಯಿದ್ದರೆ, ಅದರಲ್ಲಿ ಏನಾದರೂ ಲೋಪದೋಷವಿದ್ದರೆ ತಕ್ಷಣ ಅದನ್ನು ಸರಿಮಾಡಲು ಕಾನೂನಿದೆ. ಅದರ ಪ್ರಕಾರ ಮಾಲೀಕರ ಜವಾಬ್ದಾರಿ ಏನಿದೆಯೋ ಅದನ್ನು ಅವರು ನಿರ್ವಹ ಮಾಡುವಂತೆ ಪ್ರಯತ್ನ ಮಾಡುತ್ತೇವೆ.

Sri SANJEEVANATHA AIKALA.—How far the industrial co-operative societies under the Khadi and Village Industries Scheme are compatible with service Co-operative Societies with regard to jurisdiction, functions, collection of share capital and working?

Sri RAMAKRISHNA HEGDE.—These two categories of societies are working in different spheres. I do not know how compatibility or incompatibility arises.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದೇ ತಾಲ್ಲೂಕಿನಲ್ಲಿ ಎರಡು ಒಂದೇ ತರದ ಸೊಸೈಟಿಗಳಾಗಿದ್ದರೆ ಅದಕ್ಕೇನು ಮಾಡುತ್ತೀರಿ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಕಾಯಿದೆ ಜಾರಿಗೆ ಬಂದಮೇಲೆ ಒಂದೇ ತಾಲ್ಲೂಕಿನಲ್ಲಿ ಇಂಥ ಎರಡು ಸೊಸೈಟಿಗಳು ಇದ್ದರೆ, ಅವುಗಳನ್ನು ಒಂದು ಮಾಡವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮನೆಗಳನ್ನು ಕಟ್ಟಿಸುವುದಕ್ಕೆ ಇಷ್ಟು ಹಣ ಕೊಟ್ಟಿದ್ದೇವೆಂದು ಸಹಕಾರ ಮಂತ್ರಿಗಳು ಹೇಳಿದರು; ಭದ್ರಾವತಿಯಲ್ಲಿ ಎಷ್ಟು ಕೊಟ್ಟಿದ್ದಾರೆ?

Sri RAMAKRISHNA HEGDE.—I am sorry, I cannot give that figure now.

ಶ್ರೀ ಬಿ. ಹುಚ್ಚೇಗೌಡ.—ಎರಡು ಸೊಸೈಟಿಗಳನ್ನು ಮಾಡಿರುವುದು ಕೆಲವರ ಪ್ರಭಾವದಿಂದಲ್ಲವೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾರ ಪ್ರಭಾವವೂ ಇಲ್ಲ.

Mr. SPEAKER.—I said that I would put the Demands to vote at 7-55 P.M. There does not seem to be any end at all to seek clarification. If I permit one Member there will be half a dozen other members who many also ask for a chance to Seek clarifications.

Before I put the demands to vote I must thank all the members for having given me the fullest co-operation to see that guillotine is not applied. I might have used a little hersh language. Please forgive me.

The question is:

"That the respective sums not exceeding the amounts shown in the list of demands circulated to the members be granted to defray the charges which will come in course of payment during the financial year ending 31st day of March 1963 in respect of demands Nos. 15, 4, 16, 14, 26, 27, 23, 34, 35, 36, 37, 39, 41, 40, 52, 53 and 54."

The motion was adopted.

(As directed by the Speaker, the Demands for grants which were adopted by the House, are reproduced below).

DEMAND No. 15.—MISCELLANEOUS DEPARTMENTS.

26. *Miscellaneous Departments.*

"That a sum not exceeding Rs. 78,12,800 be granted to the Government to defray the charges which will come in course of payment during the financial year for the period ending 31st day of March 1963, in respect of 'Miscellaneous Departments'."

DEMAND No. 4.—MOTOR VEHICLES ACTS—ADMINISTRATION.

11. *Taxes on Vehicles.*

"That a sum not exceeding Rs. 14,12,000 be granted to the Government to defray the charges which will come in course of payment during the financial year for the period ending 31st day of March 1963, in respect of 'Taxes on Vehicles'."

DEMAND No. 16.—SCIENTIFIC DEPARTMENTS.

27. *Scientific Departments.*

"That a sum not exceeding Rs. 17,30,000 be granted to the Government to defray the charges which will come in course of payment during the financial year for the period ending 31st day of March 1963, in respect of 'Scientific Departments'."

DEMAND No. 14.—SUPPLIES AND DISPOSALS.

25. *Supplies and Disposals.*

"That a sum not exceeding Rs. 23,38,100 be granted to the Government to defray the charges which will come in course of payment during the financial year for the period ending 31st day of March 1963, in respect of 'Supplies and Disposals'."

DEMAND No. 26.—LABOUR AND EMPLOYMENT.

38. *Labour and Employment.*

"That a sum not exceeding Rs. 70,56,200 be granted to the Government to defray the charges which will come in course of payment during the financial year for the period ending 31st day of March 1963, in respect of 'Labour and Employment'."

DEMAND No. 27.—MISCELLANEOUS SOCIAL AND DEVELOPMENTAL ORGANISATIONS.

39. *Miscellaneous Social and Developmental Organisations.*

"That a sum not exceeding Rs. 37,48,000 be granted to the Government to defray the charges which will come in course of payment during the financial year for the period ending 31st day of March 1963, in respect of 'Miscellaneous Social and Development Organisations'."

DEMAND No. 23.—CO-OPERATION.

34. *Co-operation.*

"That a sum not exceeding Rs. 92,31,500 be granted to the Government to defray the charges which will come in course of payment during the financial year for the period ending 31st day of March 1963, in respect of 'Co-operation'."

DEMAND No. 34.—PENSIONS AND OTHER RETIREMENT BENEFITS.

65. *Pensions and other Retirement Benefits.*

"That a sum not exceeding Rs. 1,95,62,000 be granted to the Government to defray the charges which will come in course of payment during the financial year for the period ending 31st day of March 1963, in respect of 'Pensions and other Retirement Benefits'."

DEMAND NO. 35.—TERRITORIAL AND POLITICAL PENSIONS.

66. *Territorial and Political Pensions.*

"That a sum not exceeding Rs. 1,80,000 be granted to the Government to defray the charges which will come in course of payment during the financial year for the period ending 31st day of March 1963, in respect of 'Territorial and Political Pensions.'"

DEMAND NO. 36.—PRIVY PURSES AND ALLOWANCES.

67. *Privy Purses and Allowances of Indian Rulers.*

"That a sum not exceeding Rs. 32,000 be granted to the Government to defray the charges which will come in course of payment during the financial year for the period ending 31st day of March 1963, in respect of 'Privy Purses and Allowances of Indian Rulers'."

DEMAND NO. 37.—STATIONERY AND PRINTING.

68. *Stationery and Printing.*

"That a sum not exceeding Rs. 81,44,000 be granted to the Government to defray the charges which will come in course of payment during the financial year for the period ending 31st day of March 1963, in respect of 'Stationery and Printing'."

DEMAND NO. 39.—MISCELLANEOUS.

71. *Miscellaneous.*

"That a sum not exceeding Rs. 1,02,24,500 be granted to the Government to defray the charges which will come in course of payment during the financial year for the period ending 31st day of March 1963, in respect of 'Miscellaneous'."

DEMAND NO. 41.—MISCELLANEOUS CONTRIBUTIONS AND ASSIGNMENTS.

76. *Other Miscellaneous Contributions and Assignments.*

"That a sum not exceeding Rs. 65,88,000 be granted to the Government to defray the charges which will come in course of payment during the financial year for the period ending 31st day of March 1963, in respect of 'Other Miscellaneous Contributions and Assignments'."

DEMAND NO. 40.—COMMUTATION OF PENSIONS.

72. *Commutation of Pensions.*

"That a sum not exceeding Rs. 3,74,000 be granted to the Government to defray the charges which will come in course of payment during the Financial year for the period ending 31st day of March 1963, in respect of 'Commutation of Pensions'."

DEMAND NO. 52.—COMMUTED VALUE OF PENSIONS.

120. *Payments of Commuted Value of Pensions.*

"That a sum not exceeding Rs. 3,74,000 be granted to the Government to defray the charges which will come in course of payment during the financial year for the period ending 31st day of March 1963, in respect of 'Payments of Commuted value of Pensions'."

DEMAND NO. 53.—CAPITAL OUT-LAY ON SCHEMES OF GOVERNMENT TRADING.

124. *Capital Outlay on Schemes of Government Trading.*

"That a sum not exceeding Rs. 71,04,000 be granted to the Government to defray the charges which will come in course of payment during the financial year for the period ending 31st day of March 1963, in respect of 'Capital Outlay on Schemes of Government Trading'."

DEMAND No. 54.—ADVANCES AND LOANS.

Q. Loans and Advances by the State Governments.

"That a sum not exceeding Rs. 9,35,79,000 be granted to the Government to defray the charges which will come in course of payment during the financial year for the period ending 31st day of March 1963, in respect of 'Loans and Advances by the State Governments'."

Business of the House.

Mr. SPEAKER.—Before I adjourn the House I must advert to the point of order and the observation made on that. It was said that it was a point of suggestion and the suggestion made was criticised. Later when Sri B. L. Gowda said it was a point of order the Hon'ble member Sri Gopala Gowda said that it was a point of order.

Sri C. J. MUCKANNAPPA.—You have ruled it out.

Mr. SPEAKER.—I said that it was a point of procedure. I did not say so without considering the question. It is a question of discussion of Budget and the time factor is very important at the time when the Budget is under discussion. This is an extract from the proceedings of the Lok Sabha, page 3143.

"I suggest that Hon. Members may give a short statement of the particular views which they want the Government to take into consideration in respect of particular points in the report not exceeding say, about two printed pages. They might place them on the Table irrespective of the fact whether they get chances to speak or not and they might be taken as part of the proceedings. That will give every member an advantage of having his say to the Government but, the time limit for that will be definitely 6 P.M. on the 23rd evening and not beyond that. It is not as if members may go on sending their views later on. These are some of the things which I wanted to suggest. So far as the time-limit for speeches is concerned, I suggest a time-limit of fifteen minutes, which should in no case exceed twenty minutes..."

It goes on like that and that is so far as time limit is concerned. If I suggest that the Hon'ble Members will kindly take that I shall look into the matter and see whether I am wrong and also see that the House does not commit any wrong and I shall then suggest the procedure.

Now the House will adjourn and meet tomorrow at 8-30 A.M.

The House adjourned at Eight of the Clock to meet again at Thirty Minutes past Eight of the Clock on Saturday the 28th July 1962.